ಬೆಲೆ: ಎರಡು ಆಣೆ

ಸುಜಾತ್ಮರ ಮನೋರಂಗ
ಅನುವಾದಕರು:
ಶ್ರೀ. ರಾ. ರಾ. ದಿವಾಕರ
... ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಕರ್ಮವೀರ

ಸಂಪಾದಕರು: ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor: H. R. Purohit, M. A.

... ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨೧—೭—೧೯೪೭ —(ಸಂಚಿಕೆ ೦೩)—

ಮೂವರು ನರೇಂದ್ರರ ಮೂರು ಮಾರ್ಗಗಳು

ಸ್ವಾಯತ್ತಸಿದ್ಧಿ, ಸಚಿವಾಯತ್ತಸಿದ್ಧಿ, ಉಭಯಾಯತ್ತಸಿದ್ಧಿಗಳಾದ ಅರಸರು— ಹೈದರಾಬಾದು, ತಿರುವಾಂಕೂರುಗಳ ಅವಿನಯ— ಸಂಸ್ಥಾನದ ಪ್ರಜೆಗಳಲ್ಲಿ ಬ್ರಿಟಿಶರ ಅಪರಾಧ.

ನರೇಂದ್ರರಲ್ಲಿ ಹಲವು ಬಗೆಯವರಿದ್ದಾರೆಂದೂ ಮೂರು ಭಿನ್ನ ವರ್ಗಗಳಿಗೆ ಸೇರಿದ ಹೈದರಾಬಾದಿನ ನಿಜಾಮರು, ತಿರುವಾಂಕೂರಿನ ಅರಸರು ಮತ್ತು ಮೈಸೂರೊಡೆಯರಲ್ಲಿ ಮೂರನೆಯವರೊಬ್ಬರೇ ಘಟನಾ ಸಮಿತಿಗೆ ಸೇರಲು ನಿಶ್ಚಯಿಸಿ ಸನ್ಮಾರ್ಗಗಾಮಿಗಳಾಗಿರುವರೆಂದೂ ಸ್ವಚ್ಛಂದ ಕಾರಭಾರ ನಡೆಸುವ ನಿಜಾಮರು ಹಾಗೂ ಸರ್ ಸಿ. ಪಿ. ಅವರು ಜಿನ್ನಾರ ಕೃತಿಯೇ ವಿಚಿತ್ರವಾದಾವಲಂಬಿಗಳೆಂದೂ ಇದರ ಪರಿಣಾಮವಾಗಿ ಸಂಸ್ಥಾನದ ಪ್ರಜೆಗಳ ಹಕ್ಕುಗಳಿಗೆ ಧಕ್ಕೆಯುಂಟಾಗಿ ರಾಜನೀತಿಯು ವೇಶ್ಯಾನೀತಿಗೆ ಸದೃಶವಾಯಿತೆಂದೂ ಕನ್ನಡದ ಹೆಸರಾಂತ ಲೇಖಕರಾದ ಪಂ. ಮುಳಿಯ ತಿಮ್ಮಪ್ಪಯ್ಯನವರು ಘಂಟಾಘೋಷವಾಗಿ ಸಾರುತ್ತಾರೆ.

ಹೈದರಾಬಾದು ಬಡೋದೆ ಮೈಸೂರು ತಿರುವಾಂಕೂರುಗಳೆಂದರೆ ನಮ್ಮ ನರೇಂದ್ರ ವರ್ಗದೊಳಗೆ ಮೇಲುಪಟ್ಟಿನವುಗಳು. ಎರಡನೆಯದಾದ ಬಡೋದೆಯು ಆದಿಯಿಂದಲೇ ಘಟನಾ ಸಮಿತಿಗೆ ಸೇರಲು ಸಮ್ಮತಿಯಿತ್ತಿದೆ. ಮಾತ್ರವಲ್ಲ ಬೇಕಾದ ಸಲಕರಣೆಗಳನ್ನು ಪ್ರಜಾಪ್ರತಿನಿಧಿಗಳ ವ್ಯವಸ್ಥೆಯನ್ನೂ ಮಾಡುತ್ತಿದೆ. ಬಡೋದೆಯ ಈ ವಿನಯಶೀಲತೆ ಹಲವು ಚಿಕ್ಕ ಪುಟ್ಟ ನರೇಂದ್ರ ಮಂಡಲಿಗೆ ಆದಿಯಿಂದಲೂ ದಾರಿಗೂಡಲ ನಡುವಣ ಅದೊಂದು ಕೈ-ಕಂಬವೇ ಆಯಿತು ಎನ್ನಬಹುದು. ಕೆಲ ಮಂದಿ ನರೇಂದ್ರರು ಮನದಲ್ಲಿ ಬೆಳೆದು, ಮಾತನ್ನು ಸೆಳೆದು ಒಳಗೊಳಗೇ ಕೂರ್ಮಕ್ರೀಡೆಯಲ್ಲಿದ್ದಾರೆ. ಆದರೂ ಶ್ರೀ ಮುನ್ಶಿಯವರ ವೃದ್ಧವಾಕ್ಯವನ್ನಂಗೀಕರಿಸಿ ಹಲವು ಮಂಡಲಗಳ ಅರಸರು ಒಟ್ಟಾಗಿ ಘಟನಾ ಸಮಿತಿಯನ್ನೊಂದಲು ಸಿದ್ಧರಾಗಿದ್ದಾರೆ, ಎಂಬುದು ಆನಂದದ ಸಂಗತಿ. ಆದರೆ ಇತ್ತೀಚಿಗಿನ ಹೈದರಾಬಾದು ತಿರುವಾಂಕೂರುಗಳ ನಿರ್ಧಾರದಿಂದ ಬೇಸರವೂ ನಮ್ಮ ಕನ್ನಡ ನಾಡಾದ ಮೈಸೂರಿನ ಪರಾಂಬರಿಕೆಯು ಗುರಿವಿಡಿತದಿಂದ ಸಂತೋಷವೂ ಮಿಶ್ರವಾಗಿದೆ. ಮೂರರೊಳಗೂ ಸುಸಂಸ್ಕೃತರೆಂಬವರೂ ನ್ಯಾಯಶಾಸ್ತ್ರಪಾರಂಗತರೂ ಆದ ಅಮಾತ್ಯರಿರುವಲ್ಲಿ ಹೀಗೇಕಾಯಿತು? ಎಂಬ ಪ್ರಶ್ನೆ ತಾನಾಗಿ ತಲೆದೋರುತ್ತಿದೆ. ಒಂದೇ ಮಾತಿನಲ್ಲಿ ಅದಕ್ಕುತ್ತರವನ್ನಾಡುವದಕ್ಕಿಂತಲೂ ಆಯಾ ರಾಜಮಂಡಲಗಳ ರಾಜನೀತಿಯ ಧೋರಣಗಳನ್ನು ಸೂಚಿಸುವುದೇ ವಿನಯ ಮಾರ್ಗ. ಆಯಾ ಧೋರಣಗಳನ್ನು ಪರಿಭಾವಿಸಿದಲ್ಲಿ ಉತ್ತರವು ತಾನಾಗಿ ಮುಂದಿಟ್ಟಾಗಬಹುದು.

ನಮ್ಮ ಹಿಂದಿನ ರಾಜಕೀಯ ನೀತಿ

ನಮ್ಮ ಹಿಂದಿನ ರಾಜಕೀಯ ನೀತಿಕ್ರಮವನ್ನು ಪರಾಂಬರಿಸಿದಲ್ಲಿ 'ಸ್ವಾಯತ್ತ ಸಿದ್ಧಿ-ಸಚಿವಾಯತ್ತ ಸಿದ್ಧಿ-ಉಭಯಾಯತ್ತ ಸಿದ್ಧಿ—ಎಂಬ ಮೂರು ಬಗೆಯ ರಾಜಭೇದವನ್ನು ಕಾಣುತ್ತೇವೆ. ಒಳಗೊಳಗಿನ ಕವಲುಗಳಿಂದಾಗಿ ಇನ್ನೂ ಹಲವು ಭೇದಗಳನ್ನು ಕಾಣಬಹುದು. ಅಥವಾ ಕಲ್ಪಿಸಬಹುದು. ಆದರೂ ನಿಷ್ಕೃಷ್ಟ ಭೇದಗಳು ಈ ಮೂರೇ ಎನ್ನಬೇಕು. ಈ ಮೂರು ಲಕ್ಷಣಗಳಿಗೂ ಅಚ್ಚುಕಟ್ಟಾದ ಲಕ್ಷ್ಯಗಳನ್ನು ಕ್ರಮವಾಗಿ ಹೈದರಾಬಾದು-ತಿರುವಾಂಕೂರು-ಮೈಸೂರರಸರಲ್ಲಿ—ಅಲ್ಲನೆ ಅವರ ಇತ್ತೀಚಿಗಿನ ರಾಜ್ಯಭಾರಕ್ರಮ-ಘೋಷಣೆಗಳಲ್ಲಿ ಪರಾಂಬರಿಸುತ್ತೇವೆ. ಲಕ್ಷಣಗಳಿಗೆ ಸರಿಯಾದ ಲಕ್ಷ್ಯಗಳನ್ನೊದಗಿಸಿಕೊಳ್ಳಲು ನುರಿತ ಶಾಕ್ತಿಣಿಕರಿಗಾದರೂ ಬೇಕು ಸಾಕಾಗುತ್ತಿದೆ ಎಂಬುದನ್ನು ಬಲ್ಲವರೇ ಬಲ್ಲರು. ಹಾಗಿರುವಲ್ಲಿ ಬಡವನಿಗೆ ನಿಧಿ ದೊರಕಿಬಿಟ್ಟರೆ ಈ ಆಳಿಕೆಗಳ ಒಳಗಿನ ಗುಟ್ಟು ತಾನಾಗಿ ಪ್ರಕಾಶಗೊಂಡುದು ಎಂದರೆ ಅವರಿಗೆ ಆನಂದವೇ ಸರಿ. ಆದರೇನು? ಈ ಲಕ್ಷ್ಯಾರ್ಥಗಳನ್ನು ಅನುಭವಿಸುವ ಮೂರರೊಳಗಿನ ಎರಡೂ ಪ್ರಾಂತಗಳ ಜನತೆ ಬೇಸರಕ್ಕೆ ತುತ್ತಾಗಿದೆ ಎಂಬುದು ವ್ಯಸನಾಸ್ಪದ—ಇರಲಿ; "ಕಾಲಪುರುಷಂಗೆ ಸೊಕ್ಕಿರ್ಪಂ ಸಿಕ್ಕಿರ್ಪ ಮಂದಿಕ್ಕರ್ಪ ಇಲ್ಲಿ" ಎಂದ ರಾಮಾಶ್ವಮೇಧಕಾರನ ವರ್ಣನೆಯೆಂದರೆ ಕೆಲಸದಲ್ಲಿಲ್ಲದ ನಿರರ್ಥಕ ವರ್ಣನೆಯಲ್ಲ.

ನಿಜಾಮರು

ಇವರೊಳಗೆ ಹೈದರಾಬಾದಿನ ನಿಜಾಮರೆಂದರೆ ಸ್ವಾಯತ್ತಸಿದ್ಧಿಗಳೆಂದೇ ನಮಗೆ ತೋರುತ್ತಿದೆ. ತನ್ನಲ್ಲಿ ಅಡಕವಾಗಿ ಪೋಣಿಸಿಕೊಂಡ ರಾಜ್ಯಸೂತ್ರಕ್ಕನುವಾಗಿ ರಾಜ್ಯಭಾರದ ಬಟ್ಟೆಯನ್ನು ನುಲಿವಾತನೇ ಸ್ವಾಯತ್ತಸಿದ್ಧಿ ರಾಜನು, ಎಂಬ ಆ ಮಾತಿನ ಹುರುಳು. ಅಂಥ ರಾಜನಿಗೆ ರಾಜಾಧಿಕಾರ ಪದ್ಧತಿಗನುವಾಗಿ, ಆ ಸ್ಥಾನದಲ್ಲಿ ಬುದ್ಧಿವೃದ್ಧರು ಸಚಿವ(ಮಂತ್ರಿ)ರು ಮಿತ್ರರು. ಯಾಕೆ? ಎಲ್ಲ ಬಾಹ್ಯ ಸ್ವರೂಪಗಳೂ— ಮಿತಿಗೊಂದಿಷ್ಟು ಪೀಠಿಯು ಇರುತ್ತವೆ. ಆದರೆ ಎಲ್ಲರೂ ತನ್ನೊಳಗೆ-ತಾನಾರೊಳಗೂ ಅಲ್ಲ, ಎಂಬುದೇ ಅಂಥವನ ಮುಂದಿಟ್ಟು, ಅಜಾರ ಸ್ವರೂಪದ ಹಿಂದಣ ಬುದ್ಧಿವೃದ್ಧ ಸಚಿವಾದಿಗಳೂ ಅಂಥ ಅರಸನ ಅಡ್ಡಮಾರ್ಗವನ್ನು ತೋರಿಸಿಕೊಡುವ ಗೊಡವೆಗೇ ಹೋಗದೆ "ಮಹಾಪ್ರಸಾದ" ಎಂದು ಮಂತ್ರಾಲೋಚನಾ ಸಂದರ್ಭದಲ್ಲಿಯೂ ಸುಮ್ಮನಿರುತ್ತಾರೆ. ಅಂಥ ಸ್ವಾರ್ಥಧುರಂಧರರೇ ಆ ಬಗೆಯ ಆಶ್ರಯ ಕೊಳ್ಳುವುದು, ಅಥವಾ, ಅವರೇ ಆ ರೀತಿಗೆ ಪಳಗಿರುವುದು ಎನ್ನುವ.

ಮಿರ್ಜಾ ಇಸ್ಮಾಯಿಲರ ಅಧಿಕಾರತ್ಯಾಗ

ಈ ಸಂಗತಿಯ ಸತ್ಯತೆಯನ್ನೂಹಿಸುವುದು ಕಷ್ಟವಲ್ಲ. ಕೆಲವೇ ಕಾಲದ ಹಿಂದೆ ಹೈದರಾಬಾದಿನ ಮುಖ್ಯಮಂತ್ರಿಗಳಾಗಿ ಬಂದ ಶ್ರೀ. ಸರ್ ಮಿರ್ಜಾ ಇಸ್ಮಾಯಿಲಖಾನರು ಥಟ್ಟನೆ ತಮ್ಮ ಅಧಿಕಾರವನ್ನು ತೊರೆದುದರಿಂದ ಮೇಲಿನ ಸೂಚನೆ ವಾಸ್ತವವೆಂದು ಹೊಳೆದು ತೋರುತ್ತಿದೆ.

ಶ್ರೀ ಮಿರ್ಜಾರವರೆಂದರೆ ವಿವೇಕಿಗಳಾದ ವಿದ್ವಾಂಸರು, ಪೌರ್ವಾತ್ಯ ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ ನುರಿತ, ಪ್ರಪಂಚದಲ್ಲೆಲ್ಲ ಹಿರುಗಾಡಿ ಲೋಕಪದ್ಧತಿಗಳನ್ನರಿತ, ಕಾರಭಾರಸಮರ್ಥರು. ಮೈಸೂರು—ಜಯಪುರಗಳಲ್ಲಿ ಸಚಿವರಾಗಿದ್ದು ತಮ್ಮ ಉದಾತ್ತ ರಾಜನೀತಿಯ ತತ್ವರೇಖೆಯನ್ನವರು ಲೋಕದೆದೆಯಲ್ಲಿ ಬರೆದು ತೋರಿದ್ದಾರೆ. ಪಾಕಿಸ್ತಾನದ ತತ್ವವನ್ನವರು ಸಂಪೂರ್ಣವಾಗಿ ಖಂಡಿಸುವವರು. ಅಂಥ ಶ್ರೀ ಮಿರ್ಜಾ ಸಾಹೇಬರು ಸಚಿವರಾದುದರಿಂದ ಹೈದರಾಬಾದಿನ ಸ್ವಾಯತ್ತ ಸಿದ್ಧಿ-ಲಕ್ಷಣವು ಮಾರ್ಪಟ್ಟಿತೋ ಎಂಬ ಸಂಶಯವು ವಿದೇಶಿಗಳೆದೆಯಲ್ಲಿ ಕೊನೆದಾಡುತ್ತಿತ್ತು. ಮೇಲ್ತರಗತಿಯ ಸ್ವಾಭಿಮಾನಿಗಳವರು. ಆದರಿಂದಲೇ ಶ್ರೀ ಮಿರ್ಜಾರವರು, ಆ ಸ್ವಾಯತ್ತಸಿದ್ಧಿ-ನವಾಬರಲ್ಲಿಂದ ನಿವೃತ್ತರಾದರೆಂದು ಭಾವಿಸಬೇಕು. ಅಲ್ಲಿಯ ಹಿಂದಣ ಮಂತ್ರಿಗಳಾಗಿದ್ದ ಶ್ರೀ ಛತ್ತಾರಿ ಜಂಗ್ ಸಾಹೇಬರೆಂದರೆ ಪಾಕಿಸ್ತಾನವಾದಿಗಳು ಮಾತ್ರವಲ್ಲ ರಾಜಭಕ್ತರಾದುದರಿಂದ ಹೊರಟರೆ ಹೊಗಲಿಕ್ಕೂ ಹೊಕ್ಕರೆ ಹೊರಡಲಿಕ್ಕೂ ಬಲ್ಲವರು!

ಆದರೆ, ಕೆಲವರಿಲ್ಲಿ ಮುಂದಿನಂತೆ ಶಂಕಿಸಬಹುದು:— "ತಾವು ಉಭಯ ರಾಜಕೀಯ ಸಮಿತಿಗಳಲ್ಲಿಯೂ ಸೇರುವುದಿಲ್ಲ. ಬ್ರಿಟಿಶರು ಇಂಡಿಯದಿಂದ ತೊಡಗಿದೊಡನೆ, ತಾವು ಸ್ವತಂತ್ರರಾಗುತ್ತೇವೆ" ಎಂಬುದಾಗಿ ಹೈದರಾಬಾದಿನ ನವಾಬರು ಸಾರಿದುದರಿಂದ ಅವರು ಪಾಕಿಸ್ತಾನ ಪ್ರವಣರು ಎಂಬ ಸಂದೇಹಕ್ಕೆ ಎಡೆಯೇ ಇಲ್ಲವಲ್ಲವೆ? ಎಂಬುದೇ ಆ ಶಂಕೆ. ಆದರೆ ನೂರಕ್ಕೆ ಹದಿನೈದರೊಳಗೇ ಮುಸಲ್ಮಾನರಿರುವ ತಮ್ಮ ರಾಜಶಾಹಿಯನ್ನು ಪಾಕಿಸ್ತಾನ ಸಂಘಟನ ಸಮಿತಿಯಲ್ಲಿ ಒಡಗೂಡಿಸುತ್ತೇವೆ ಎನ್ನುವುದಾದರೂ ಹೇಗೆ? ನವಾಬರು ಮುಸ್ಲಿಮ್ ವಂಶೀಯರಾದರೂ ಏನು? ಬಹುಸಂಖ್ಯಾಕ ಪ್ರಜೆಗಳಲ್ಲಿ ಇತರರಾದುದರಿಂದ ಹಾಗೆ ಸಾರಲು ಸಾಧ್ಯವಾಯಿತು. ಒಕ್ಕೂಟ ಘಟನಾ ಸಮಿತಿಗೇ ಸೇರುವುದು ನ್ಯಾಯ್ಯಬದ್ಧವಾಗಿದ್ದರೂ ತಮ್ಮ "ಸ್ವಾಯತ್ತ" ಬುದ್ಧಿ ಅದಕ್ಕೊಪ್ಪದು. ಆದರಿಂದಲೆ ಮೇಲಿನಂತೆ ಸಾರಿಸಿಹುದು. ಶ್ರೀ ಮಿರ್ಜಾರವರು ಬಹುಶಃ ಅವಿನಯ ಮಾರ್ಗ ಎಂದು ಇದಿರಾಡಿರಬೇಕು. ಆ ತತ್ವದೃಷ್ಟಿಯೇ ಶ್ರೀ ಮಿರ್ಜಾರವರಿಗೆ ಹೈದರಾಬಾದಿನಿಂದ ನಿವೃತ್ತಿಮಾರ್ಗವನ್ನು ಕಾಣಿಸಿರಬೇಕು, ಎಂದು ಭಾವಿಸಿದಲ್ಲಿ ತಪ್ಪಾಗದು.

ತಿರುವಾಂಕೂರಿನ ಅರಸರು

ಸಚಿವನ ಸೂಚನೆಗೆಲ್ಲ ಕೈಗುಟ್ಟಿ ತಾನು "ಸುಖಸಂಕಥಾವಿನೋದದಿಂ"ದಿರುವಾತನೇ ಸಚಿವಾಯತ್ತ ಸಿದ್ಧಿಯಾದ ಅರಸನು. ಇಂಥ ರಾಜರೊಳಗೆ ಅಸಾಮಾನ್ಯ ವಿದ್ವಾಂಸರೂ ಇರಬಹುದು. ಸಚಿವೋತ್ತಮ ಶ್ರೀ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರೇ ಹಾಗೆನ್ನುವದರಿಂದ ಈಗಿನ ತಿರುವಾಂಕೂರಿನ ಮಹಾರಾಜರು ಸುಸಂಸ್ಕೃತ ವ್ಯಕ್ತಿ ಎಂಬುದನ್ನು ಒಪ್ಪಲೇಬೇಕು. ಆದರೆ ಪ್ರಕೃತ ವಿಷಯ ಅದಲ್ಲ. ಅಲ್ಲಿಯ ರಾಜಕೀಯ ಪ್ರಪಂಚದೊಳಗಿನ ಒಂದೆಲೆಯಲುಗುವುದಾದರೂ ದಿವಾನರ ಉಸಿರೇ ಬೀಸಬೇಕು; ಎಂಬಂತೆ ಹೊರಗಿನವರಿಗೆ ಭಾಸವಾಗುತ್ತಿದೆ. ಸಚಿವೋತ್ತಮರಾದವಂತೆ ಬ್ರಿಟಿಶರ ಅಧಿಕಾರದಿಲ್ಲಿಂದ ತೊಲಗಿದೊಡನೆ ತಿರುವಾಂಕೂರೂ ಹೈದರಾಬಾದಿನಂತೆ ಸ್ವತಂತ್ರವಾಗುವುದಂತೆ. ಶ್ರೀ ಸರ್. ಸಿ. ಪಿ ಯವರು ಘಟನಾ ಸಮಿತಿಗೆ ತಿರುವಾಂಕೂರನ್ನು ಸೇರಿಸುವ ಸಂಧಿಕಾರ್ಯಕ್ಕಾಗಿ ಹಲಬಾರಿ ದಿಲ್ಲಿವರೆಗೈದಿಬಂದವರಷ್ಟೇ ಅಲ್ಲ; ಹಿಂದಿನಿಂದಲೂ ಹೆಸರುಗೊಂಡ ರಾಷ್ಟ್ರೀಯ ಭಕ್ತರು. ಅವರು ಶ್ರೀ ಜಿನ್ನಾರ ಪಾಕಿಸ್ತಾನ ಭಾವನೆಗೇ ಸಂಪೂರ್ಣ ವಿರೋಧಿಗಳು. ಆದ್ದರಿಂದ ಹೈದರಾಬಾದೂ, ತಿರುವಾಂಕೂರೂ, ಆ ಪಾಕಿಸ್ತಾನ ವಿಚಾರದಲ್ಲಿ ಏಳರಥವನ್ನೇರಿದವುಗಳು ಎಂದು ಕನವರಿಸಲಿಕ್ಕೂ ಎಡೆ ಇಲ್ಲ. ಆದರೆ, ಈ ಹೊತ್ತು ತಿರುವಾಂಕೂರಿನಿಂದ ಹೈದರಾಬಾದಿಗೆ ಮತ್ತು ಪಾಕಿಸ್ತಾನ ಸ್ಥಾಪನಾಚಾರ್ಯರಾದ ಶ್ರೀ. ಜಿನ್ನಾ ಸಾಹೇಬರಲ್ಲಿಗೆ ಸ್ವಾತಂತ್ರ್ಯ ಸ್ಥಾಪನೆಗಳೆಂದಾಗಿ ತಮಗೊದಗಿದ ಆನಂದವನ್ನು ಪ್ರಕಟಿಸುವ ನಿರೂಪಗಳು ಹೋಗಿವೆ. ಶ್ರೀ ಸಿ. ಪಿ. ಯವರು ತಮ್ಮ ಸಾಹಿತ್ಯಧುರ್ಯವನ್ನು ಹಾಗೆ ಪ್ರಕಾಶಿಸುವಲ್ಲಿ ಶಾಸ್ತ್ರೀಯವಾದ ಹೇಳಿಕೆಯೊಂದು ನೆನಪಾಗುತ್ತಿದೆ:—

ವಿಷಯಾನಂತರೋ ರಾಜಾ ಶತ್ರುರ್ಮಿತ್ರಮತಃ ಪರಂ—

ತನ್ನ ದೇಶ(ವಿಷಯ)ದ ಗಡಿನಾಡಿನ ಅರಸನು ಎಂಥವನಿದ್ದರೂ ಶತ್ರು; ಆ ಶತ್ರುದೇಶಕ್ಕಿಂತ ಅತ್ತಣವನು, ಯಾವ ಬಗೆಯವನಾಗಿದ್ದರೂ ಮಿತ್ರನು ಎಂಬುದೇ ಮೇಲಿನ ವಾಕ್ಯದ ಅರ್ಥ. ಪ್ರಕೃತ, ರಾಜನೀತಿಯೊಳಗಿನ ಆ "ವಿಷಯ"ವೇ ಶ್ರೀ ಸಿ. ಪಿ. ಯವರನ್ನೂ ಕಾಂಗ್ರೆಸ್ಸನ್ನೂ ಅತ್ತಿತ್ತ ತೊಲಗಿಸಿತು ಎನ್ನಲೂಬಹುದು.

ಮೈಸೂರಿನ ಒಡೆಯರು

ಒಡೆಯರವರ್ನೀಗ ಪರಾಂಬರಿಸುವ:— ಅರಸನೂ ಮಂತ್ರಿಯೂ ಒಂದಾಗಿ ಭಾವಿಸಿ ರಾಜನೀತಿಕ್ರಮವಿಧಾನವನ್ನು ನಿರ್ಧರಿಸಿದರೆ ಅದಕ್ಕೆ ಉಭಯಾಯತ್ತಸಿದ್ಧಿ ಎಂದು ಹೆಸರು. ನಮ್ಮ ಮೈಸೂರು ಆ ಮಧ್ಯಮಾರ್ಗದಲ್ಲೇ— ಎಂದರೆ ಸಮಂಜಸವಾದ ವಿವೇಕಿಲೋಕದ ಮಾರ್ಗದಲ್ಲೇ— ಹರಿಯಲು ನಿರ್ಧರಿಸಿತು. ಇದು ಇಡೀ ಭಾರತಭೂಮಿಗೆ ಆನಂದಕರವಷ್ಟೆ; ನಮ್ಮ ಕನ್ನಡನಾಡಿಗಂತೂ ಅತ್ಯಾನಂದದ ಸಂಗತಿ. ನಮ್ಮ ಭಾರತದೊಳಗೆ ಬಲಿಷ್ಠವಾದ ನರೇಂದ್ರವರ್ಗ ಎಂದರೆ ನಾಲ್ಕು. ಅವರೊಳಗೆ ಬಡೋದೆ—ಮೈಸೂರುಗಳು ಘಟನಾ ಸಮಿತಿಯಲ್ಲಿ ಮಿಳಿತವಾಗುವುದೆಂದರೆ ಅವುಗಳ ವಿನಯಮಾರ್ಗದ ಗುರಿಯನ್ನೇ ಸೂಚಿಸುತ್ತಿದೆ.

ಹೈದರಾಬಾದು ತಿರುವಾಂಕೂರುಗಳ ಸ್ವಾತಂತ್ರ್ಯ ಘೋಷಣೆ

ಅದಂತಿರಲಿ, ಬರುವ ಆಗೋಸ್ಟ ೧೫ ರಂದು ಬ್ರಿಟಿಷರ ಇಂಡಿಯಾದ ಮೇಲಿನ ಅಧಿಕಾರವು ಕೊನೆಗೊಳ್ಳುತ್ತಿದೆ. ಅವರು ತಮ್ಮ ಸಂಪೂರ್ಣಾಧಿಕಾರದಲ್ಲಿದ್ದ ಬ್ರಿಟಿಶ-ಇಂಡಿಯವನ್ನು ಇಂಡಿಯ-ಪಾಕಿಸ್ತಾನಗಳೆಂದು ವಿಂಗಡಿಸಿ ಆಯಾ ಪಂಗಡಗಳ ಪ್ರತಿನಿಧಿ ಸಂಸ್ಥೆಗಳಾದ ಕಾಂಗ್ರೆಸ್-ಮುಸ್ಲಿಂ ಲೀಗುಗಳಿಗೆ ಒಪ್ಪಿಸುತ್ತಾರೆ. ಆದರೆ ದೇಶೀ ಸಂಸ್ಥಾನಗಳ ಮೇಲೆ ತಮಗಿದ್ದ ಅಧಿಕಾರವನ್ನು, ಅಲ್ಲಿಂದಲ್ಲಿಗೇ ಬಿಟ್ಟು ಬಿಡುತ್ತಾರಂತೆ. ಆದರೆ ಈ ಸಂಸ್ಥಾನಗಳು, ಪ್ರಜಾಪ್ರತಿನಿಧಿ ರಾಜ್ಯಸಂಸ್ಥೆಗಳಾಗುವ ಇಂಡಿಯ—ಪಾಕಿಸ್ತಾನಗಳೊಳಗೆ ಒಂದರಲ್ಲಿ ಸೇರಿ ಬಾಳುವುದು ಉಚಿತವೆಂದೇ ತಮ್ಮ ಬೋಧನೆಯನ್ನೂ ಅವರು ಸೂಚಿಸಿದ್ದಾರೆ. ದೇಶೀ ಸಂಸ್ಥಾನಗಳಲ್ಲಿ ಹಲವು ಆ ಸೂಚನೆಗಿಂತಲೂ ಮೊದಲೇ ತಮ್ಮ ವಿನಯಮಾರ್ಗವನ್ನೊಂದಿ ಘಟನಾ ಸಮಿತಿಯಲ್ಲಿ ಸೇರಲು ಸಿದ್ಧವಾಗಿದ್ದಾವೆ ಎನ್ನುವ. ಆದರೂ ಹೈದರಾಬಾದು— ತಿರುವಾಂಕೂರುಗಳೆರಡು "ಮುರಾರೇಃ ತೃತೀಯಃ ಪಂಥಃ" ಎಂಬಂತೆ ತಾವು ಸಂಪೂರ್ಣ ಸ್ವತಂತ್ರವಾಗುತ್ತೇವೆ ಎಂದು ಸಾರಿಬಾರಂಭಿಸಿವೆ. ಈ ಮಾರ್ಗವು "ನ್ಯಾಯಶಾಸ್ತ್ರಬದ್ಧವೋ ಅಲ್ಲವೋ? ..." ... ಬದ್ಧವೇ ಆದರೂ ಅವುಗಳಿಗದು "ಅಸಾಧ್ಯವೋ ಅಸಾಧ್ಯವೋ" ಎಂಬುದನ್ನು ... ...

ಬ್ರಿಟಿಶರು ಮಾಡಿದ ತಪ್ಪು

ಅದಂತಿರಲಿ; ಬ್ರಿಟಿಶ ಇಂಡಿಯವನ್ನು ಎರಡಾಗಿ ವಿಭಾಗಿಸಿ ಆಯಾ ಪ್ರಜಾಪ್ರತಿನಿಧಿ ಸಂಸ್ಥೆ

—ಮುಂದೆ ಪುಟ ೧೨

ವೀರಭದ್ರಪ್ಪ ಯಲಿಗಾರರಿಗೆ ಕಂಬನಿ

ಲೇ:— ಶ್ರೀ ಹಿರೇಮಲ್ಲೂರ ಈಶ್ವರನ್—

ಬೊಗಸೆ ತುಂಬ ಹಬ್ಬಿದ ಕೂದಲು, ಅದರಿಂದಾಗಿ ಕಿವಿ ಒಳಸೇರಿದು ಕೂತ ಕಾಣುತ್ತಿರಲಿಲ್ಲ. ಕಣ್ಣು ಮಾತ್ರ ಸ್ವಾತಂತ್ರ್ಯತೇಜ ಹರಿಯುತ್ತಿದ್ದವು. ಕೊರಳಲು ಶಾಲು, ಒರಟು ಕೈ, ವಿಶಾಲ ಎದೆ. ಕಾಲ್ಕಿಯಲು ಹೊತ್ತಿಗೆ ನೀರಿಲ್ಲ. ಕುತ್ತಿಗೆಯು ಕೂಡ ಹೊತ್ತಿಗೆ ಸರಿಯಾಗಿ ಒಡಗಿ ಬರಲಾರದು. ಅದರೂ ಹಿಡಿದ ವ್ರತ, ಕೈಕೊಂಡ ಹೋರಾಟ ನಡೆಸಿಯೆ ತೀರುವೆನೆಂಬ ಹೆಮ್ಮೆ. ಬಹಳ ದಣಿವು, ತುಸು ವಿಶ್ರಾಂತಿ. "ಚಲೇ ಜಾವ್" ಚಳವಳಿಯ ಹೋರಾಟದ ಮಧ್ಯಾಹ್ನ! ನಮ್ಮ ಗೌಡರ ಬಾವಿಯ ಮುಂಗಡೆಯಲ್ಲಿರುವ ಬೇವಿನ ಮರದಡಿಯಲ್ಲಿ ಗೆಳೆಯ ವೀರಭದ್ರಪ್ಪನನ್ನು ಕಂಡೆ!

ತಲೆಮರೆಸಿಕೊಂಡು ಬಂದಿದ್ದ. ಹುಬ್ಬಳ್ಳಿಯಿಂದ ಕಾಲುದಾರಿ ಹಿಡಿದು ಮೋಟೆಬೆನ್ನೂರಿಗೆ ಹೋಗಬೇಕಾಗಿತ್ತು. ಮೈಲಾರ ಮಹಾದೇವ 'ಬಾ' ಎಂದು ಹೇಳಿ ಕಳುಹಿದ್ದನಂತೆ! ನಡುವೆ ದಾರಿಯಲ್ಲಿ ಯಲಿವಾಳ ಯಲಿಗಾರನ ತವರೂರು. ತನಗೆ ಜೀವವನ್ನಿತ್ತ ಊರು ಅದುವೆ. ಮಗನ ಮುಂದಣ ಸೇವಾವೃತ್ತಿಯ ಭವಿತವ್ಯವನ್ನು ತಾಯಿ ಹೇಗೆ ಅರಿತುಕೊಂಡಳೊ ಏನೊ! ಮಗುವಿನ ನಾಮಕರಣದ ದಿನ 'ವೀರಭದ್ರ' ನೆಂದು ಹೆಸರಿಟ್ಟು ಗೆಳತಿಯರಿಗೆ ಗುಗ್ಗರಿ ಹಂಚಿ ತಾಯಿ ನಾಮಕರಣ ಅದೇ ಊರಲ್ಲಿ ಮಾಡಿದಳು. ಮನೆಯವರು ಬಡವರು ಒಕ್ಕಲತನ ಮಾಡಿಕೊಂಡಿದ್ದವರು; ಹೊಟ್ಟೆಬಟ್ಟೆಗೆ ಚಾಟು.

ತವರೂರ ನೀರು ಕುಡಿದು ಹೊರಟವನು ಹೆಮ್ಮೊರ ಗಿಡದಡಿಯಲ್ಲಿ ತಂಗಿದ್ದ. ಹತ್ತುಮತ್ತು ದಿನ 'ಪ್ರೋಗ್ರಾಮು' ತೀರಿಸಿಕೊಂಡು ಮೋಟೆಬೆನ್ನೂರಿಗೆ ಹೋಗಬೇಕಿತ್ತಂತೆ! ಮೈಲಾರ ಮಹಾದೇವನ ಬಳಗದವರಿಂದ ಅವಸರದ ಕರೆಯಂತೆ!

ಕನ್ನಡನಾಡಿನಲ್ಲಿ ಮಹದೇವಪ್ಪನ ಕಥೆ ಯಾರು ಕೇಳಿಲ್ಲ? ಜಾನಪದ ಕವಿ ನಮ್ಮದಸಾಬ 'ಹುಟ್ಟಿದ ಮಗುವಿಗೆ ದಿಟ್ಟನ ಹೆಸರನು ಇಟ್ಟರು ತೀರದು' ಎಂದು ಮಹದೇವನನ್ನು ಕುರಿತು ಹಾಡಿದ್ದನ್ನು ಕೇಳ ಯಾರು ಮರುಗಿಲ್ಲ! ಅಭಿಮಾನದಿಂದ ಪುಲಕಿತರಾಗಿಲ್ಲ! ಮೈಲಾರನ ಕಥೆ ಕನ್ನಡದ ಕಥೆ! ಅವನ ಸ್ವಾಭಿಮಾನ, ತ್ಯಾಗ ಕನ್ನಡನಾಡಿನ ಸ್ವಾಭಿಮಾನ ತ್ಯಾಗಗಳು! ಮುಂಬರುವ ಕಾಲದಲ್ಲಿ ನಮ್ಮ ಅಜ್ಜ ಅಜ್ಜಿಯರು ಮೈಲಾರನ ವೀರ ಸಾಹಸದ ಕಥೆಗಳನ್ನು ತಮ್ಮ ಮೊಮ್ಮಕ್ಕಳಿಗೆ ಕಥೆಮಾಡಿ ಹೇಳುವದರಲ್ಲಿ ಸಂದೇಹವೇನು?

ಅಂತಹ ಮೈಲಾರನ ಬಳಗದಲ್ಲಿ ವೀರಭದ್ರಪ್ಪ ಒಬ್ಬ; ನಿಸ್ವಾರ್ಥ ಸೇವಕ. ಯಲಿವಾಳದಲ್ಲಿ ಕನ್ನಡ ಓದಿ, ಕುಂದಗೋಳದಲ್ಲಿ ಮ್ಯಾಟ್ರಿಕ್ ಮುಗಿಸಿದ. ಕಾಲೇಜಿನ ನಾಲ್ಕು ವರುಷ ಓದಿಗೆ ತ್ರಾಣವಿಲ್ಲ. ವರುಷ ತುಸು, ಕಡಮೆ ಹಣ, ಬಂದ ಓದಿನಿಂದ ನಾಡಿಗೂ ಹಿತವಾಗಬೇಕು, ತನಗೂ ದಾರಿ ಕಾಣಬೇಕು. ಹೀಗೆ ವೀರಭದ್ರಪ್ಪ ಯೋಚಿಸಿ ಎಸ್. ಟಿ. ದಾರಿ ಹಿಡಿದ. ಯಾವ ಕರ್ಮವೊ ಎರಡನೆಯ ವರ್ಗ ಒಮ್ಮೆ 'ಫೇಲು' ಆದ. ಮರುವರ್ಷವೆ 'ಎಸ್. ಟಿ' ಕ್ಲಾಸನ್ನು ವಿಶ್ವವಿದ್ಯಾಲಯದವರು ತೆಗೆದುಬಿಟ್ಟರು.

ಈ ದಿನಗಳಲ್ಲಿ ವೀರಭದ್ರಪ್ಪ ಪಟ್ಟ ಕಷ್ಟ ನಾನು ಹೇಳಲರಿಯೆ. ಶಿಗ್ಗಾವಿಯ ಕಚೇರಿಯಲ್ಲಿ ನಾಲ್ಕೈದು ಕಾಗದ ಪತ್ರ ಬರೆದ. ಅಲ್ಲಿ ತುಸು ನಿಂತು ನೋಡಿದ. 'ಜೀವನಕ್ಕೆ ನೋಕರಿ' ಎಂದು ಮರುಕ್ಷಣವೆ ಅಂದುಕೊಂಡು ಬೆಳಗಾವಿಗೆ ಓಡಿ ಬಂದು ಖಾದಿ ಅಂಗಡಿಯಲ್ಲಿ ನಿಂತ. ಖಾದಿ ಮಾರುವ ಕುಣ್ಯಾವೆ ಕುಣ್ಯಾ...ಇಂತಹದೊಂದು ನಂಬುಗೆ ವೀರಭದ್ರಪ್ಪನಿಗೆ.

ವೈಯುಕ್ತಿಕ ಸತ್ಯಾಗ್ರಹ ಬಂತು; ಭಾಗ ವಹಿಸಿದ. ಹಿಂಡಲಿಗಿ ಸೆರೆಮನೆಯಾಯಿತು. ಅಲ್ಲಿಂದ ಹೊರಬೀಳುವಷ್ಟರಲ್ಲಿ ನಾಡಿನಲ್ಲಿ ಹೊಸದೊಂದು ಗಾಳಿ. ೨೨ ನೆಯ ಅಗಷ್ಟ ತಿಂಗಳಲ್ಲಿ ತಲೆ ಮರೆಸಿಕೊಂಡು ಮೈಲಾರ ಮಹದೇವಪ್ಪನ ಗುಂಪಿನಲ್ಲಿ ಸೇರಿಕೊಂಡು ಹೋರಾಟ ನಡೆಸಿದ ವೀರಭದ್ರಪ್ಪನ ಕತೆಯ ವಿವರಣೆಗೆ ಇಲ್ಲಿ ಜಾಗವಿಲ್ಲ!


ಕಪ್ಪಿತ ಗುಡ್ಡದ ಇಳುಕಲದ ಶಾಲಿನಲ್ಲಿ ಹುಲ್ಲು ಹಾಸಿಗೆ, ಆಗಸದ ಹೊದಿಕೆ; ಮಳೆಯ ನೀರು ಕುಡಿದು ತರಗೆಲೆಯ ತರಿದು ತಂದು ದಿನ ನೂಕಿದವೀರಭದ್ರಪ್ಪನ ಕತೆ ಕಣ್ಣೀರು ತರುತ್ತದೆ! ಮಹದೇವಪ್ಪನ ಎದೆಗೆ ಹೊಸರಿತ್ತಿಯ ಗುಡಿಯ ಎದುರಿಗೆ ಗುಂಡು ಹಾಕುವ ಹೊತ್ತಿಗೆ ವೀರಭದ್ರಪ್ಪ ಲಂಬಾಣಿ ವೇಷದಲ್ಲಿ ರೊಟ್ಟಿಯ ಗಂಟನ್ನು ಹೊತ್ತು ತರುತ್ತಿದ್ದನಂತೆ!

ಮಹದೇವಪ್ಪ ಹೋದ. ಹಾವೇರಿಯ ರೈಲುಮಾರ್ಗದ ಅಚೆಗೆ ಮಲಗಿಕೊಂಡ. ಅವನದೊಂದು ಹೆಸರು ನಿಲ್ಲಿಸಿ ದುಡಿಯಬೇಕೆಂದು ವೀರಭದ್ರಪ್ಪನ ಕನಸು. ಯೋಚನೆ ಬಲಿತು ಕಾರ್ಯರೂಪಕ್ಕಿಳಿಯಿತು. ಮೋಟೆಬೆನ್ನೂರಿನ ಆಶ್ರಮದಲ್ಲಿ ಕಾರ್ಯದರ್ಶಿಯಾಗಿ ನಿಂತು ಕೆಲಸ ನಡೆಸಿದ. ವರ್ಧಾ ಆಶ್ರಮಕ್ಕೆ ಹೋಗಿಬಂದ. ಅಲ್ಲಿ ಕಂಡು ಬಂದ ತತ್ವದ ಬೀಜ ಇಲ್ಲಿ ಬಿತ್ತಲೆಳಸಿದ.

ಕಾರ್ಯಸ್ವರೂಪಕ್ಕೆ ಬಂತು ಎನ್ನುವ ಹೊತ್ತಿಗೆ ಎರಡು ವರುಷಗಳ ಕೆಳಗೆ ಮದುವೆಯಾಯಿತು ವೀರಭದ್ರಪ್ಪನಿಗೆ. ಬಾಳಿನ ನೌಕೆ ತುಸು ಮುಂದಕ್ಕೆ ಹೋಗಿರಲಿಲ್ಲ; ಕಾಲಚಕ್ರಕ್ಕೆ ಸಿಲುಕಿ ನೌಕೆ ಮುಳುಗಿ ಹೋಯಿತು.

ಕವಿಯದೊಂದು ಚಿನ್ನದ— "ನನಸುಮದೊಲೆನ್ನ ಜೀವನವು ವಿಕಸಿಸುವಂತೆ ಮನವನುಗೊಳಿಸು ಗುರುವೆ, ಹೇದೇವ" ಅದೇ ಪ್ರಾರ್ಥನೆ. ಯಲಿಗಾರ ವೀರಭದ್ರಪ್ಪನವರದಾಯಿತು. ಇಂಥ ಅಸಂಖ್ಯಾತ ವನಸುಮಗಳು ಈ ಪೂಜ್ಯ ಹಿಂದೂ ದೇಶದ ದರಿದ್ರ ಹಳ್ಳಿಗಳ ಹಳ್ಳಕೊಳ್ಳಗಳ ದಂಡೆಯ ಮೇಲೆ ಅರಳಿ ಬಾಡಿ ಕಳಚಿ ಹರಿವ ನೀರಿನೊಂದಿಗೆ ಹರಿದು ಹೋಗುತ್ತಿವೆ.

ವೀರಭದ್ರಪ್ಪನ ಕುಟುಂಬದವರಿಗೆ ದುಃಖದಿಂದ ತಲೆವಾಗಿ ನಿಂತ ನಾನು ಇಷ್ಟು ಹೇಳಬಲ್ಲೆ. "ನಿಮ್ಮ ದುಃಖ ನಮ್ಮದು ವೀರಭದ್ರ ಹೋಗಿಲ್ಲ, ಹೋಗಲಾರ; ದೇಶದ ಉನ್ನತಿಗಾಗಿ ಜೀವ ಕೊಟ್ಟವನು ಇಲ್ಲವಾದರೆ ಸೂರ್ಯ ಚಂದ್ರರೂ ಇಲ್ಲ."



ಕೈದೀವಿಗೆ [ಕೈಬರಹದ ತ್ರೈಮಾಸಿಕ]

ಸಂಪಾದಕರು ಶ್ರೀ ಪ್ರಹ್ಲಾದ ದೇಸಾಯಿಯವರು.

'ಕೈದೀವಿಗೆ' ಯು ಹಾನಗಲ್ಲಿನ ಬಲಭೀಮ ವ್ಯಾಯಾಮ ಶಾಲೆಯ ಗೆಳೆಯರ ಬಳಗದಿಂದ ಹೊರಟ ತ್ರೈಮಾಸಿಕ. ಇದರ ನಾಲ್ಕು ಸಂಚಿಕೆಗಳು ಬಹಳ ಮುದ್ದಾಗಿವೆ. ಅಗಸ್ಟ ೪೭ ರಲ್ಲಿ ಮೊದಲನೆಯ ಸಂಚಿಕೆ ತಯಾರಾದುದು. ಕತೆ, ಕವನ, ಪ್ರಬಂಧ, ಚಿತ್ರ—ಇತ್ಯಾದಿಗಳಿಂದ ಅಲಂಕೃತವಾಗಿದೆ. ಲೇಖನಶಕ್ತಿಯನ್ನು ಬೆಳಸಿಕೊಳ್ಳುವ ಉತ್ತಮ ಪ್ರಯತ್ನವಾದ ಕೈಬರಹದ ಪತ್ರಿಕೆಗಳ ತಯಾರಿಕೆಯು ಯಾವಾಗಲೂ ಅಭಿನಂದನೀಯ. ಈ ದೃಷ್ಟಿಯಿಂದ ಹಾನಗಲ್ಲಿನ ಗೆಳೆಯರ ಬಳಗ ಹೀಗೇ ಮುನ್ನಡೆಯುತ್ತ ಸಾಗಲೆಂದು ಹಾರೈಕೆ.

ನಾಡಪದಗಳು

ಆಯ್ದವರು: ಶ್ರೀಗಳಾದ ಮುತ್ತು ರಾಮಸ್ವಾಮಿ, ಮತಿಘಟ್ಟ ಕೃಷ್ಣಮೂರ್ತಿ ಅವರು. ಸಂಪಾದಕ ಮತ್ತು ಪ್ರಕಾಶಕರು ಶ್ರೀ ಎಲ್. ಎ. ಚಿತ್ರಕಾರರು ಶ್ರೀ ಎಂ. ಎಸ್. ಪುರುಷೋತ್ತಮರಾಯರು. ಪುಟ ಸಂಖ್ಯೆ ೩೦೩, ಬೆಲೆ ೫ ರೂಪಾಯಿ.

ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಮುನ್ನುಡಿಯೊಡನೆ "ನಾಡಪದಗಳು" ಹೊರಬಿದ್ದಿವೆ. ನಾಡಸಂಸ್ಕೃತಿಯ ಶಿಲಾಸ್ತಂಭಗಳಂತಿರುವ ಜನಪದ ಗೀತಗಳನ್ನು ಆಯ್ದು ಸಂಗ್ರಹ ಮಾಡಿದುದು ಶ್ಲಾಘ್ಯಕಾರ್ಯ. ಅದರಲ್ಲೂ ಪ್ರಸಿದ್ಧ ಹೊಯ್ಸಳ ರಾಜಧಾನಿಯಾದ ದೋರಸಮುದ್ರ (ಹಳೆಯ ಬೀಡು) ಪ್ರಾಂತದಿಂದ ಸಂಗ್ರಹಿಸಿದ ಪದಗಳೆಂದ ಮೇಲೆ ಇವಕ್ಕೆ ಐತಿಹಾಸಿಕ ಬೆಲೆ ಅಷ್ಟಿಷ್ಟೆಂದು ಹೇಳಬಲ್ಲವಲ್ಲ. ಪುಸ್ತಕದಲ್ಲಿ ಕೋಲಾಟದ ಪದಗಳು, ತಿಂಗಳು ಮಾವನ ಪದಗಳು, ರಾಗಿಕಲ್ಲಿನ ಪದಗಳು, ಕಥೆ ಮತ್ತು ಶಾಸ್ತ್ರದ ಹಾಡುಗಳು, ಸಂಕೀರ್ಣ ಪದಗಳು, ಜಂತ್ರಿಗೆ ಸಂಬಂಧಿಸಿದ ಪದಗಳು, ಬ್ರಾಹ್ಮಣರ ಹಾಡುಗಳು, ಬಸವನ ಅಷ್ಟವಿಯ ಹಾಡುಗಳು–ಹೀಗೆ ಎಂಟು ವಿಭಾಗಗಳಿವೆ. ಅನೇಕ ಪದಗಳು ಸರಳ, ಸುಂದರ ಮತ್ತು ಸುಮಧುರವಾಗಿವೆ. ರಸಿಕರು ತಪ್ಪದೆ ಓದಬೇಕು.

ಇದ್ದರೂ ಇರಬಹುದು

ಬರೆದವರು ಶ್ರೀ ಎಸ್. ಜಿ. ಶಾಸ್ತ್ರಿಗಳು. ಪ್ರಕಾಶಕರು ಕಾವ್ಯಾಲಯ, ಮೈಸೂರು ಅವರು. ಪುಟಗಳು ೧೬೬; ಬೆಲೆ ಸಾದಾ ಪ್ರತಿಗೆ ೨। ಮತ್ತು ಕ್ಯಾಲಿಕೊ ಪ್ರತಿಗೆ ೩। ರೂಪಾಯಿಗಳು.

'ಇದ್ದರೂ ಇರಬಹುದು' ಒಂದು ಕಥಾ ಸಂಗ್ರಹ. ಇದರಲ್ಲಿ ಹಾಗಲಕಾಯಿ ಮತ್ತು ತಾಳೆಹೂವು, ಕಿಟ್ಟು ಮತ್ತು ಲೀಲಾ, ವಾರದ ಹುಡುಗ, ಹಬ್ಬದ ಉಡುಗೊರೆ, ಹಂಸಪದಕ, ಸ್ವಯಂವರ, ರಂಗಾಚಾರಿ, ಚಿತ್ರಗಾರ ವಿಶ್ವನಾಥ ಎಂಬ ೮ ಕಥೆಗಳಿವೆ. ಇವುಗಳಲ್ಲಿ ಹಲವಾರು ಹಳೆಯ ಮಾಸಿಕಗಳಲ್ಲಿ ಅಚ್ಚಾದವು. ದಿ. ಶ್ರೀ ಎಸ್. ಜಿ. ಶಾಸ್ತ್ರಿಗಳು ಪ್ರಸಿದ್ಧ ಲೇಖಕರು. ಇವರ ಈ ಕಥೆಗಳಲ್ಲಿ ಒಂದು ವಿಧವಾದ ಸರಳ ಹಾಸ್ಯವಿರುವುದು ಮನೋರಂಜಕವಾಗಿದೆ. ಇಲ್ಲಿ ಆಳವಾದ ವಿಚಾರಕ್ಕಿಂತ ಸರಸವಾಗಿ ಹೇಳಿದ ನಿತ್ಯಜೀವನದ ಅನುಭವಗಳೇ ಹೆಚ್ಚು. ಮೊದಲನೆ ಕತೆಯ ಶಾಸ್ತ್ರಿಗಳು, ೨ ನೆಯ ಕತೆಯ ಕಮಲಮ್ಮ, ೩ ನೆಯ ರುಕ್ಮಿಣಮ್ಮ, ೪ ನೆಯ ಲಕ್ಷ್ಮೀದೇವಮ್ಮ, ೭ ನೆಯ ರಂಗಾಚಾರಿ, ಕೊನೆಯ ಕತೆಯಲ್ಲಿಯ ವಿಶ್ವನಾಥ— ಈ ಪಾತ್ರಗಳು ಸ್ವಭಾವಮಾಧುರ್ಯದಿಂದ ಮೆಚ್ಚಿಗೆಯನ್ನು ಪಡೆಯಬಲ್ಲವು. ಎಲ್ಲ ಕತೆಗಳಲ್ಲೂ ಕಷ್ಟಸುಖಗಳ ಮಿಶ್ರಣವಿದ್ದರೂ ಸುಖಾಂತವಾಗುವ ಮಧುರ ಸಂಸಾರ ಚಿತ್ರಗಳೇ ಹೆಚ್ಚು; ಆದುದರಿಂದ ಇವು ಶಾಂತಮಧುರ ಮನಸ್ಕರ ಮನವನ್ನು ಸುಲಭವಾಗಿ ಸೆರೆಹಿಡಿಯಬಲ್ಲವು.

ರುದ್ರವೀಣೆ

ಬರೆದವರು ಶ್ರೀ ಭಾರತೀಪ್ರಿಯರು. ಪ್ರಕಾಶಕರು ಕಾವ್ಯಾಲಯ, ಮೈಸೂರು ಅವರು. ಪುಟಗಳು ೧೧೯; ಬೆಲೆ ಸಾದಾ ಪ್ರತಿಗೆ ೧॥ ಮತ್ತು ಕ್ಯಾಲಿಕೋ ಪ್ರತಿಗೆ ೨॥ ರೂಪಾಯಿಗಳು.

"ರುದ್ರವೀಣೆ" ಯೊಂದು ಕಥಾಸಂಗ್ರಹ. ಇದರಲ್ಲಿ ಮೋಚಿ, ರಾಹು, ನಾದನಾಮಕ್ರಿಯೆ, ಬೇಟೆ, ತ್ಯಾಗ, ಒಂದು ಹಳೆಯ ಕತೆ, ಅನುಗ್ರಹ, ಆ ಒಂದು ರಾತ್ರಿ, ಸಾಧನೆ, ಹಾಲೆರೆದ ಹಾವು ಎಂಬ ೧೦ ಕತೆಗಳಿವೆ. ಇದರಲ್ಲಿಯ ಹಲವಾರು ಕತೆಗಳು ಆಗಲೇ ಬೇರೆ ಬೇರೆ ಸಂಗ್ರಹಗಳಲ್ಲೂ ಮಾಸಿಕಗಳಲ್ಲೂ ಹೊರಬಿದ್ದು ಜನಪ್ರಿಯವಾದವು. ಗ್ರಂಥಕರ್ತರ ಒಂದು ವೈಶಿಷ್ಟ್ಯವೆಂದರೆ ಸಾಮಾನ್ಯ ಪಾತ್ರಗಳ ಪರಿಚಯವನ್ನು ಅವರವರ ಸ್ವಾಭಾವಿಕವಾದ ಮಾತಿನಿಂದಲೇ ಮಾಡಿಕೊಡುವುದು. ಇದು--ಮೋಚಿ, ಆ ಒಂದು ರಾತ್ರಿ ಮೊದಲಾದ ಕತೆಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಕತೆಗಳು ಒಟ್ಟಿನ ಮೇಲೆ ಚೆನ್ನಾಗಿವೆ. ಇಂಥ ಕತೆಗಳನ್ನು ಇನ್ನೂ ಹೆಚ್ಚಾಗಿ ಕನ್ನಡಕ್ಕೆ ಶ್ರೀ ಭಾರತೀಪ್ರಿಯರು ಕೊಡುವರೆಂದು ಆಶಿಸುತ್ತೇವೆ.


ಸಾದರ ಸ್ವೀಕಾರ

೧. ಅಸ್ಥಿಪಂಜರ

ಲೇಖಕ— ಅರ್ಚಕ ವೆಂಕಟೇಶ. ಪ್ರಕಾಶನ— ಉಷಾ ಸಾಹಿತ್ಯಮಾಲೆ ನೀಲಗಿರಿರೋಡ ಮೈಸೂರು. ಪುಟ ೨೪೦ ಬೆಲೆ ೩—೦—೦

೨. ಅಜ್ಜ ಅಜ್ಜಿ

ಲೇಖಕರು— ಟಿ. ಎಂ. ಆರ್. ಸ್ವಾಮಿ ಪ್ರಕಾಶಕರು— ಸತ್ಯಶೋಧನ ಪುಸ್ತಕ ಭಾಂಡಾರ ಕೋಟೆ ಬೆಂಗಳೂರು. ಪುಟಗಳು ೨೦ ಬೆಲೆ ೦—೪—೦



೫ ಪ್ರಶ್ನೆಗಳು

೫ ಪ್ರಶ್ನೆಗಳನ್ನು ಬರೆದು ಕವರಿನಲ್ಲಿಟ್ಟು ಸೀಲ್ ಮಾಡಿ ಕಳುಹಿಸಿದರೆ ದೇವೀ ಮಹಿಮೆಯಿಂದ ಉತ್ತರ ರೂಪದಲ್ಲಿ ಭವಿಷ್ಯ ಬರೆದು, ಅದೇ ನಿಮ್ಮ ಕವರಿನೊಂದಿಗೆ ರೂ. ೨ಕ್ಕೆ ವ್ಹಿ. ಪಿ. ಮಾಡಲಾಗುವದು.

ಸಿದ್ಧಾಂತಿ ಎಂ. ಆರ್. ಸುಬ್ಬಯ್ಯ, ನಂ. ೧೨, ಕಂಚನಾಯಕನಗಲ್ಲಿ ಗಾಣಿಗರಪೇಟೆ, ಬೆಂಗಳೂರು ಸಿಟಿ.

ಮೂವರು ನರೇಂದ್ರರ ಮೂರು ಮಾರ್ಗಗಳು

(೧ನೇ ಪುಟದಿಂದ)

ಗಳಿಗೇ ಪಾರ್ಲಿಮೆಂಟು ಅಧಿಕಾರಗಳನ್ನು ಒ... ಸುವುದು ಎಂಬುದನ್ನಿಲ್ಲಿ ಮರೆಯಬಾರದು: "ಚಲೇಜಾವ್" (Quit India) ಎಂಬುದನ್ನು ಬ್ರಿಟಿಶರು ಹಿಂದೆಯೇ ಧಾರ್ಮಿಕವಾಗಿ ಆಚರಿ... ಬೇಕಾಗಿತ್ತು. ಅಂದಿನ ಮಾತು ಹಾಗಿರಲಿ ಬಿಟ್ಟರೂ ಇಂದು-ದೇಶ ಕಾಲ ಸಂದರ್ಭಗಳನ್ನು ಪರಾಂಬರಿಸಿಕೊಂಡಾದರೂ– ಹೀಗೆ ಮಾಡಲು ಸಿದ್ಧರಾಗಿದ್ದಾರಲ್ಲ ಎಂಬುದು ಸಂತೋಷದ ಸಂಗತಿ. ಆದರೆ, ದೇಶೀ ಸಂಸ್ಥಾನಗಳಲ್ಲಿ ತಮ... ಗಿದ್ದ ಮೇಲಧಿಕಾರದ ಸೂತ್ರಗಳನ್ನು ಬ್ರಿಟಿಶರು ಅಲ್ಲಲ್ಲಿಯ ಪ್ರಜಾ ಮಂಡಲಗಳಿಗೇ ಒಪ್ಪಿ... ಬೇಕಾಗಿತ್ತು. ಹಾಗೆ ಮಾಡದೆ, ತಮಗೆ ಆಯಾ ಸಂಸ್ಥಾನ ಸೂತ್ರಗಳು ಎಲ್ಲಿಂದ ಒದಗಿದುವೊ ಅಲ್ಲಿಂದಲೇ ಬಿಡಿಸಿ ಬಿಟ್ಟುಬಿಡುವುದೆಂದರೆ ನ್ಯಾಯವೆ? ಇಂಡಿಯವು ತಮ್ಮ ವಶಕ್ಕೆ ಬರುವಲ್ಲಿ ಈಗಿನ "ಕಾಂಗ್ರೆಸು-ಮುಸ್ಲಿಂ ಲೀಗು ಗಳು" ಇದ್ದುವೆ? ಇಂದು ಇವುಗಳ ವಶಕ್ಕೆ ರಾಜ್ಯವನ್ನು ವಿಭಾಗಿಸಿ ಒಪ್ಪಿಸುವುದೆಂದರೆ ಇವುಗಳೇ ಆಯಾ ಪ್ರಜಾ ಪ್ರತಿನಿಧಿ ಸಂಸ್ಥೆ... ಸಂಸ್ಥೆಗಳು ಎಂಬ ನಂಬುಗೆಯಿಂದಲ್ಲವೆ? ಹಾಗಿರುವಲ್ಲಿ ಸಂಸ್ಥಾನಗಳ ಪ್ರಜಾಮಂಡಲ... ಗಳನ್ನಲ್ಲಗಳೆದು ಅಲ್ಲಿಂದಲ್ಲಿಗೇ ಬಿಡುವುದು ಎಂಬ ನೀತಿ ಎಲ್ಲಿಂದೆಲ್ಲಿಗೂ ಸರಿಯಲ್ಲ. ತಾವು ಪ್ರಜಾಪ್ರಭುತ್ವ ವಾದಿಗಳು ಎನ್ನುವ ಬ್ರಿಟಿಶ ಸರಕಾರದ ಈ ನೀತಿಯು ಕೊನೆಯೊಂದು ಇನ್ನೂ ಸರಳವಾಗಿಲ್ಲ ಎಂಬುದು ಇದರಿಂದ ಸಿದ್ಧವಾಗುತ್ತಿದೆ. ಅದರೂ ಎಲ್ಲವನ್ನೂ ಪರಾಂಬರಿಸಿಕೊಂಡು ಘಟನಾ ಸಮಿತಿಯೊಡನೆ ಸೇರುವ ಹಲವು ಸಂಸ್ಥಾನಗಳ ಉದ್ದೇಶವು ಶ್ಲಾಘ್ಯವೇ ಸರಿ.

ರಾಜನೀತಿಯೊಂದು ವೇಶ್ಯಾನೀತಿಯೇ

ಇಂದು ಬ್ರಿಟಿಶರು ಇಂಡಿಯವನ್ನು ಮಾತ್ರವಲ್ಲ, ತಮಗಿದ್ದ ಸಂಸ್ಥಾನಗಳ ಅಧಿಕಾರವನ್ನೂ ಬಿಟ್ಟು ಹೋಗುವಲ್ಲಿ, ಅಂದಿನಿಂದಿಂದಿನವರೆಗೂ ಮಹಾಪ್ರಯತ್ನವೆಸಗಿದುದೆಂದರೆ ಅಖಂಡ ಹಿಂದುಸ್ತಾನದ 'ಏಕಮೇವಾದ್ವಿತೀಯಂ' ಆದ ಕಾಂಗ್ರೆಸ್ಸು. ಈಗಿನ ಮುಸ್ಲಿಂ ಲೀಗಾದರೂ ಅದರದೇ ಒಂದಾದ ಕವಲು. ಅದು, ಮುಸ್ಲಿಂ ವರ್ಗದೊಳಗಾದರೂ ಒಂದು ಒಳಗವಲಾಗಿಯೇ ಇದೆ. ಈಗಿನ ಗಡಿನಾಡಿನ ಪಠಾಣಿಸ್ತಾನದ ಚಳವಳಿಯಿಂದಾದರೂ ಆ ಸಂಗತಿ ಗೊತ್ತಾಗಬಹುದಲ್ಲವೆ ? ಹೋಗಲಿ, ಸಂಸ್ಥಾನಗಳೊಳಗಿನ ಪ್ರಜಾಪ್ರತಿನಿಧಿ ಮಂಡಲಗಳೆಲ್ಲವೂ ಕಾಂಗ್ರೆಸ್ಸಿನ ಶಾಖೆಗಳೆಂಬುದು ತಿಳಿದ ಸಂಗತಿ. ಹೀಗಿರುವಲ್ಲಿ ಆಯಾ ಪ್ರಜಾಪ್ರತಿನಿಧಿ ಸಂಸ್ಥೆಗಳ ಅಭಿಪ್ರಾಯಗಳಿಗೆ ವಿರೋಧವಾಗಿ ಮೇಲೆ ಸೂಚಿಸಿದ ಎರಡು ಸಂಸ್ಥಾನಗಳು ತಂತಮ್ಮ ಸ್ವಾಯತ್ತತೆ–ಸಚಿವಾಯತ್ತತೆಗಳನ್ನು ಮುಂಬರಿಸುವದೆಲ್ಲಿಗೆ? ಬ್ರಿಟಿಶರ ಆಳಿಕೆಗೆ ಸಂಸ್ಥಾನಗಳು ಬಾಗಿದುದೆಂದರೆ ಅಲ್ಲಲ್ಲಿಯ ರಾಜರು. ಅವರು ನಿನ್ನೆಯ ವರೆಗೂ ಬಾಗಿಕೊಂಡೇ ಇದ್ದರಲ್ಲದೆ ಸ್ವಾತಂತ್ರ್ಯಕ್ಕಾಗಿ ಒಂದಿಷ್ಟೂ ಹೆಣಗಲಿಲ್ಲ. ಕಾಂಗ್ರೆಸ್ಸಿನೊಡನೆ ಸತ್ಯಾಗ್ರಹ ಕಾರಾಗೃಹವಾಸಾದಿ ಮಹಾಪ್ರಯತ್ನವನ್ನೆಸಗಿದುವೆಂದರೆ ಆಯಾ ಪ್ರಜಾಮಂಡಳಿಗಳು. ಇವನ್ನೆಲ್ಲ ಭಾವಿಸುವಲ್ಲಿ ಗಂಗಾಸ್ನಾನವನ್ನೆಸಗಿ ಪುಣ್ಯ ಸಂಪಾದನವೆಸಗಿದ ಯಾತ್ರಿಕರ ಕತೆಯೊಂದು ನೆನಪಾಗುತ್ತಿದೆ. ಕೆಲವರು ಗಂಗಾ ಪ್ರವಾಹಕ್ಕೆ ಧುಮುಕಿ ಸ್ನಾನ ಮಾಡಿದರು; ಇನ್ನು ಕೆಲವರು ದಡಕ್ಕೈದಿ ನೀರನ್ನು ತಲೆಗೆ ಪ್ರೋಕ್ಷಿಸಿ ಪರಿಶುದ್ಧರಾದರು. ಮತ್ತೆ ಕೆಲವರು ಅತ್ತಣಿಂದ ಬೀಸುವ ತಂಗಾಳಿಯನ್ನು ಸೇವಿಸಿ ಎಲ್ಲ ಯಾತ್ರಿಕರಂತೆ ತಾವೂ ಪಾಪದತ್ತಣಿಂದ ಸ್ವತಂತ್ರರಾದರಂತೆ. ಇದು ಸ್ವಾತಂತ್ರ್ಯ ಎನ್ನುವುದಕ್ಕಿಂತಲೂ ಬರಿಯ ತಂತ್ರ ಎನ್ನುವುದೇ ವಾಸಿ. ಶ್ರೀ ಜಿನ್ನಾ ಸಾಹೇಬರು ತಮ್ಮ ಪಾಕಿಸ್ತಾನದ ಮುಸ್ಲಿಂ ರಾಜ್ಯಪದ್ಧತಿ ಎಂದರೆ ಸಂಪೂರ್ಣ ಪ್ರಜಾಸ್ವಾತಂತ್ರ್ಯದ ಆದರ್ಶವೆನ್ನುತ್ತಾರಲ್ಲ! ಇಂಥವರು ತಿರುವಾಂಕೂರು ಸಂಸ್ಥಾನ ಸ್ವತಂತ್ರವಾಗುವುದು ಅದರ ಹಕ್ಕಾಗಿದೆ. ಎಂದು ಹೇಳಿ ಶ್ರೀ ಸಿ. ಪಿ. ರಾಮಸ್ವಾಮಿ ಅಯ್ಯರರ ಮನ್ನಣೆಗೆ ಪಾತ್ರರಾಗಿದ್ದಾರಷ್ಟೆ. ಹೀಗೆನ್ನುವಲ್ಲಿ ಶ್ರೀ ಜಿನ್ನಾರು ತಿರುವಾಂಕೂರಿನ ಪ್ರಜಾಮಂಡಳಿಯ ಹಕ್ಕನ್ನು ಮರೆತರೇನು ? ಅವರು ಆಡಿದ ಶಬ್ದ ತಿರುವಾಂಕೂರನ್ನು ಕುರಿತಾದರೆ ಅದರ ಅರ್ಥ ಹೈದರಾಬಾದನ್ನು ಕುರಿತಾಗಿದೆ. ಅದರೆ ಕಾಶ್ಮೀರ ಸಂಸ್ಥಾನವು ಪಾಕಿಸ್ಥಾನವನ್ನೇ ಸೇರಬೇಕೆಂದು ಶ್ರೀ ಸಾಹೇಬರ ಸಿದ್ಧಾಂತ. ಇಂಥವರಿಂದಾಗಿಯೇ 'ವಾರಾಂಗನೇವ ನೃಪನೀತಿರನೇಕರೂಪಾ' ಎಂದು ರಾಜನೀತಿಯ ಮೇಲೆ ಕಲಂಕವೊಂದು ನೆಲೆಗೊಂಡುದು.

ಮೈಸೂರಿನಲ್ಲಿ ಸತ್ಯಾಗ್ರಹ

ಪ್ರಗತಿಪರವಾದ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಸಂಬಂಧದಲ್ಲಿ ಪ್ರಜೆಗಳ ಹಕ್ಕು ಬಾಧ್ಯತೆಗಳ ಸಂಬಂಧದಲ್ಲಿ ಮೇಲಿಂದ ಮೇಲೆ ತಿಕ್ಕಾಟವುಂಟಾಗುತ್ತಿರುವುದು ದುರ್ದೈವದ ಸಂಗತಿ. ಅಲ್ಲಿನ ಕಾಂಗ್ರೆಸ್ಸು ಸಮಾಧಾನಕರ ರೀತಿಯಿಂದ ಎಲ್ಲವನ್ನು ಬಗೆಹರಿಸಿಕೊಂಡು ಆಡಳಿತದಲ್ಲಿ ಭಾಗವಹಿಸಲು ಉತ್ಸುಕವಾಗಿದ್ದರೂ ಅಧಿಕಾರಿಗಳ ಕೈವಾಡದಿಂದ ಅದಕ್ಕೆ ಅವಕಾಶ ಸಿಕ್ಕಲೊಲ್ಲದು. ಅವರನ್ನು ಕಡೆಗಣಿಸುವದು ಹಾಗೆಯೆ ನಡೆದಿದೆ. ಮೈಸೂರು ಕಾಂಗ್ರೆಸ್ಸು ಪ್ರಜಾಪ್ರಾತಿನಿಧಿಕವಾಗಿದ್ದು ಶಾಸನ ಸಭೆಗಳಲ್ಲಿ ಬಹುಮತ ಪಡೆದ ಪಕ್ಷವು. ಈ ಪಕ್ಷದ ಸಹಾಯ ಸಹಕಾರಗಳಿಂದ ಆಡಳಿತವನ್ನು ಸಾಗಿಸುವುದು ಇಷ್ಟ ಮತ್ತು ಕ್ರಮಪ್ರಾಪ್ತ. ಆದರೆ ದಿವಾಣ ರಾಮಸ್ವಾಮಿಯವರು ಈ ಸೂಕ್ತ ಮಾರ್ಗವನ್ನನುಸರಿಸದಿರುವದು ಶೋಚನೀಯವಾಗಿದೆ. ತತ್ಪರಿಣಾಮವಾಗಿ ಮೈಸೂರು ಕಾಂಗ್ರೆಸ್ಸು ಸತ್ಯಾಗ್ರಹದ ಸಿದ್ಧತೆಯನ್ನು ಮಾಡಿದೆ. ಕಳೆದ ನವೆಂಬರದಲ್ಲಿಯೆ ಈ ಬಗ್ಗೆ ನಿರ್ಣಯವನ್ನು ಮಾಡಲಾಗಿತ್ತು. ಆದರೆ ದಿವಾಣರೊಡನೆ ಹೊಣೆಗಾರ ರಾಜ್ಯಪದ್ಧತಿಯ ಬೇಡಿಕೆಯ ಸಂಬಂಧದಲ್ಲಿ ಮಾತುಕತೆ ನಡೆದಿದ್ದರಿಂದ ಈ ನಿರ್ಣಯವನ್ನು ತಡೆಹಿಡಿಯಲಾಗಿತ್ತು. ಅದರೀಗ ಆ ಮಾತುಕತೆ ಸಮಾಧಾನಕರವಾಗಿ ಸಾಗದ್ದರಿಂದ ಕಾಂಗ್ರೆಸ್ ಕಾರ್ಯಸಮಿತಿಯು ಸತ್ಯಾಗ್ರಹದ ನಿರ್ಧಾರವನ್ನು ಮಾಡಿದೆ. ಈ ಸಂಬಂಧದಲ್ಲಿ ಮೈಸೂರು ಕಾಂಗ್ರೆಸ್ಸು ಸುದೀರ್ಘ ಪ್ರಕಟನೆಯನ್ನು ಹೊರಡಿಸಿದೆ. ಹೊಣೆಗಾರ ರಾಜ್ಯಪದ್ಧತಿಯನ್ನು ಪಡೆಯುವುದಕ್ಕಾಗಿ ಮೈಸೂರು ಕಾಂಗ್ರೆಸ್ಸು ಸತ್ಯಾಗ್ರಹವನ್ನು ಪ್ರಾರಂಭಿಸಬೇಕೆಂದು ಸಾರಲಾಗಿದೆ. ಈ ಸುದೀರ್ಘ ಪ್ರಕಟನೆಯಲ್ಲಿ ಕಾಂಗ್ರೆಸ್ಸು ಮೈಸೂರಿನ ದಿವಾಣರು ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಅದೆಂತು ಹತ್ತಿಕ್ಕುತ್ತಿರುವರೆಂಬದನ್ನು ಹೇಳಿರುವದಲ್ಲದೆ ಆ ಬಗ್ಗೆ ತಮ್ಮಲ್ಲಿ ಬೇಕಾದಷ್ಟು ಪುರಾವೆಗಳಿವೆಂದೂ ಹೇಳಿದೆ ಅಲ್ಲದೆ ಘಟನಾಸಮಿತಿಯ ಸದಸ್ಯತಾಯ್ಕೆಯ ಸಂಬಂಧದಲ್ಲಿಯೂ ಕಾಂಗ್ರೆಸ್ಸು ಸಮಿತಿಯು ಅಧ್ಯಕ್ಷರಲ್ಲಿ ದೂರಿಕೊಂಡಿದೆ. ಕಾಂಗ್ರೆಸ್ ಸಂಘಟನೆಯನ್ನು ಬೆಳೆಸಿಕೊಳ್ಳುವ ಕಾರ್ಯದಲ್ಲಿ ಯಾವಬಗೆಯ ಅನ್ಯಾಯದ ಸರ್ವಾಧಿಕಾರ ಸ್ವರೂಪದ ಆಜ್ಞೆಗಳನ್ನು ಮುರಿಯಬೇಕೆಂದು ನಿರ್ಧರಿಸಲಾಗಿದೆ. ಇಡೀ ರಾಷ್ಟ್ರ ಸ್ವತಂತ್ರವಾಗಲಿರುವ ಈ ಸಮಯದಲ್ಲಿ ಮೈಸೂರಿನಲ್ಲಿ ಸತ್ಯಾಗ್ರಹ ನಡೆವುದು ಮೈಸೂರಿನ ಶುಭ್ರ ಕೀರ್ತಿಗೆ ಸರಿಯಲ್ಲ ಆದುದರಿಂದ ದಿವಾಣರು ಕಾಂಗ್ರೆಸ್ಸಿನೊಡನೆ ವಿಚಾರವಿನಿಮಯ ನಡೆಸಿ ಸತ್ಯಾಗ್ರಹವನ್ನು ತಪ್ಪಿಸುವದು ಇಷ್ಟವಾಗಿದೆ ಮಹಾರಾಜರು ಈ ಪ್ರಶ್ನೆಯಲ್ಲಿ ಮನಸ್ಸು ಹಾಕಿ ತಿಕ್ಕಾಟವನ್ನು ತಪ್ಪಿಸಬೇಕೆಂದು ಬಿನ್ನವಿಸಬಯಸುತ್ತೇವೆ.

ಜಾತಿನಿಷ್ಠ ರಾಜಕೀಯ ಪಕ್ಷಗಳು

ಜಾತೀಯ ತಳಹದಿಯ ಮೇಲೆ ರಾಜಕೀಯ ಪಕ್ಷಗಳಿರುವದು ಅತ್ಯಂತ ಅನಿಷ್ಟವಾದುದು. ಹಿಂದುಸ್ತಾನದಲ್ಲಿ ಆ ಬಗೆಯ ಜಾತಿನಿಷ್ಠ ಪಕ್ಷಗಳಿದ್ದುದರಿಂದಲೆ ಇಷ್ಟೊಂದು ಅನವಸ್ಥೆಯುಂಟಾಗಿದೆ. ದೇಶವನ್ನು ಇಬ್ಭಾಗಮಾಡುವ ಪ್ರಸಂಗ ಬಂದುದಕ್ಕೂ ಈ ಜಾತ್ಯಂಧ ರಾಜಕೀಯ ಪಕ್ಷಗಳೆ ಬಹ್ವಂಶಕ್ಕೆ ಕಾರಣವೆಂದು ಹೇಳಲಭ್ಯಂತರವಿಲ್ಲ. ಕೆಲವೊಂದು ತತ್ವಗಳನ್ನಿಟ್ಟುಕೊಂಡು ರಾಜಕೀಯ ಪಕ್ಷಗಳನ್ನು ಕಟ್ಟುವುದು ಯಾವಾಗಲೂ ಇಷ್ಟವಾಗಿದೆ. ಆದರೆ ಪರಕೀಯರ ಕೈವಾಡದಿಂದ ಹಿಂದುಸ್ತಾನದಲ್ಲಿ ಜಾತಿನಿಷ್ಠ ರಾಜಕೀಯ ಪಕ್ಷಗಳು ಸ್ಥಾಪಿತವಾಗಿ ಪ್ರಬಲವಾದುದರಿಂದಲೆ ದೇಶದಲ್ಲಿ ಸದ್ಯಕ್ಕೆ ಇಷ್ಟೊಂದು ಅನಾಹುತ ನಡೆದಿದೆ. ಕೇವಲ ದೇಶಹಿತವನ್ನೆ ಬಯಸುವ ಹಿಂದೀ ಧುರೀಣರು ಇಂಥ ರಾಜಕೀಯ ಪಕ್ಷಗಳನ್ನು ತೆಗಳುವದು ಸ್ವಾಭಾವಿಕ. ಆದರೆ ಮೇಲೆ ಹೇಳಿದಂತೆ ಪರಕೀಯರು ತಮ್ಮ ಸಾರ್ಥಕ್ಕಾಗಿ ಅವುಗಳನ್ನು ನೀರು ಹಾಕಿ ಬಲಿಸಿದ್ದರಿಂದ ಹಿಂದುಸ್ತಾನದಲ್ಲಿ ಈಗ ಅವು ತಾಂಡವನೃತ್ಯ ಮಾಡುತ್ತಿವೆ. ಸೋಶಾಲಿಸ್ಟ ಪಕ್ಷದ ಧುರೀಣರಾದ ಜಯಪ್ರಕಾಶರು ಮುಂಬಯಿಯಲ್ಲಿ ರಾಷ್ಟ್ರೀಯ ಮುಸಲ್ಮಾನರ ಸಭೆಯೊಂದರಲ್ಲಿ ಮಾತಾಡುತ್ತ ದೇಶದಲ್ಲಿಯ ರಾಜಕೀಯ ಪಕ್ಷಗಳ ಕರ್ತವ್ಯವನ್ನು ತಿಳಿಸಿಕೊಟ್ಟರು. ಜಾತೀಯ ತಳಹದಿಯ ಮೇಲೆ ಕಟ್ಟಲ್ಪಟ್ಟ ರಾಜಕೀಯ ಪಕ್ಷಗಳು ಅಪಾಯಕಾರಕವಾಗಿದ್ದು ಆಡಳಿತವನ್ನು ಸಾಗಿಸಿಕೊಂಡು ಹೋಗಲು ಅನರ್ಹವಾಗಿವೆ. ಆದುದರಿಂದ ಭಾವೀ ರಾಜಕೀಯ ಪಕ್ಷಗಳು ಸಾಮಾಜಿಕ ಆರ್ಥಿಕ ಹಾಗೂ ಜಾನಪದೀಯ ಕಾರ್ಯಕ್ರಮದ ತಳಹದಿಯ ಮೇಲೆ ಕಟ್ಟಲ್ಪಡಬೇಕೆಂದು ಹೇಳಿದರು. ರಾಷ್ಟ್ರೀಯ ಮುಸಲ್ಮಾನರು ದೇಶದ ಸ್ವಾತಂತ್ರ್ಯಕ್ಕಾಗಿ ವೀರೋಚಿತ ಪಾತ್ರವನ್ನು ವಹಿಸಿದ್ದನ್ನು ಜಯಪ್ರಕಾಶರು ಬಣ್ಣಿಸಿ ಜಾತಿವಾಚಕ ಹೆಸರನ್ನು ಬಿಟ್ಟು ಬಿಡಬೇಕಾಗಿ ಬಿನ್ನವಿಸಿಕೊಂಡರು. ಕಾಂಗ್ರೆಸ್ ಧುರೀಣರು ಈ ಮೊದಲು ಹೇಳುತ್ತ ಬಂದುದನ್ನು ಜಯಪ್ರಕಾಶರು ರಾಷ್ಟ್ರೀಯ ಮುಸಲ್ಮಾನರ ಸಭೆಯಲ್ಲಿ ಹೇಳಿದರು. ಪಾಕಿಸ್ತಾನ ಮತ್ತು ಹಿಂದುಸ್ತಾನಗಳಲ್ಲಿಯ ಜಾತ್ಯಂಧ ಪಕ್ಷಗಳು ಇನ್ನು ಮೇಲಾದರೂ ತಮ್ಮ ಜಾತ್ಯಂಧ ದೃಷ್ಟಿಯನ್ನು ಬಿಟ್ಟುಗೊಟ್ಟು ಶುದ್ಧ ರಾಷ್ಟ್ರೀಯ ಧೋರಣದಿಂದ ಕಾರ್ಯ ಮಾಡಹತ್ತಿದರೆ ಎಲ್ಲವೂ ಸುಗಮವಾಗಿ ಹೋಗುವದೆಂಬಲ್ಲಿ ಸಂದೇಹವಿಲ್ಲ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಆಹಾರ ಪರಿಸ್ಥಿತಿ

ಹಿಂದುಸ್ತಾನ ಎರಡು ತುಂಡುಗಳಾಗಿ ವಿಭಾಗಿಸಲ್ಪಟ್ಟದ್ದರಿಂದ ಪಾಕಿಸ್ತಾನ ಪ್ರದೇಶದಿಂದ ಆಹಾರ ಧಾನ್ಯಗಳು ಬರಲಿಕ್ಕಿಲ್ಲವೇ ಎಂಬ ಬಗ್ಗೆ ಅನೇಕರಲ್ಲಿ ಸಂಶಯ ಮನೆಮಾಡಿತ್ತು. ಸಿಂಧ ಸರಕಾರವು ಮೊದಲು ಗೊತ್ತುಪಡಿಸಿದಂತೆ ಗೋದಿಯನ್ನು ಕಳಿಸಲಿಲ್ಲೆಂದು ಸುದ್ದಿ ಪ್ರಕಟವಾದ್ದರಿಂದ ಈ ಭೀತಿಗೆ ಮತ್ತಷ್ಟು ಪುಷ್ಟಿ ದೊರೆಯಿತು. ಈ ಸಂಬಂಧದಲ್ಲಿ ಪಾಕಿಸ್ತಾನ ಸರಕಾರದ ಧೋರಣೆ ಇನ್ನೂ ಪೂರ್ಣವಾಗಿ ಗೊತ್ತಾಗಿರದಿದ್ದರೂ ಕೇಂದ್ರಸರಕಾರದ ಆಹಾರ ಮಂತ್ರಿಗಳಾದ ಡಾ. ರಾಜೇಂದ್ರ ಪ್ರಸಾದರು ಇತ್ತೀಚೆ ಕೂಡ್ರದ ಆಹಾರ ಪರಿಷತ್ತಿನಲ್ಲಿ ಅಪ್ಪಣೆ ಕೊಡಿಸಿದ ಆಶ್ವಾಸನಗಳಿಂದ ಸ್ವಲ್ಪ ಧೈರ್ಯ ಬಂದಂತಾಗಿದೆ. ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳ ಆಹಾರ ಧೋರಣೆ ಒಂದೇ ಮಾದರಿಯದಾಗುವದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಘಟನೆಯಿಂದ ಇದು ಸಾಧ್ಯವಿರದಿದ್ದರೂ ಎರಡೂ ಸಾಮಂತ ಸರಕಾರ ಪ್ರದೇಶಗಳಲ್ಲಿ ಪದಾರ್ಥಗಳ ವಿನಿಮಯ ನಡೆಯಲು ಯಾವ ಅಡ್ಡಿಯೂ ಇಲ್ಲ. ಸಿಂಧಕ್ಕೆ ಬಟ್ಟೆಯನು ಕಳಿಸಿ ಅಲ್ಲಿಂದ ಆಹಾರ ಪದಾರ್ಥಗಳನ್ನು ತರಿಸಿಕೊಳ್ಳಲು ಯಾವ ಪ್ರತ್ಯವಾಯವೂ ಉಳಿಯದೆಂಬದಾಗಿ ಬಾಬು ರಾಜೇಂದ್ರಪ್ರಸಾದರು ಹೇಳಿದ್ದು ಯೋಗ್ಯವಾಗಿದೆ. ಪರದೇಶಗಳೊಡನೆ ಪದಾರ್ಥಗಳ ವಿನಿಮಯ ನಡೆಯುತ್ತಿರುವಾಗ ಹಿಂದುಸ್ತಾನದಲ್ಲಿಯ ಎರಡು ತುಂಡುಗಳಿಗೆ ನಡೆಯಲು ಯಾವ ಅಡಚಣೆಯೂ ಇಲ್ಲ. ಈ ರೀತಿ ಪರಸ್ಪರರಲ್ಲಿ ಅವಶ್ಯಕ ಒಡಂಬಡಿಕೆಯಾಗಿ ಆಹಾರ ಪರಿಸ್ಥಿತಿ ಸಮಾಧಾನಕರವಾಗಿ ಬಗೆಹರಿಯುವುದೆಂದು ಆಶಿಸಬೇಕಾಗಿದೆ. ಮುಂಬಯಿ ಪ್ರಾಂತದ ಆಹಾರ ಪರಿಸ್ಥಿತಿ ಬಹಳ ಕೆಟ್ಟದ್ದು ಕೇವಲ ಏಳು ವಾರಗಳ ವರೆಗೆ ಸಾಲುವಷ್ಟು ಮಾತ್ರ ಆಹಾರ ಪದಾರ್ಥಗಳಿದ್ದುವು. ಆದರೆ ಸಕಾಲದಲ್ಲಿ ಕೇಂದ್ರ ಸರಕಾರದವರು ಆಹಾರ ಪದಾರ್ಥಗಳನ್ನು ಒದಗಿಸಿದ್ದರಿಂದ ಈ ಗಂಡಾಂತರ ತಪ್ಪಿತೆಂದು ಮುಂಬಯಿ ಆಹಾರ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು. ಇದರಿಂದ ಜನತೆಗೆ ಮತ್ತೆ ಧೈರ್ಯ ಬಂದಂತಾಗಿದೆಯೆಂದು ಬೇರೆ ಹೇಳಬೇಕಿಲ್ಲ. ಮದ್ರಾಸಪ್ರಾಂತಕ್ಕೂ ಸಕಾಲಕ್ಕೆ ಸಹಾಯ ಸಿಕ್ಕಿದ್ದರಿಂದ ಅಲ್ಲಿಯೂ ಕೊರತೆಯ ಅಂಜಿಕೆ ತಪ್ಪಿದಂತಾಗಿದೆ.

ಸಿಲ್ಹೆಟ ಮತಗಣನೆ

ಬ್ರಿಟಿಶ್ ಸರಕಾರದ ಯೋಜನೆಯನ್ವಯ ಸಿಲ್ಹೆಟನಲ್ಲಿ ಸಾರ್ವತ್ರಿಕ ಮತಪ್ರದಾನ ನಡೆದು ಸಿಲ್ಹೆಟ ಜಿಲ್ಹೆಯನ್ನು ಪೂರ್ವ ಬಂಗಾಲದಲ್ಲಿ ಸೇರಿಸಬೇಕೆಂದು ಬಹುಮತದಿಂದ ಗೊತ್ತಾಯಿತು. ಜಿಲ್ಹೆಗಿರುವ ಮತಗಳಲ್ಲಿ ಪೂರ್ವಬಂಗಾಲಕ್ಕೆ ಕೂಡಿಸಬೇಕೆಂಬದಕ್ಕೆ ೫೫೦೦೦ ಮತಗಳು ಹೆಚ್ಚಿಗೆ ಬಿದ್ದವು. ಸಿಲ್ಹೆಟ ಜಿಲ್ಹೆಯಲ್ಲಿನ ಈ ಮತದಾರರನ್ನು ಪೃಥಕ್ಕರಿಸಿ ನೋಡಿದ್ದಾದರೆ ಮುಸಲ್ಮಾನ ಮತದಾರರ ಸಂಖ್ಯೆಯೆ ಹೆಚ್ಚಿಗಿದೆಯೆಂಬುದು ಗೊತ್ತಾಗುವದು. ಆ ಮತದಾರರಾದರೂ ಕೇವಲ ವಿಶಿಷ್ಟ ಹಿತಸಂಬಂಧವುಳ್ಳವರು. ಜನ ಸಾಮಾನ್ಯಕ್ಕೆ, ಕೂಲಿಕಾರರಿಗೆ ಮತಾಧಿಕಾರವಿಲ್ಲ. ಜಿಲ್ಹೆಯ ಪ್ರಚಂಡ ಜನಸಮೂಹಕ್ಕೆ ಮತಾಧಿಕಾರವಿಲ್ಲೆಂದಬಳಿಕ ಈ ನಿರ್ಣಯವನ್ನು ಇಡೀ ಜಿಲ್ಹೆಯ ಜನತೆಯ ಮೇಲೆ ಹೇರುವದು ಯಾವ ದೃಷ್ಟಿಯಿಂದಲೂ ನ್ಯಾಯ್ಯವಾಗಲಾರದು. ಆದುದರಿಂದ ಗಡಿ ನಿರ್ಣಾಯಕ ಸಮಿತಿಯವರು ಬಹುಸಂಖ್ಯಾಕ ಹಿಂದೂ ಪ್ರದೇಶವನ್ನು ಈಗಿನಂತೆ ಅಸ್ಸಾಮದಲ್ಲಿಯೆ ಇರಿಸುವಂತೆ ನೋಡಿಕೊಳ್ಳಬೇಕು. ಆ ಭಾಗದ ಜನತೆಯ ಅಭಿಪ್ರಾಯವನ್ನು ತಿಳಿದುಕೊಂಡದ್ದಾದರೆ ಅವರು ಅಸ್ಸಾಮದಲ್ಲಿಯೆ ಇರಬಯಸುವರೆಂಬದು ಗೊತ್ತಾಗದಿರದು. ಅಲ್ಲದೆ ಸಿಲ್ಹೆಟಜಿಲ್ಹೆಯಾದರೂ ಕೊರತೆಯ ಜಿಲ್ಹೆ ಒಂದು ಕೊರತೆಯ ಜಿಲ್ಹೆಯನ್ನು ಮತ್ತೊಂದು ಕೊರತೆಯ ಪ್ರಾಂತದಲ್ಲಿ ಸೇರಿಸುವದು ಎಷ್ಟರ ಮಟ್ಟಿಗೆ ಸಮಂಜಸವೆಂಬುದು ವಿಚಾರ ಮಾಡತಕ್ಕದ್ದಿದೆ. ವಿಶಿಷ್ಟ ಹಿತಸಂಬಂಧದವರನ್ನು ಹಿಡಿದು ಮುಸ್ಲಿಂಲೀಗಿನವರು ಮತಪ್ರದಾನದಲ್ಲಿ ನಡೆಸಿದ ಕೈವಾಡದಿಂದ ಇಡೀ ಜಿಲ್ಹೆಯೂ ಮನಸ್ಸಿನ ವಿರುದ್ಧ ಪೂರ್ವ ಬಂಗಾಲದಲ್ಲಿ ಸೇರುವ ಪ್ರಸಂಗ ಬಂದಿದೆ.

ಹೊಸ ಗವರ್ನರ ಜನರಲ್‌ರು

ಅಗಸ್ಟ ೧೫ ಕ್ಕೆ ಹಿಂದುಸ್ತಾನ, ಪಾಕಿಸ್ತಾನವೆಂಬ ಎರಡು ಸಾಮಂತ ಸ್ವರಾಜ್ಯ ಸರಕಾರಗಳು ಸ್ಥಾಪಿತವಾದ ಬಳಿಕ ಹಿಂದುಸ್ತಾನಕ್ಕೆ ಲಾರ್ಡ ಮೌಂಟಬ್ಯಾಟನ್‌ರು ಮತ್ತು ಪಾಕಿಸ್ತಾನಕ್ಕೆ ಜನಾಬ ಜಿನ್ನಾರವರು ಗವರ್ನರ ಜನರಲ್‌ರಾಗಬೇಕೆಂದು ಸೂಚಿಸಲಾಗಿದ್ದು ಬ್ರಿಟಿಶ್ ಸರಕಾರದವರು ಅದಕ್ಕೆ ಒಪ್ಪಿದ್ದಾರೆಂದು ಮುಖ್ಯ ಮಂತ್ರಿ ಅಟ್ಲಿಯವರು ಸಾರಿರುವರು. ಎರಡೂ ಸಾಮಂತ ಸರಕಾರಗಳಿಗೆ ಒಬ್ಬನೆ ಗವರ್ನರ ಜನರಲ್ಲನಿರಬೇಕೆಂದು ಮೊದಲು ಯೋಜಿಸಲಾಗಿದ್ದರೂ ಮುಸ್ಲಿಂ ಲೀಗಿನವರು ಜನಾಬ ಜಿನ್ನಾರ ಹೆಸರನ್ನು ಪಾಕಿಸ್ತಾನಕ್ಕೆ ಸೂಚಿಸಿ ಒಂದು ಬಗೆಯಿಂದ ಮಾತು ಮುರಿದರೆಂಬುದು ಸ್ಪಷ್ಟವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಎರಡೂ ಸರಕಾರಗಳಿಗೆ ಒಬ್ಬನೆ ಗವರ್ನರ ಜನರಲ್ಲನಿದ್ದರೆ ಅನೇಕ ಪ್ರಶ್ನೆಗಳು ಸಮಾಧಾನಕರವಾಗಿ ಬಗೆಹರಿಯಲು ಅವಕಾಶವಾಗುತ್ತಿದ್ದಿತು. ಶಾಂತಿ ಪ್ರಸ್ಥಾಪನೆಯಲ್ಲಿಯೂ ಸಹಾಯಕವಾಗುತ್ತಿದ್ದಿತು. ಆದರೆ ಮುಸ್ಲಿಂ ಲೀಗಿನವರು ಈ ಸಮಂಜಸ ಮಾರ್ಗವನ್ನು ಅನುಸರಿಸದೆ ಬ್ಯಾ. ಜಿನ್ನಾರವರೆ ಗವರ್ನರ ಜನರಲ್‌ರಾಗಬೇಕೆಂದು ಸೂಚಿಸಿದರು. ಮಹಾತ್ಮಾಗಾಂಧಿಯವರು ಈ ವಿಷಯವನ್ನು ತಮ್ಮ ಪ್ರಾರ್ಥನೋತ್ತರ ಸಭೆಯಲ್ಲಿ ಎತ್ತಿ ಇದು ವಚನಭಂಗವೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುವರು. ಆದರೂ ಬ್ಯಾ. ಜಿನ್ನಾರವರು ಖಲೀಫರಂತೆ ಆಡಳಿತ ಸಾಗಿಸಿ ಪಾಕಿಸ್ತಾನದ ಕೀರ್ತಿಯನ್ನು ಬೆಳಗಬೇಕೆಂದು ಹಾರಯಿಸಿರುವರು. ಜನಾಬ ಜಿನ್ನಾರವರ ಸತ್ವಪರೀಕ್ಷೆಯ ಸಮಯವೇ ಬಂದಂತಾಗಿದೆಯೆಂದೂ ಅವರು ಹೇಳಿರುವರು. ಕಾಂಗ್ರೆಸ್ಸು ಲಾರ್ಡ ಮೌಂಟಬ್ಯಾಟನ್ನರ ಹೆಸರು ಸೂಚಿಸಿದ್ದರಲ್ಲಿ ದೌರ್ಬಲ್ಯವೇನೂ ಇಲ್ಲೆಂದು ಅವರು ಸ್ಪಷ್ಟಪಡಿಸಿರುವರು. ಬ್ಯಾ. ಜಿನ್ನಾರವರು ಅತ್ಯಂತ ನ್ಯಾಯ ರೀತಿಯಿಂದ ಮತ್ತು ಪಾಕಿಸ್ತಾನ ಹಿಂದುಸ್ತಾನಗಳ ಹಿತಸಂಬಂಧಗಳಲ್ಲಿ ನಿರರ್ಥಕ ತಿಕ್ಕಾಟವೇಳದಂತೆ ತಮ್ಮ ಆಡಳಿತವನ್ನು ಸಾಗಿಸಿ ತಮ್ಮ ವೇಮಕ ನಿರ್ದುಷ್ಟವಾಗಿತ್ತೆಂದು ಕೃತಿಯಿಂದ ಸಿದ್ಧಮಾಡಿ ತೋರಿಸಬೇಕು.

ಮಾತು ಸಾಲದು, ಕೃತಿ ಬೇಕು

ಪಾಕಿಸ್ತಾನದ ನಿಯೋಜಿತ ಗವರ್ನರ ಜನರಲ್ಲರಾದ ಜನಾಬ ಜಿನ್ನಾ ಸಾಹೇಬರು ದಿಲ್ಲಿಯ ತಮ್ಮ ನಿವಾಸಸ್ಥಾನದಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ತಮ್ಮ ಆಡಳಿತದ ಸ್ಪಷ್ಟೀಕರಣ ಮಾಡುತ್ತ ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳು ಸಂರಕ್ಷಿಸಲ್ಪಡುವವೆಂದೂ ತಾವು ಬ್ರಿಟಿಶ ಸರಕಾರದಿಂದ ನೇಮಕವಾಗಿರದೆ ಜನತೆಯಿಂದ 'ಆರಿಸಲ್ಪಟ್ಟವರಾದ್ದರಿಂದ ಸರ್ವಾಧಿಕಾರ ಪಡೆದವರೆಂದೂ ಒಳ್ಳೆ ಅಧ್ಯತೆಯಿಂದ ಹೇಳಿಕೊಂಡರು. ಪಾಕಿಸ್ತಾನದಲ್ಲಿ ಮೌಲಾನಾರ ರಾಜ್ಯವಾಗುವದೇ ಎಂದು ಕೇಳಿದ್ದಕ್ಕೆ, 'ಇಲ್ಲ, ಎಲ್ಲ ಜಾತಿ ಪಂಗಡಗಳ ರಾಜ್ಯವಾಗುವದೆಂದು ನೇರವಾಗಿ ಉತ್ತರ ಕೊಟ್ಟು, ಎಲ್ಲ ಜನರನ್ನೂ ಸಮಾಧಾನಪಡಿಸುವ ಗೋಜಿಗೆ ಹೋಗದೆ ಹಿಂದುಸ್ತಾನದಲ್ಲಿ ಪಂಡಿತರ ರಾಜ್ಯಕ್ಕೆ ಏನೆನ್ನುವಿರಿ' ಎಂದು ಜಿನ್ನಾರು ತಿರುಗಿ ಪ್ರಶ್ನೆ ಹಾಕಿದರು. ಪಾಕಿಸ್ತಾನದಲ್ಲಿ ಮೌಲಾನಾರ ರಾಜ್ಯವೂ ಇಷ್ಟವಲ್ಲ, ಹಿಂದುಸ್ತಾನದಲ್ಲಿ ಪಂಡಿತರ ರಾಜ್ಯವೂ ಬೇಕಿಲ್ಲ. ಎರಡೂ ಸಾಮಂತ ಸರಕಾರಗಳಲ್ಲಿ ಪ್ರಜಾನುವರ್ತಿಯಾದ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಮನ್ನಿಸುವ ಆಡಳಿತ ನಡೆಯಬೇಕಾದುದು ಅವಶ್ಯವಾಗಿದೆ. ಅಲ್ಪಸಂಖ್ಯಾಕರ ಹಕ್ಕುಬಾಧ್ಯತೆಗಳು ರಕ್ಷಿಸಲ್ಪಡುವವೆಂದು ಜಿನ್ನಾ ಸಾಹೇಬರೇನೋ ಆಶ್ವಾಸನ ಕೊಟ್ಟಿರುವರು. ಆದರೆ ಆಶ್ವಾಸನ ಕೃತಿಯಲ್ಲಿಳಿದದ್ದಾದರೆ ಮಾತ್ರ ಎಲ್ಲವೂ ಸರಿಯಾಗಿ ಸಾಗುವದು. ಬರಿ ಮಾತು ನಿರರ್ಥಕ. ಕೃತಿಯಿಂದ ಇದನ್ನು ಸಿದ್ಧ ಮಾಡಬೇಕೆಂದು ಮಹಾತ್ಮಾ ಗಾಂಧಿಯವರು ಪ್ರಾರ್ಥನೋತ್ತರ ಸಭೆಯಲ್ಲಿ ಹೇಳಿರುವರು. ಸಿಂಧದ ಡಾ. ಚೊಯಿತರಾಮ ಗಿದ್ವಾನಿಯವರು ಜಿನ್ನಾರ ಆಶ್ವಾಸನದ ಬಗ್ಗೆ ಅಭಿಪ್ರಾಯಪಡುತ್ತ ಈ ಬಗೆಯ ವಿಶ್ವಾಸ ಲೀಗಿನವರು ತಮ್ಮ ಕೃತಿಯಿಂದಲೆ ಹುಟ್ಟಿಸಬಲ್ಲರೆಂದು ಹೇಳಿರುವರು. ಇಡೀ ಭಾರತದಲ್ಲಿಯ ೧೦೦ಕ್ಕೆ ೨೫ ರಷ್ಟು ಮುಸಲ್ಮಾನ ಅಲ್ಪಸಂಖ್ಯಾಕರು ೭೫ ರಷ್ಟು ಹಿಂದುಗಳ ಮೇಲೆ ವಿಶ್ವಾಸವಿಡುವದಿಲ್ಲೆಂದಬಳಿಕ ಸಿಂಧದಲ್ಲಿಯ ನೂರಕ್ಕೆ ೩೦ ರಷ್ಟು ಹಿಂದುಗಳುಹೇಗೆ ವಿಶ್ವಾಸವಿಡಬೇಕೆಂದು ಕೇಳಿರುವರು. ಪಾಕಿಸ್ತಾನ ಸರಕಾರ ಸ್ಥಾಪಿತವಾಗುವ ಮೊದಲೆ ಸಿಂಧದಲ್ಲಿ ಲೀಗಿನವರ ಛಲನೆ ಪ್ರಾರಂಭವಾದುದನ್ನು ನೋಡಿದರೆ ಪಾಕಿಸ್ತಾನ ಸರಕಾರದಲ್ಲಿ ಅದೆಷ್ಟು ಛಲನೆ ನಡೆಯಬಹುದೆಂಬುದೆ ಡಾ. ಚೊಯಿತರಾಮರ ಭೀತಿಗೆ ಕಾರಣವೆಂದು ಹೇಳಬಹುದಾಗಿದೆ. ಇದನ್ನು ಹೋಗಲಾಡಿಸುವದು ಕರ್ತವ್ಯವಾಗಿದೆ. ಈಗ ನಡೆದ ಹತ್ಯಾಕಾಂಡವನ್ನು ಮೊದಲು ನಿಲ್ಲಿಸುವದು ಅತ್ಯವಶ್ಯವಾಗಿದೆ. ಈ ಬಗ್ಗೆ ಬ್ಯಾ. ಜಿನ್ನಾರವರು ಮೊದಲು ತಮ್ಮ ಗಮನವನ್ನು ಕೊಡಬೇಕು. ಬ್ಯಾ. ಜಿನ್ನಾರ ಆಡಳಿತ ನಿರ್ದುಷ್ಟ ಮತ್ತು ನ್ಯಾಯ್ಯವಾಗಿದೆಯೆಂಬದು ಅವರ ಭಾವೀ ಕೃತ್ಯಗಳಿಂದಲೆ ಸಿದ್ಧವಾಗಬಲ್ಲದೆಂಬುದು ನಿರ್ವಿವಾದವಾಗಿದೆ.

ಸ್ವಾತಂತ್ರ್ಯ ಮಸೂದೆಯ ಸ್ವೀಕಾರ

ಬ್ರಿಟಿಶ್ ಮುಖ್ಯ ಮಂತ್ರಿಗಳು ಕಾಮನ್ಸ ಸಭೆಯಲ್ಲಿ ಮಂಡಿಸಿದ ಹಿಂದೀ ಸ್ವಾತಂತ್ರ್ಯ ಮಸೂದೆಯ ಮೂರೂ ವಾಚನಗಳು ಪಾಸಾಗಿ ಲಾರ್ಡ್ಸ ಸಭೆಯಲ್ಲಿಯೂ ಅದು ಸ್ವೀಕೃತವಾಯಿತು. ಈ ರೀತಿ ಪಾರ್ಲಿಮೆಂಟಿನ ಎರಡೂ ಗೃಹಗಳಲ್ಲಿ ಸ್ವೀಕೃತವಾದ ಈ ಮಸೂದೆಗೆ ಅರಸರ ಅಂಕಿತ ಬಿದ್ದುದರಿಂದ ಅದು ಕಾಯಿದೆಯಾಗಿ ಜಾರಿಯಲ್ಲಿ ಬಂದಂತಾಯಿತು. ೧೮೫೮ ರಲ್ಲಿ ಭಾರತದ ಅಧಿಕಾರಸೂತ್ರವನ್ನು ವಹಿಸಿಕೊಂಡ ಬ್ರಿಟಿಶ್ ಸರಕಾರ ಇಂದು ಅದನ್ನು ಹಿಂದೀಯರಿಗೆ ಒಪ್ಪಿಸಿಕೊಟ್ಟಿತು. ಇಷ್ಟು ಬೇಗ ಇದು ಸಂಭವಿಸಬಹುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಘಟನೆಗಳೇ ಅಷ್ಟು ತ್ವರಿತವಾಗಿ ಸಾಗಿದ್ದರಿಂದ ಎಲ್ಲರ ನಿರೀಕ್ಷಣೆಗಿಂತ ಮೊದಲೆ ಬ್ರಿಟಿಶರು ಅಧಿಕಾರತ್ಯಾಗ ಮಾಡಬೇಕಾಯಿತು. ನಾವು ಈ ಮೊದಲು ಅಭಿಪ್ರಾಯ ಪಟ್ಟಂತೆ ಹಿಂದುಸ್ತಾನವನ್ನು ಒಡೆಯದೆ ಬ್ರಿಟಿಶರು ಹೊರಟು ಹೋಗಿದ್ದರೆ ಹೆಚ್ಚು ಒಳಿತಾಗುತಿತ್ತು. ಆದರೆ ಅದು ಶಕ್ಯವಾಗದಿದ್ದುದು ಶೋಚನೀಯವಾಗಿದೆ. ಈ ಮಸೂದೆಯ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸುವಾಗ ಮುಖ್ಯ ಮಂತ್ರಿ ಅಟ್ಲಿಯವರು ವ್ಯಕ್ತಪಡಿಸಿದ ಶುಭಾಶಯಗಳ ಬಗ್ಗೆ ಭಾರತೀಯರು ಅವರಿಗೆ ಋಣಿಯಾಗಬೇಕಾಗಿದೆ. ಇಂದು ವಿಭಾಗಿಸಲ್ಪಟ್ಟ ಭಾರತದಲ್ಲಿ ಮುಂದೆ ಸಂಯುಕ್ತ ರಾಜ್ಯಘಟನೆ ಏರ್ಪಟ್ಟು ಅದು ಹಿಂದುಸ್ತಾನದ ಅಖಂಡತ್ವವನ್ನು ಕಾಯ್ದುಕೊಂಡು ತನ್ನ ಘಟಕಗಳಿಗೆ ಸ್ವಾತಂತ್ರ್ಯವನ್ನು ದಯಪಾಲಿಸಲಿ ಎಂದು ಅವರು ಹಾರಯಿಸಿದರು. ಇವೆರಡೂ ಡೊಮಿನಿಯನ್‌ಗಳ ಸುಖಶಾಂತಿ ಪ್ರಗತಿಗಾಗಿ ಬ್ರಿಟಿಶರು ಸಹಾಯ ಮಾಡಲು ಯಾವಾಗಲೂ ಸಿದ್ಧರಿರುವದಾಗಿಯೂ ಆಶ್ವಾಸಿಸಲಾಯಿತು. ವಿರೋಧಿ ಪಕ್ಷದ ಪರವಾಗಿ ಮಾತಾಡುತ್ತ ಅರ್ಲ ವಿಂಟರಟನ್‌ರು ಹಿಂದೀಯರು ಹಿಂದೆ ಬ್ರಿಟಿಶರ ಶತ್ರುಗಳಾಗಿದ್ದ ಮಾತ್ರಕ್ಕೆ ಈಗ ಮಿತ್ರರೇಕಾಗಬಾರದೆಂದು ಕೇಳಿದರು. ಬ್ರಿಟನ್ನದೊಡನೆ ವೈರ ಬೆಳೆಸಬೇಕೆಂಬ ಇಚ್ಛೆ ಯಾವ ಭಾರತೀಯನಿಗೂ ಇಲ್ಲ. ಆದರೆ ಮಿತ್ರತ್ವದ ನೆವಮಾಡಿ ಭಾರತದ ಸರ್ವಸ್ವವನ್ನು ಹರಣಮಾಡಲು ಮಾತ್ರ ಯಾವ ಬ್ರಿಟಿಶನಿಗೂ ಇನ್ನು ಅವಕಾಶ ದೊರೆಯಲಾರದೆಂಬುದು ಖಂಡಿತ. ಇನ್ನು ಮುಂದೆ ಬ್ರಿಟನ್ ಮತ್ತು ಹಿಂದುಸ್ತಾನದಲ್ಲಿಯ ಎರಡೂ ಸಾಮಂತ ಸರಕಾರಗಳ ನಡುವೆ ಸಮಾನ ದರ್ಜೆಯ ಮಿತ್ರತ್ವದ ಬಂಧನ ಬಿಗಿಯಾಗಿ ಎಲ್ಲೆಲ್ಲಿಯೂ ಸುಖಶಾಂತಿ ಅಭಿವೃದ್ಧಿ ನೆಲೆಸಲೆಂದು ಬಯಸುತ್ತೇವೆ

ಹಿಂದೀ ಸ್ವಾತಂತ್ರ್ಯ ಮಸೂದೆ ಕಾಯದೆಯಾಯಿತು

ಪಾರ್ಲಮೆಂಟಿನಲ್ಲಿ ಚರ್ಚೆ

ಹಿಂದೀ ಸ್ವಾತಂತ್ರ್ಯ ಮಸೂದೆ ಬ್ರಿಟಿಶ್ ಪಾರ್ಲಮೆಂಟಿನಲ್ಲಿ ಅಭೂತಪೂರ್ವ ರಭಸದಿಂದ ಪಾಗಿ ಪಾಸಾದದ್ದು ವಿರೋಧಿ ಪಕ್ಷದವರ ಸಹಕಾರ ದಿಂದಲೇ. ಜೂ. ೧೬ ರ ಘೋಷಣೆ, ಡಿಸೆಂಬರ ೬ ರ ಘೋಷಣೆ, ಫೆಬ್ರುವರಿ ೨೦ ರ ಘೋಷಣೆ ಇವೆಲ್ಲವುಗಳ ಚರ್ಚೆಯ ಕಾಲದಲ್ಲಿ ಕಾಣಸುತ್ತಿದ್ದ ವಿರೋಧಿ ಪಕ್ಷದ ಕಠಾಯುಕ ವಾಗ್ಬಾರೆ ಈ ಬಾರಿ ಬಹಳಮಟ್ಟಿಗೆ ಅದೃಶ್ಯವಾಗಿತ್ತು. ಕಾನ್ಸರ್ವೇಟಿವ ಪಕ್ಷದವರು ಹಿಂದುಸ್ತಾನದಲ್ಲಿರುವ ತಮ್ಮ ಹಿತೆಯಾಗಿಗೆ ದೊರೆತ ಸೌಕರ್ಯಗಳಿಂದ ಸಂತುಷ್ಟರಾಗಿದ್ದಾರೆಂಬದಕ್ಕೆ ಇದು ಸಾಕ್ಷಿ. ಆ ಅರ್ಥಪೂರ್ಣ "ಅಲ್ಪಸಂಖ್ಯಾಕರ" ಸುದ್ದಿ ಬಹುಶಃ ಬಳಲೇ ಇಲ್ಲ. ಎಲ್ಲೋ ಕೆಲವರು ನರೇಂದ್ರರನ್ನು ನೆನೆದುಕೊಂಡು ಅವರ ಸ್ವಾತಂತ್ರ್ಯಕ್ಕೆ ಬ್ರಿಟನ್ನು ಮನ್ನಣೆ ಕೊಡಬೇಕೆಂದು ವಾದಿಸಿದರು. ಎಲ್ಲರೂ ಸಾಮೂಹ್ಯವಾಗಿ ಬ್ರಿಟಿಶ ಸಾಮ್ರಾಜ್ಯದ "ಈ ಎರಡು ಹೊಸ ಸಾಮಂತ ಸ್ವರಾಜ್ಯ"ಗಳನ್ನು ಸ್ವಾಗತಿಸಿದರು. ಸರ್ ಸ್ಟಾಫೋರ್ಡ ಕ್ರಿಪ್ಸರು ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಇಂಗ್ಲಂಡು ತುಮ್ಮನೆ ಕುಳಿತುಕೊಳ್ಳದೆ ಈ ಎರಡು ಸಾಮಂತ ರಾಜ್ಯಗಳ ಸುಖಸಮೃದ್ಧಿಗಾಗಿ ಪ್ರಯತ್ನಿಸುವದಾಗಿ ಸಾರಿದರು. ಆಯಾ ಹಿಂದುಸ್ತಾನದ ಮೇಲೆ ಬ್ರಿಟಿಶ ಪಾರ್ಲಮೆಂಟಿನ ಅಧಿಕಾರ ಸಮಾಪ್ತವಾಗಿ ಅಗಸ್ಟ ೧೫ ರಿಂದ ಎರಡೂ ಘಟನಾ ಸಮಿತಿಗಳ ಕೈಸೇರುವದು......

ಹಿಂದೀ ಸ್ವಾತಂತ್ರ್ಯ ಮಸೂದೆಯ ಚರ್ಚೆಯ ಕಾಲಕ್ಕೆ ಮುಖ್ಯ ಮಂತ್ರಿ ಅಟ್ಲಿಯವರೂ ಭಾರತ ಉಪಮಂತ್ರಿ ಹೆಂಡರಸನ್ನರೂ ಕೆಲವು ಮಹತ್ವದ ಸಂಗತಿಗಳನ್ನು ಸ್ಪಷ್ಟೀಕರಿಸಿದರು. ಅವುಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

● ವರ್ಮಾ ದೇಶ ಪ್ರಭುತ್ವ ನಿಜಾಮರಿಗೇ ತಿರುಗಿ ಹೋಗುವದು. ಆದರೆ ಅದು ಈಗ ಹಿಂದುಸ್ತಾನ ಸರಕಾರದ ಆಡಳಿತದಲ್ಲಿದೆ ಅದುದರಿಂದ ಆದರ ಆಡಳಿತವನ್ನು ಸದ್ಯಕ್ಕೆ ಬದಲಿಸುವಂತಿಲ್ಲ. ನಿಜಾಮರು ಈ ವಿಷಯದಲ್ಲಿ ಹಿಂದುಸ್ತಾನ ಸರಕಾರ ದೊಡನೆ ಒಪ್ಪಂದ ಮಾಡಿಕೊಳ್ಳಬೇಕು.

● ಕಲಕತ್ತೆಯನ್ನು ಅಂತರ್ ರಾಷ್ಟ್ರೀಯ ಅಥವಾ "ಪಟ್ಟಿ" ಬಂದರವನ್ನಾಗಿ ಮಾಡುವ ವಿಚಾರ ಬ್ರಿಟಿಶ ಸರಕಾರದ ವಿಚಾರದಲ್ಲಿಲ್ಲ. ಅದು ಹಿಂದೂ ಬಹುಸಂಖ್ಯಾಕ ಬಂಗಾಲದಲ್ಲಿ ರುವದರಿಂದ ಪಶ್ಚಿಮ ಬಂಗಾಲಕ್ಕೇ ಸೇರುವದು.

● ಅಂದಮಾನ ಮತ್ತು ನಿಕೋಬಾರ ದ್ವೀಪಗಳು ಹಿಂದೀ ಒಕ್ಕೂಟದ ಅಧಿಕಾರ ಕ್ಕೊಳಪಡುವವು. ಬ್ರಹ್ಮದೇಶದ ಸರಕಾರ ಅದರ ಮೇಲೆ ಮಂಡಿಸಿದ ಹಕ್ಕನ್ನು ಗಮನಿಸ ಲಾಗಿಲ್ಲ.

● ಬಂಗಾಲ ವಿಭಜನೆಯ ಗಡಿಗಳನ್ನು ನಿರ್ಣಯಿಸುವಾಗ ಮುಸ್ಲಿಮ ಮತ್ತು ಮುಸ್ಲಿಮೇತರ ಜನಸಂಖ್ಯೆಯನ್ನು ಮುಖ್ಯವಾಗಿ ಗಮನಿಸಲಾಗುವದು. ಪಂಜಾಬ ವಿಭಜನೆಯ ಗಡಿಗಳ ನಿರ್ಣಯದಲ್ಲಿ ಸೀಖರ ಗುರುದ್ವಾರಗಳಿರುವ ಸ್ಥಳಗಳನ್ನೂ ಗಮನಿಸಲಾಗುವದು.

● ಹಿಂದುಸ್ತಾನದ ಸಮಸ್ಯೆಯನ್ನು ಬಗೆಹರಿಸಿದ ರೀತಿಯಿಂದಾಗಿ ಇನ್ನು ಬ್ರಿಟಿಶ ಸರಕಾರ ಸಂಸ್ಥಾನಗಳೊಡನೆ ಮಾಡಿಕೊಂಡ ಒಡಂಬಡಿಕೆಗಳನ್ನು ಪೂರೈಸಲಾರದು. ಸಂಸ್ಥಾನಗಳು ಎರಡರಲ್ಲಿ ಒಂದು ಸಾಮಂತರಾಜ್ಯವನ್ನು ಸೇರುವದೇ ಶ್ರೇಯಸ್ಕರವೆಂದು ಸರಕಾರದ ಮತವಿದ್ದರೂ ಆ ಬಗ್ಗೆ ಸಂಸ್ಥಾನಗಳನ್ನು ಒತ್ತಾಯಗೊಳಿಸುವದಿಲ್ಲ. ಸ್ವತಂತ್ರವಾಗಬೇಕೆಂದು ನಿರ್ಧರಿಸಿದ ಸಂಸ್ಥಾನಗಳು ತಿರುಗೊಮ್ಮೆ ಯೋಚಿಸಿ ನೋಡಬೇಕು.

ಅಟ್ಲಿಯವರು ಹಿಂದುಸ್ತಾನ ವಿಭಜನೆಯಾದುದಕ್ಕೆ ತಿರುಗೊಮ್ಮೆ ವಿಷಾದವನ್ನು ವ್ಯಕ್ತಗೊಳಿಸಿ ಅದು ಮುಂದೆ ಸಂಯುಕ್ತ ಘಟನೆಯ ಮೂಲಕ ಅಖಂಡವಾಗಲೆಂದು ಹಾರೈಸಿದರು.

ಬಂಗಾಲ ಮತ್ತು ಪಂಜಾಬ

ಇತ್ತ ಗಡಿನಿರ್ಣಯ ಸಮಿತಿಗಳು ಕೆಲಸವನ್ನು ಮುಂದೆ ಸಾಗಿಸಿವೆ ಅಸಾಮ ಪ್ರಾಂತದ ಸಿಲ್ಹೆಟ ಜಿಲ್ಲೆಯ ಮತಗಣನೆಯ ಪರಿಣಾಮ ಹೊರಬಿದ್ದಿದೆ. ಅದು ೫೫ ಸಾವಿರ ಮತಾಧಿಕ್ಯದಿಂದ ಪೂರ್ವ ಬಂಗಾಲದಲ್ಲಿ ಸೇರಲು ನಿರ್ಧರಿಸಿದೆ. ಮತದಾನದಲ್ಲಿ ಅನೇಕ ಅನ್ಯಾಯಕ ಕೃತ್ಯಗಳು ನಡೆದವೆಂದು ಆರೋಪಿಸಲಾಗುತಿದೆ. ಆದರೂ ಅವಾವುವೂ ಈ ನಿರ್ಣಯವನ್ನು ಬದಲಿಸಲು ಸಮರ್ಥವಾಗಲಿಕ್ಕಿಲ್ಲ. ಈಗ ಅಸಾಮದ ಉಳಿದ ಭಾಗಕ್ಕೆ ಹೊಂದಿಕೊಂಡ ಮುಸ್ಲಿಮೇತರ ಪ್ರದೇಶಗಳನ್ನು ಅಸಾಮದಲ್ಲಿ ಸೇರಿಸಲು ಪ್ರಯತ್ನಗಳು ನಡೆದಿವೆ ಗಡಿ ನಿರ್ಣಯ ಸಮಿತಿಗೆ ಈ ವಿಭಾಗದ ಮೇಲೂ ಅಧಿಕಾರವಿದ್ದು, ಅದು ವಿಚಾರಣೆ ನಡೆಸಿಯೇ ತೀರುವದಾದರೂ ಅಗಸ್ಟ ೧೫ ರಿಂದ ಗಡಿ ನಿರ್ಣಯ ಸಮಿತಿಯ ನಿರ್ಣಯ ಹೊರಬೀಳುವ ವರೆಗೆ ಈ ಜಿಲ್ಲೆ ಬಂಗಾಲದ ಆಡಳಿತಕ್ಕೊಳಗಾಗುವದೆಂದು ಸ್ವಾತಂತ್ರ್ಯ ಕಾಯದೆಯಲ್ಲಿ ಹೇಳಲಾಗಿರುವದರಿಂದ ಮನಸ್ತಾಪಕ್ಕೆ ಕಾರಣವಾಗಿದೆ.

ಇನ್ನು ಬಂಗಾಲದ ಪಶ್ಚಿಮ ಹಾಗು ಉತ್ತರ ಗಡಿಯ ನಿರ್ಣಯದ ವಿಷಯದಲ್ಲಿ ಕಾಂಗ್ರೆಸ್ಸೂ ಹಿಂದೂ ಮಹಾಸಭೆಯೂ ಸೀಖರೂ ಪರಸ್ಪರ ವಿರೋಧಿ ಬೇಡಿಕೆಗಳನ್ನು ಮಂಡಿಸಿದ್ದಾರೆ. ಕಾಂಗ್ರೆಸು ಒಪ್ಪಿಸಿದ ಮನವಿ ಒಂದು ದೊಡ್ಡ ಹೊತ್ತಿಗೆಯಾಗಿದ್ದು ಅಂಕೆಸಂಖ್ಯೆ ನಕ್ಷೆ ನಕಾಶೆಗಳಿಂದ ಕೂಡಿದೆಯಂತೆ. ಕಾಂಗ್ರೆಸ್ ಸೂಚನೆಯಂತೆ ಪಶ್ಚಿಮ ಬಂಗಾಲದಲ್ಲಿ ೨,೫೦,೩೨,೦೦೦ ಜನರೂ (ಅಂದರೆ ಇಡಿ ಬಂಗಾಲದ ನೂರಕ್ಕೆ ೪೫ ರಷ್ಟು) ೪೦,೧೩೭ ಚದರ ಮೈಲು ಪ್ರದೇಶವೂ (ಒಟ್ಟು ಪ್ರದೇಶದ ೧೦೦ ಕ್ಕೆ ೪೦) ಬರಬೇಕು. ವಿಭಜನೆಯ ನಂತರ ಅದಷ್ಟು ಮಟ್ಟಿಗೆ ಪಶ್ಚಿಮ ಬಂಗಾಲದಲ್ಲಿ ತಕ್ಕವಿದ್ದಷ್ಟು ಹಿಂದುಗಳೂ ಪೂರ್ವದಲ್ಲಿ ಮುಸ್ಲಿಮರೂ ಬರಬೇಕು ಮತ್ತು ಯಾವುದೊಂದು ನದಿ ಅಥವಾ ಇತರ ನೈಸರ್ಗಿಕ ಗಡಿಯನ್ನೇ ಉಪಯೋಗಿಸಬೇಕೆಂಬ ಮೊದಲಾದ ತತ್ವಗಳ ಮೇಲೆ ಕಾಂಗ್ರೆಸ್ ಸೂಚನೆಗಳು ಆಧರಿಸಿವೆ. (ಜಿಲ್ಲಾವಾರು ಬಹುಸಂಖ್ಯೆಯನ್ನು ಅನುಸರಿಸಿದರೆ ಪಶ್ಚಿಮ ಬಂಗಾಲಕ್ಕೆ ೧,೯೦,೦೦೦ ಜನಸಂಖ್ಯೆಯುಳ್ಳ ಪ್ರದೇಶ ದೊರಕುವದೆಂದು ಇಲ್ಲಿ ಗಮನಿಸಬೇಕು) ಇನ್ನು ಲೀಗಿನವರ ಬೇಡಿಕೆಯಲ್ಲಿ ಕಲಕತ್ತೆಯ ಬಂದರ ತಮಗೇ ದೊರೆಯಬೇಕೆಂದು ಮುಖ್ಯವಾದುದು. ಬಂಗಾಲ ಮಂತ್ರಿಮಂಡಲದ ಹಣಕಾಸಿನ ಮಂತ್ರಿ ಮಹಮ್ಮದ ಅಲ್ಲಿಯವರು ಕಲಕತ್ತೆಯನ್ನು ಮುಸ್ಲಿಮರು ಸುಮ್ಮನೆ ಬಿಟ್ಟುಕೊಡುವದಿಲ್ಲೆಂದಿದ್ದಾರೆ.

ಪಂಜಾಬ ವಿಭಜನೆಯಲ್ಲಿ ತೊಡಕುಗಳುತ್ಪನ್ನವಾಗಿವೆ ಸೀಖ ಜನಸಂಖ್ಯೆಯಲ್ಲಿ ನೂರಕ್ಕೆ ೮೪ ರಷ್ಟು ಪೂರ್ವ ಪಂಜಾಬದಲ್ಲಿ ಸೇರುವಂತೆ ಗಡಿ ನಿರ್ಣಯವಾಗಬೇಕೆಂದು ಜ್ಞಾನಿ ಕರ್ತಾರಸಿಂಗರು ಸಾಧಿಸುತ್ತಾರೆ. ಈ ಪ್ರಕಾರ ಎರಡೂ ಪಕ್ಷಗಳು ಪ್ರಾಂತದ ೨೯ ಜಿಲ್ಲೆಗಳಲ್ಲಿ ೧೫ ಜಿಲ್ಲೆಗಳ ಬಗ್ಗೆ ತಮ್ಮ ಬೇಡಿಕೆಯನ್ನು ಮಂಡಿಸಿವೆಯಂತೆ.

ಗಡಿನಾಡಿನ ಮತಗಣನೆಯ ಪರಿಣಾಮ ತಾ. ೨೦ ಕ್ಕೆ ಹೊರಬೀಳಲಿದೆ.

ಸಶಸ್ತ್ರ ಬಲವಿಭಜನೆ

ಹಿಂದುಸ್ತಾನದ ಸಶಸ್ತ್ರ ಬಲಗಳ ವಿಭಜನೆಯನ್ನು ಜಾತೀಯ ತಳಹದಿಯ ಮೇಲೆ ಮಾಡಲಾಗಿದ್ದು ಯಾವ ಯಾವ ರೆಜಿಮೆಂಟಿನಲ್ಲಿ ಯಾವ ಜಾತಿಯವರ ಸಂಖ್ಯಾಧಿಕ್ಯವಿರುವದೋ ಆ ಆಧಾರದ ಮೇಲೆ ಸೈನ್ಯವನ್ನು ಹಂಚಲಾಗಿದೆ. ವಿಭಜನ ಸಮಿತಿಯವರ ನಿರ್ಣಯದಂತೆ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ವಿಭಜನೆ ಈ ಕೆಳಗಿನಂತಾಗಿದೆ:

ಕಾಲ್ಬಲಗಳು: ಹಿಂದುಸ್ತಾನಕ್ಕೆ ೧೫ ರೆಜಿಮೆಂಟ, ಪಾಕಿಸ್ತಾನಕ್ಕೆ ೮.

ಕವಚಯುಕ್ತ ಅರ್ಮರ್ಡ ಬಲಗಳು: ಹಿಂದುಸ್ತಾನಕ್ಕೆ ೧೨, ಪಾಕಿಸ್ತಾನಕ್ಕೆ ೬ ರೆಜಿಮೆಂಟ.

ಫಿರಂಗಿ ಬಲಗಳು: ಹಿಂದುಸ್ತಾನಕ್ಕೆ ೧೮½ ರೆಜಿಮೆಂಟ, ಪಾಕಿಸ್ತಾನಕ್ಕೆ ೮½.

ಎಂಜಿನಿಯರ ಬಲಗಳು: ಹಿಂದುಸ್ತಾನಕ್ಕೆ ೬೧ ಘಟಕ, ಪಾಕಿಸ್ತಾನಕ್ಕೆ ೩೪.

ಯುದ್ಧನೌಕೆಗಳು, ಸುರಂಗ ಶೋಧಗಳು, ಇತ್ಯಾದಿ: ಹಿಂದುಸ್ತಾನಕ್ಕೆ ೩೨, ಪಾಕಿಸ್ತಾನಕ್ಕೆ ೧೬.

ಆದರೆ ಹಿಂದೀ ಸೈನ್ಯದ ವಿಭಜನೆಯ ಈ ನಿರ್ಣಯದಿಂದ ಪ್ರತಿಯೊಂದು ದಲದಲ್ಲಿರುವ ಸೈನಿಕರಿಗೆ ಸ್ವೇಚ್ಛೆಯಿಂದ ಹಿಂದುಸ್ತಾನ ಅಥವಾ ಪಾಕಿಸ್ತಾನಕ್ಕೆ ತಮ್ಮನ್ನು ವರ್ಗಾಯಿಸಿಕೊಳ್ಳಲು ಕೊಟ್ಟ ಅವಕಾಶಕ್ಕೆ ಧಕ್ಕೆಯೊದಗುವದಿಲ್ಲ.

ಮಂಗಮುಷ್ಟಿ ಸಂಸ್ಥಾನಗಳು

ಸಂಸ್ಥಾನಗಳ ಸಮಸ್ಯೆಯೊಂದು ಇನ್ನಾದರೂ ಪೂರ್ತಿ ಬಿಡದಾಗಿದೆ. ಸುಮಾರು ಎರಡು ಮೂರಾಂಶ ಜನಸಂಖ್ಯೆಯನ್ನೊಳಗೊಂಡ ಸಂಸ್ಥಾನಗಳು ಘಟನಾಸಮಿತಿಯಲ್ಲಿ ಸೇರಿವೆ ನಿಜ. ಆದರೆ ಹೈದರಾಬಾದ, ತಿರ್ವಾಂಕೂರು, ಕಾಶ್ಮೀರ ಈ ಪ್ರಮುಖ ಸಂಸ್ಥಾನಗಳೂ ಭೋಪಾಳ, ಭವಾಲಪುರ, ಗ್ವಾಲಿಯರ, ಇಂದೂರ, ಕೊಲ್ಹಾಪುರದಂಥ ಕೆಲ ಚಿಲ್ಲರೆ ಸಂಸ್ಥಾನಗಳೂ ಸ್ವತಂತ್ರವಾಗುವದೆಂದು ಆಯಾ ನರೇಂದ್ರರು ಸಾರಿದ್ದರಿಂದ ತೊಡಕುಂಟಾಗಿದೆ. ಭೋಪಾಲ ನವಾಬರು ಕುಟಿಲ ತಂತ್ರದಿಂದ ಮೊದಲು ಘಟನಾಸಮಿತಿಯನ್ನು ಸೇರಲು ನಿರ್ಣಯಿಸಿದ್ದ ಕೆಲ ಸಂಸ್ಥಾನಗಳನ್ನು ತಿರುಗಿಸಿದ್ದಾರೆ. ಆದರೆ ಬ್ರಿಟಿಶ ಸರಕಾರದವರು ಸಂಸ್ಥಾನಗಳ ಸ್ವಾತಂತ್ರ್ಯಕ್ಕೆ ಉತ್ತೇಜನ ಕೊಡುವದಿಲ್ಲೆಂದು ಸ್ಪಷ್ಟಗೊಳಿಸಿದ್ದರಿಂದ ಇವರ ಬಲ ಕಡಿಮೆಯಾಗಿದೆ. ಹೈದರಾಬಾದ ಪ್ರತಿನಿಧಿಗಳು ದಿಲ್ಲಿಯಲ್ಲಿ ಮಾತುಕತೆ ನಡೆಸುತಿದ್ದು ಅವರಿಗೆ ವೈಸರಾಯರು ಬ್ರಿಟಿಶ ಮನೋಗತವನ್ನು ಸ್ಪಷ್ಟವಾಗಿ ತಿಳಿಸಿದ್ದಾರಂತೆ. ಹೈದರಾಬಾದು ಒಕ್ಕೂಟದಲ್ಲಿ ಸೇರುವ ಆಶೆಯುಂಟಾಗಿದೆಯೆಂದು ತಿಳಿಯುತ್ತದೆ. ವರ್ಹಾಡ ಸಮಸ್ಯೆಯೂ ಸಮಾಧಾನಕರವಾಗಿ ಬಿಡಿಸಲ್ಪಡಬಹುದು. ಆದರೆ ತಿರ್ವಾಂಕೂರು ಭೋಪಾಲಿಗಳೇ ಇನ್ನೂ ಹುಂಬತನ ಬಿಟ್ಟಿಲ್ಲ. ತಿರ್ವಾಂಕೂರು ದಿವಾನ ಸರ್ ಸಿ. ಪಿ. ಯವರಿಗೆ ವೈಸರಾಯರಿಂದ ವಿಶೇಷ ಕರೆ ಬಂದದ್ದು ಇದೇ ಸಂಬಂಧದಲ್ಲಿರಬೇಕು. ಬಿಕಾನೇರ ಮಹಾರಾಜರು ನರೇಂದ್ರರನ್ನು ಕುರಿತು ದೇಶಪ್ರೇಮ ತೋರಿರೆಂದು ಬಿನ್ನಹ ಹೊರಡಿಸಿದ್ದಾರೆ. ಸರದಾರ ಪಟೇಲರೂ ಒಕ್ಕೂಟದಲ್ಲಿ ಸೇರುವ ಸಂಸ್ಥಾನಗಳಿಗೆ ಪ್ರಾಂತಗಳಿಗೆ ಸರಿಸಮಾನವಾದ ಸ್ಥಾನಮಾನವೀಯುವ ಭರವಸೆಕೊಟ್ಟಿದ್ದಾರೆ. ಉಭಯ ಪಕ್ಷಗಳೂ ಉಗ್ರವಾದ ಮಾತು ನಿಲ್ಲಿಸಿ ಹೆಚ್ಚು ಸೌಮ್ಯ ವಾಕ್ಯಗಳನ್ನು ಪ್ರಾರಂಭಿಸಿರುವದೊಂದು ಶುಭ ಲಕ್ಷಣವೆನ್ನಬೇಕು.

ಘಟನಾ ಸಮಿತಿಯ ಕಾರ್ಯಕಲಾಪಗಳು

ಹಿಂದೀ ಘಟನಾ ಸಮಿತಿಯ ನಾಲ್ಕನೆ ಅಧಿವೇಶನ ಹೊಸದಿಲ್ಲಿಯಲ್ಲಿ ಮುಸ್ಲಿಂಲೀಗ್ ಮತ್ತು ಅಧಿಕತರ ಸಂಸ್ಥಾನಗಳ ಪ್ರತಿನಿಧಿಗಳನ್ನೊಳಗೊಂಡು ತಾ. ೧೪ ಕ್ಕೆ ಪ್ರಾರಂಭವಾಯಿತು. ಸಿಂಧ, ಪೂರ್ವ ಬಂಗಾಲ, ಪಶ್ಚಿಮ ಪಂಜಾಬ ಮೊದಲಾದ "ಪಾಕಿಸ್ತಾನ" ಭಾಗದ ಮುಸ್ಲಿಂ ಮತ್ತು ಮುಸ್ಲಿಮೇತರ ಸದಸ್ಯರು, ಸ್ವಾಭಾವಿಕವಾಗಿ ಬಂದಿರಲಿಲ್ಲ. ಸಭೆ ಒಳ್ಳೆ ಸ್ನೇಹಮಯ ವಾತಾವರಣದಲ್ಲಿ ಪ್ರಾರಂಭವಾಯಿತು. ಅಗಸ್ಟ ೧೫ ರ ನಂತರ ಈ ಘಟನಾ ಸಮಿತಿಯೇ ಹಿಂದೀ ಒಕ್ಕೂಟದ ಪಾರ್ಲಮೆಂಟಾಗಿ—ಹೊಸರಾಜ್ಯ ಘಟನೆಯನ್ವಯ ಚುನಾವಣೆಗಳಾಗಿ ಶಾಸನಸಭೆ ಪ್ರತಿಷ್ಠಿತವಾಗುವ ವರೆಗೆ—ಅಧಿಕಾರ ನಡೆಸುವದು.

ಸಂಸ್ಥಾನಗಳ "ಸ್ವಾತಂತ್ರ್ಯ"ಕ್ಕೆ ಬ್ರಿಟಿಶ ಬೆಂಬಲವಿಲ್ಲ— ಘಟನಾ ಸಮಿತಿಯಲ್ಲಿ ಪ್ರಾಂತಿಕ ಘಟನೆಯ ಚರ್ಚೆ

● ಹಿಂದೀ ಸ್ವಾತಂತ್ರ್ಯ ಮಸೂದೆಯು ಮೂರೂ ವಾಚನೆಗಳು ಬ್ರಿಟಿಶ ಕಾಮನ್ಸ ಸಭೆಯಲ್ಲಿ ಸ್ವೀಕೃತವಾಗಿ ತಾ. ೧೬ ಕ್ಕೆ ಲಾರ್ಡ್ಸ ಸಭೆಯ ಅಂಗೀಕಾರ ಮುದ್ರೆಯನ್ನೂ ದೊರಕಿಸಿಕೊಂಡಿತು. ಈ ಸಂಚಿಕೆ ಹೊರಬೀಳುವ ಮೊದಲೇ ಅದಕ್ಕೆ ಅರಸರ ಮುದ್ರೆಯೂ ಬಿದ್ದು ಅದು ಕಾಯದೆಯಾಗುವದು.

● ಹಿಂದೀ ಘಟನಾ ಸಮಿತಿಯ ನಾಲ್ಕನೆ ಅಧಿವೇಶನ ಪ್ರಾರಂಭವಾಗಿದ್ದು ಅದೀಗ ಪ್ರಾಂತಿಕ ಘಟನೆಯ ಬಗ್ಗೆ ಉಪಸಮಿತಿಯ ವರದಿಯನ್ನು ಪರಿಶೀಲಿಸುತ್ತಿದೆ.

● ಪಾಕಿಸ್ತಾನ ಘಟನಾ ಸಮಿತಿ ಅಗಸ್ಟ ೧೦ ಕ್ಕೆ ಕರಾಚಿಯಲ್ಲಿ ಪ್ರಾರಂಭವಾಗುವದು.

● ಅಗಸ್ಟ ೧೫ ರ ನಂತರ ಹಿಂದುಸ್ತಾನಕ್ಕೆ ಮೌಂಟಬ್ಯಾಟನ್ನರನ್ನೂ ಪಾಕಿಸ್ತಾನಕ್ಕೆ ಜಿನ್ನಾಸಾಹೇಬರನ್ನೂ ಗವರ್ನರ ಜನರಲ್ಲರಾಗಿ ಬ್ರಿಟಿಶ ಅರಸರು ನೇಮಿಸಿದ್ದಾರೆ.

ಡಾ. ರಾಜೇಂದ್ರ ಪ್ರಸಾದರು ಅಧ್ಯಕ್ಷಸ್ಥಾನದಿಂದ, ಹೊಸತಾಗಿ ಬಂದ ಸದಸ್ಯರನ್ನು ಸ್ವಾಗತಿಸಿ ಈ ಅಧಿವೇಶನದ ಕಾರ್ಯಕಲಾಪಗಳನ್ನು ಸೂಚಿಸುತ್ತ, ಒಕ್ಕೂಟ ಮತ್ತು ಪ್ರಾಂತಿಕ ಘಟನೆಗಳ ಬಗ್ಗೆ ಉಪ ಸಮಿತಿಗಳು ಒಪ್ಪಿಸಿದ ವರದಿಗಳನ್ನು ಸಮಾಲೋಚಿಸುವದೇ ಈ ಅಧಿವೇಶನದ ಮುಖ್ಯ ಕೆಲಸವೆಂದು ತಿಳಿಸಿದರು. ಘಟನೆಯ ಕೊನೆಯ ಕರಡನ್ನು ಚರ್ಚಿಸಲು ಅಕ್ಟೋಬರದಲ್ಲಿ ಸಭೆ ಸೇರಿಸಬಹುದೆಂದೂ ಘಟನೆಯ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕಾಗುವದೆಂದೂ ಅವರು ಹೇಳಿದರು. ಏಕೆಂದರೆ ಮುಂದೆ ಇದು ಪಾರ್ಲಮೆಂಟಾಗಿ ವರ್ತಿಸಬೇಕಾಗುವದರಿಂದ ಆಗ ಮಸೂದೆಗಳ ಮೇಲೆ ಹೆಚ್ಚು ಮನಸು ಹಾಕಬೇಕಾಗುವದು.

ಶ್ರೀ ಕನ್ಹಯ್ಯಾಲಾಲ ಮುನಶಿಯವರ ಬಿನ್ನಹಕ್ಕೆ ಲೀಗ್ ಸದಸ್ಯರ ಪರವಾಗಿ ಉತ್ತರ ಕೊಡುತ್ತ ನಾಜೀಮುದ್ದೀನ ಅಹಮ್ಮದರು ತಾವು ಹಿಂದುಸ್ತಾನದ ನಿಷ್ಠಾವಂತ ನಾಗರಿಕರಾಗಿ ಸಭೆಗೆ ಬಂದಿದ್ದು ಘಟನಾ ರಚನೆಯಲ್ಲಿ ಸಹಕರಿಸುವದಾಗಿ ಆಶ್ವಾಸನವಿತ್ತರು. ಆದರೆ ಈ ವರೆಗಾದ ಕಾರ್ಯಕಲಾಪಗಳನ್ನು ಅಭ್ಯಸಿಸಲು ಅವರು ಸಮಯ ಕೇಳಿದರು.

ಪ್ರಾಂತಿಕ ಘಟನೆ

ತಾ. ೧೫ ಕ್ಕೆ ಸರದಾರ ವಲ್ಲಭಭಾಯಿ ಪಟೇಲರು ಪ್ರಾಂತಿಕ ಘಟನೆಯ ಬಗ್ಗೆ ಉಪ ಸಮಿತಿ ಸಿದ್ಧಗೊಳಿಸಿದ ವರದಿಯನ್ನು ಮಂಡಿಸಿದರು. ಅದು ಸೂಚಿಸಿದ ಪ್ರಾಂತಿಕ ಘಟನೆಯ ರೂಪರೇಷೆ ಹೀಗಿದೆ:

● ಪ್ರತಿ ಪ್ರಾಂತಕ್ಕೆ ಸಾರ್ವತ್ರಿಕ ಪ್ರೌಢ ಮತದಾನದಿಂದ ಆರಿಸಲ್ಪಟ್ಟ ಗವರ್ನರನಿರಬೇಕು. ೩೫ ವರ್ಷ ಮಿಕ್ಕಿದ ಹಿಂದುಸ್ತಾನದ ಪ್ರತಿಯೊಬ್ಬ ನಾಗರಿಕನು ಗವರ್ನರ ಚುನಾವಣೆಗೆ ನಿಲ್ಲಲು ಅರ್ಹನಾಗುತ್ತಾನೆ. ಆದರೆ ಅವನು ಪ್ರಾಂತಿಕ ಶಾಸನಸಭೆಯ ಸದಸ್ಯನಾಗಿರಬಾರದು. ಮತ್ತು ಸಂಬಳದ ಮೇಲೆ ನೌಕರಿ ಮಾಡುವವನಿರತಕ್ಕದ್ದಲ್ಲ. ಒಬ್ಬನು ಎರಡು ಸಲಕ್ಕಿಂತ ಹೆಚ್ಚು ಗವರ್ನರ ಹುದ್ದೆಯಾಳಾಗಲಾರನು.

● ಗವರ್ನರನು ಪ್ರಾಂತದ ನಿರ್ವಾಹಕ (ಎಗ್ಜಿಕ್ಯೂಟಿವ್) ಅಧಿಕಾರಿಯಾಗಿದ್ದು ಪ್ರಾಂತಿಕ ಶಾಸನ ಸಭೆಯ ಅಧಿಕಾರ ವ್ಯಾಪ್ತಿಯಿದ್ದಲ್ಲೆಲ್ಲ ಅವನ ಕಾರ್ಯನಿರ್ವಾಹಕಾಧಿಕಾರ ನಡೆಯುವದು. ಶಾಸನ ಸಭೆಗಳು ಅಧಿವೇಶನದಲ್ಲಿರದಾಗ ಸುಗ್ರೀವಾಜ್ಞೆಗಳನ್ನೂ ಅವನು ಹೊರಡಿಸಬಹುದು.

● ಗವರ್ನರನಿಗೆ ಸಹಾಯ ಮಾಡಲು ಅವನೇ ಆರಿಸುವ ಹಾಗು ಅವನು ಒಪ್ಪಿದಷ್ಟು ಕಾಲ ಅಧಿಕಾರದಲ್ಲುಳಿಯುವ ಮಂತ್ರಿಮಂಡಲವಿರಬೇಕು. ಆದರೆ ಶಾಂತಿಭಂಗವನ್ನು ತಪ್ಪಿಸುವ ಕ್ರಮ ಕೈಕೊಳ್ಳಲು, ಶಾಸನ ಸಭೆಗಳನ್ನು ಕರೆಯಲು ಮತ್ತು ವಿಸರ್ಜಿಸಲು, ಚುನಾವಣೆಗಳ ಮೇಲ್ವಿಚಾರಣೆ ಮಾಡಲು ಮತ್ತು ಇತರ ಕೆಲ ವಿಷಯಗಳಲ್ಲಿ ಅವನಿಗೆ ನಿರ್ಣಯಾಧಿಕಾರವುಂಟು.

● ಪ್ರಾಂತಿಕ ಶಾಸನ ಸಭೆಯನ್ನು ಪ್ರೌಢ ಮತದಾನ ಪದ್ಧತಿಯಿಂದಾರಿಸಬೇಕು. ಅದರಲ್ಲಿ ಕನಿಷ್ಠ ೫೦ ಸದಸ್ಯರಿದ್ದು ಅದರ ಅಧಿಕಾರಾವಧಿ ೪ ವರ್ಷವಿರಬೇಕು. ಆದರೆ ಯಾವದೊಂದು ಪ್ರಾಂತದ ಘಟನಾ ಸಮಿತಿ ಸದಸ್ಯರು ಬಯಸಿದರೆ ವೃತ್ತಿಪ್ರಾತಿನಿಧ್ಯಮೂಲವಾದ ಮೇಲ್ಮನೆ (ವಿಧಿಮಂಡಲ) ಯನ್ನೂ ಸ್ಥಾಪಿಸಬಹುದು.

● ಪ್ರಾಂತಿಕ ನ್ಯಾಯಾಲಯಗಳ ನ್ಯಾಯಾಧೀಶರನ್ನು ಹಿಂದೀ ಒಕ್ಕೂಟದ ಅಧ್ಯಕ್ಷನು ಆಯಾ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಹಾಗು ಪ್ರಾಂತಿಕ ಗವರ್ನರನ ಸಲಹೆಯಂತೆ ನೇಮಿಸಬೇಕು.

ಈ ವರದಿಯ ಚರ್ಚೆಯಲ್ಲಿ ಮುಖ್ಯವಾಗಿ ಭಾಗ ವಹಿಸಿದವರೆಂದರೆ ಮುಸ್ಲಿಂ ಲೀಗಿನ ಮೌ. ಹಜರತ್ ಮೊಹಾನಿಯವರು. ಅವರು ಹಿಂದುಸ್ತಾನದಲ್ಲಿ ಸಾಮ್ಯವಾದಿ ಪ್ರಜಾರಾಜ್ಯವಿರಬೇಕೆಂದು

— ೧೪ ನೇ ಪುಟಕ್ಕೆ



ಯುರೋಪ ಆರ್ಥಿಕ ಪರಿಷತ್ತು

ಯುರೋಪಿನ ಆರ್ಥಿಕ ಪುನರ್ನಿರ್ಯೋಜನೆಗೆ ಅಮೇರಿಕನ್ ವಿದೇಶಮಂತ್ರಿ ಜಾರ್ಜ ಮಾರ್ಶಲ್ಲರು ಕೊಡಮಾಡಿದ ಸಹಾಯವನ್ನು ಹೇಗೆ ಬಳಸಿಕೊಳ್ಳಬೇಕೆಂದು ವಿಚಾರಿಸಲು ಅಂಗ್ಲೊ—ಫ್ರೆಂಚರು ಪ್ಯಾರಿಸಿನಲ್ಲಿ ಕರೆದ ಸಭೆ ಮೊದಲೇ ನಿರ್ಧರಿಸಿದಂತೆ ತಾ ೧೨ ಕ್ಕೆ ಸೇರಿತು. ಕೆಲ ದಿನ ಮೊದಲು ಪ್ಯಾರಿಸಿನಲ್ಲಿ ಈ ಬಗ್ಗೆ ಸೇರಿದ ರಾಷ್ಟ್ರತ್ರಯ ವಿದೇಶಮಂತ್ರಿ ಸಭೆಯನ್ನು ರಶಿಯಾ ಮುರಿದು ಹೊರಬಿದ್ದ ನಂತರ ರಶಿಯಾವನ್ನು ಬಿಟ್ಟೇ ಅಂಗ್ಲೋ—ಅಮೇರಿಕನ್ನರು ಈ ಸಭೆ ಸೇರಿಸಿದರು. ಇದಕ್ಕೆ ಆಮಂತ್ರಿಸಲ್ಪಟ್ಟ ರಾಷ್ಟ್ರಗಳಲ್ಲಿ ೧೬ ಮಾತ್ರ ಸಭೆಗೆ ಬಂದವು. ರಶಿಯನ್ ವರ್ಚಸ್ಸಿಗೊಳಗಾದ ಪೂರ್ವ ಯುರೋಪಿನ ರಾಷ್ಟ್ರಗಳು ಸಭೆಯನ್ನು ಬಹಿಷ್ಕರಿಸಿದ್ದವು

● ಸಭೆಯ ಕಾರ್ಯ ಕಲಾಪ ಇನ್ನೂ ನಡೆಯುತ್ತಲೆ ಇದೆ ನಾಲ್ಕು ವರ್ಷಗಳಲ್ಲಿ ಯುರೋಪಿನ ಉಧ್ವಸ್ತ ಆರ್ಥಿಕ ಕಟ್ಟಡವನ್ನು ಪುನರ್ರಚಿಸುವ ತಳಹದಿಯ ಮೇಲೆ ವಿಚಾರ ವಿನಿಮಯ ನಡೆದಿದೆ.

● ರಶಿಯವೂ ಅದರ ವರ್ಚಸ್ಸಿಗೊಳಗಾದ ರಾಜ್ಯಗಳೂ ಸಭೆಗೆ ಬಾರದುದಕ್ಕಾಗಿ ಬೆವಿನ್ನರೂ ಬಿಡಾಲರೂ ವಿಷಾದಿಸಿದರು. ಮುಂದಾದರೂ ಅವು ಸಹಕರಿಸಬಹುದೆಂಬ ಆಶೆಯನ್ನು ವ್ಯಕ್ತಗೊಳಿಸಲಾಯಿತು. ಚಿಕ್ಕ ಪುಟ್ಟ ರಾಷ್ಟ್ರಗಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವದು ಬ್ರಿಟನ್ನಿನ ಉದ್ದೇಶವಿಲ್ಲೆಂದು ಬೆವಿನ್ನರು ಸ್ಪಷ್ಟಗೊಳಿಸಿದರು.

ರಶಿಯಾದ ವಿರೋಧ

ಆದರೆ ರಶಿಯಾದ ಪ್ರಬಲ ವಿರೋಧಕ್ಕೆ ಇದು ಗುರಿಯಾಗುವದು ಖಂಡಿತ.

● ಝೆಕೊಸ್ಲೊವಾಕಿಯಾ ಸರಕಾರ ಸಭೆಗೆ ಬರಲು ಮೊದಲು ಒಪ್ಪಿ ಆ ಮೇಲೆ ತನ್ನ ಮನಸ್ಸು ಬದಲಿಸಲು ರಶಿಯಾದ ಒತ್ತಾಯವೇ ಕಾರಣವಾಗಿರಬೇಕು. ಫಿನ್ಲಂಡ ಕೂಡ ಹಾಗೆಯೆ.

● ಸೋವಿಯೆಟ್ ವಿರೋಧ ಎಷ್ಟು ಪ್ರಬಲವಾಗಿದೆಯೆಂದರೆ ಅದು ಅಸ್ಟ್ರಿಯಾಕ್ಕೆ ಎಚ್ಚರಿಕೆ ಕೊಟ್ಟು ರಶಿಯನ್ ಆಕ್ರಮಣಕ್ಕೊಳಗಾದ ಅಸ್ಟ್ರಿಯಾದ ವಿಭಾಗಕ್ಕೆ ಅನ್ವಯಿಸುವ ಯಾವದೊಂದು ಯೋಜನೆಯನ್ನು ಸ್ವೀಕರಿಸದಂತೆ ತಿಳಿಸಿದೆ. (ಅಸ್ಟ್ರಿಯಾವೂ ಪ್ಯಾರಿಸ ಸಭೆಗೆ ಹೋಗಿದೆ.)

● ತನ್ನ ವರ್ಚಸ್ಸಿಗೊಳಗಾದ ರಾಜ್ಯಗಳನ್ನು ಬೆದರಿಸಿ ಸುಮ್ಮನೆ ಕೂಡದೆ ರಸಿಯನ್ ಸರಕಾರ ಅಂಗ್ಲೊ—ಫ್ರೆಂಚ ಆಹ್ವಾನವನ್ನು ಸ್ವೀಕರಿಸಿದೆ. ಅದು ಪೂರ್ವ ಯುರೋಪಿನ ರಾಷ್ಟ್ರಗಳ ಪುನರ್ನಿರ್ಯೋಜನೆಗಾಗಿ ವ್ಯಾಪಾರಿ ಒಪ್ಪಂದಗಳ ಒಂದು ಮಾಲೆಯನ್ನೆ ಮಾಡಿಕೊಳ್ಳಲಿದೆಯೆಂದು ತಿಳಿಯುತ್ತದೆ. ಮಾರ್ಶಲ ಯೋಜನೆಯ ವಿರುದ್ಧ "ಮೊಲಟೋವ ಯೋಜನೆ"ಯನ್ನು ಅದು ಮುಂದೆ ಮಾಡುವದಂತೆ!

● ಹೀಗೆ ಪಶ್ಚಿಮ ಯುರೋಪಿನ ಬಣ ಕಟ್ಟುವದು ಮಾರ್ಶಲ ಯೋಜನೆಯ ಧ್ಯೇಯವಲ್ಲೆಂದು ಸಾರಲ್ಪಟ್ಟಿದ್ದರೂ ಪರಿಣಾಮದಲ್ಲಿ ಅದು ಹಾಗೆಯೇ ರೂಪುಗೊಂಡಿದೆ ಅದರ ವಿರುದ್ಧ ಅನಿವಾರ್ಯವಾಗಿ (ಗ್ರೀಸ, ತುರ್ಕಿಗಳನ್ನು ಬಿಟ್ಟು) ಪೂರ್ವ ಯುರೋಪಿನ ಬಣವೂ ಸೃಷ್ಟಿಯಾಗತೊಡಗಿದೆ. ವಿಚಿತ್ರವೆಂದರೆ ಯುದ್ಧದಿಂದ ಅತಿ ಹಿಂಸೆಗೊಳಗಾದ ಯುರೋಪಿನ ಭಾಗವಾದ ಪೂರ್ವಾರ್ಧವೇ ಮಾರ್ಶಲ್ ಸಹಾಯ ಯೋಜನೆಯಿಂದ ವಂಚಿತವಾಗಿದೆ. ಪ್ರಬಲ ರಾಷ್ಟ್ರ ವೈಷಮ್ಯದ ಫಲವಿದು.

● ಅಮೇರಿಕನ್ ವಾಣಿಜ್ಯ ಮಂತ್ರಿ ಹ್ಯಾರಿಮನ್ನರು ಮೊನ್ನೆ ಒಂದು ಹೇಳಿಕೆಯಲ್ಲಿ ಯುರೋಪಿಗೆ ಸಹಾಯ ನೀಡುವಾಗ ಅಮೇರಿಕೆ ಯಾವದೇ ರಾಜಕೀಯ ಕರಾರು ಹಾಕುವದಿಲ್ಲವೆಂದು ಸಾರಿದರು. ಅಲ್ಲದೆ ಈಗ ಈ ಯೋಜನೆಯನ್ನು ಬಹಿಷ್ಕರಿಸಿದ ರಾಷ್ಟ್ರಗಳಿಗೂ ಮುಂದೆಯಾವಾಗಲೂ ಮುಕ್ತದ್ವಾರವಿರುವದೆಂದರು ಆದರೆ ವಿದೇಶ ಮಂತ್ರಿ ಜಾರ್ಜ ಮಾರ್ಶಲ್ಲರು ಅಮೇರಿಕನ್ ಸಂಸ್ಥಾನಗಳ ಗವರ್ನರರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ, ಅಮೇರಿಕೆಯಿಂದ ಯುದ್ಧ ಪೀಡಿತ ಯುರೋಪಿಯನ್ ರಾಷ್ಟ್ರಗಳಿಗೆ ಸಹಾಯ ದೊರಕದೆಹೋದರೆ ಅವು ನಿರುಪಾಯವಾಗಿ ಕಮ್ಯೂನಿಝಂ ತಪ್ಪದೆ ಬೆನ್ನು ಹತ್ತಬಹುದೆಂದರು. ಕಮ್ಯೂನಿಝಂ ಪ್ರಸಾರಕ್ಕೆ ಅಡ್ಡಗಾಲು ಹಾಕುವದೇ ಈ ಔದಾರ್ಯದ ಉದ್ದೇಶವೆಂದು ಇದರಿಂದ ಸಿದ್ಧವಾಯಿತು. ಅದೀಗ ರಶಿಯಾವನ್ನು ಹೆದರಿಸಿದ ಸಂಗತಿ.

● ಅಮೇರಿಕೆಯ ಸಹಾಯ ಪಡೆಯುವದರಿಂದ ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯ ನಾಶವಾದೀತೆಂದು ಶಂಕಿಸುವದರಲ್ಲಿ ರಶಿಯನ್ನರೇನು ವಿಕಾಶಿಗಳಲ್ಲ. ವಿಚಿತ್ರವೆನಿಸೀತು, ಆದರೂ ಬ್ರಿಟಿಶ ಕಾನ್ಸರ್ವೇಟಿವ ಪಕ್ಷದ ಲಾರ್ಡ ಅಲ್ಟ್ರಿನ್‌ಚಾಮರು ಕೂಡ ಇದೇ ಭಯವನ್ನು ವ್ಯಕ್ತಗೊಳಿಸಿ ಇಂಗ್ಲಂಡನ್ನು ಎಚ್ಚರಿಸಿದ್ದಾರೆ.

ಯುವರಾಜ್ಞಿಯ ವಿವಾಹ ನಿಶ್ಚಯ

ಬ್ರಿಟಿಶ ಸಿಂಹಾಸನದ ಉತ್ತರಾಧಿಕಾರಿಣಿಯೂ ಆರನೆ ಜಾರ್ಜ ಅರಸನ ಹಿರಿಮಗಳೂ ಆದ ರಾಜಕುಮಾರಿ ಎಲಿಜಬೇಥಳ ವಿವಾಹ ನಿಶ್ಚಿತವಾಗಿದೆ.

೨೧ ವರ್ಷದ ಭಾವೀ ಬ್ರಿಟಿಶ ರಾಣಿಯನ್ನು ವರಿಸಲಿರುವ ಈ ಸೌಭಾಗ್ಯಶಾಲಿಯ ಹೆಸರು ಲೆಫ್ಟಿನೆಂಟ ಫಿಲಿಪ್ ಮೌಂಟಬ್ಯಾಟನ್. ೨೬ ವರ್ಷದ ನವಯುವಕ ಫಿಲಿಪ್ ಮೌಂಟಬ್ಯಾಟನ್ನನು ಬ್ರಿಟಿಶ ನೌಕಾದಲದಲ್ಲಿದ್ದರೂ ಅವನು ಗ್ರೀಕ ರಾಜಕುಲಕ್ಕೆ ಸೇರಿದವನು. ಹಿಂದುಸ್ತಾನದ ವಾಯಿಸರಾಯರಾದ ಲಾರ್ಡ ಲುಯಿ ಮೌಂಟಬ್ಯಾಟನ್ನರ ಸಹೋದರನ ಮಗನೂ ಹೌದು.

ಈ ವಿವಾಹಕ್ಕೆ ಬ್ರಿಟಿಶ ಕಾಯಿದೆಯಂತೆ ಇರುವ ನಿಬಂಧನೆಗಳನ್ನು ಪೂರೈಸಲಾಗಿದ್ದು ಅರಸನ ಸಮ್ಮತಿ ದೊರಕಿದೆ. ವರನು ಗ್ರೀಕನಾಗಿದ್ದರೂ ಮೊನ್ನೆ ಫೆಬ್ರುವರಿಯಿಂದ ಬ್ರಿಟಿಶ ಪ್ರಜೆಯಾಗಿ ಮಾರ್ಪಟ್ಟಿದ್ದಾನೆ.

ವಿವಾಹ ಅಕ್ಟೋಬರದಲ್ಲಿ ಜರುಗಬಹುದು. ಸಾಮ್ರಾಜ್ಯದೇಶಗಳ ಮುಖ್ಯ ಮಂತ್ರಿಗಳಿಗೆಲ್ಲ ಆಮಂತ್ರಣಗಳು ಹೋಗುವವು.

ಈ ವಿವಾಹದಿಂದ ವರನಿಗೆ ಬ್ರಿಟಿಶ ಸಿಂಹಾಸನದ ಮೇಲೆ ಏನೂ ಅಧಿಕಾರ ಪ್ರಾಪ್ತವಾಗುವದಿಲ್ಲ. ಎಲಿಜಬೇಥಳೇ ರಾಣಿಯಾಗುವಳು. ಅವರಿಬ್ಬರ ಮಗನಿಗೆ ಇಲ್ಲವೆ ಮಗಳಿಗೆ ಉತ್ತರಾಧಿಕಾರ ಬರುವದು.

ಬ್ರಿಟಿಶ ಆರ್ಥಿಕ ಬಿಕ್ಕಟ್ಟು

ಮಾರ್ಶಲ್ ಯೋಜನೆಯಲ್ಲಿ ಬ್ರಿಟಿಶ ವಿದೇಶ ಮಂತ್ರಿ ಬೆವಿನ್ನರು ವಿಶೇಷ ಆಸ್ಥೆ ವಹಿಸಿ ರಶಿಯಾದ ವಿರೋಧ ಕಟ್ಟಿಕೊಳ್ಳಲು ಸಿದ್ಧವಾಗಲು ಕಾರಣವೆಂದರೆ ಬ್ರಿಟನ್ನಿನಲ್ಲಿ ಬಂದೊದಗಿದ ಆರ್ಥಿಕ ವಿಪತ್ತು ಅದರ ಪ್ರಖರತೆಯೆಷ್ಟೆಂಬದು ಕಳೆದವಾರ ಮಂತ್ರಿಮಂಡಲಾಧ್ಯಕ್ಷರಾದ ಹರ್ಬರ್ಟ ಮಾರಿಸನ್ನರು ಪಾರ್ಲಮೆಂಟಿನಲ್ಲಿ ೧೯೪೭–೪೮ ರ ಆಯಾತ ಕಾರ್ಯಕ್ರಮವನ್ನು ಕುರಿತ ಚರ್ಚೆಯಲ್ಲಾಡಿದ ಮಾತುಕತೆಗಳಿಂದ ವ್ಯಕ್ತವಾಗುವದು.

● ನಾವು ಯಾವದಕ್ಕೆ ಹಣ ತೆರುವದು ಸಾಧ್ಯವಿಲ್ಲೋ ಅದನ್ನು ನಿರಂತರವಾಗಿ ಆಯಾತ ಮಾಡಿಕೊಳ್ಳುತ್ತ ಹೋಗಲಾರೆವು. ನಾವು ಮಾತ್ರ ಏಕೆ, ಇಡೀ ಜಗತ್ತು ಇಂದು ಉತ್ಪಾದನೆ ಬೆಳೆಸಬೇಕು, ಇಲ್ಲವೆ ಹಾಳಾಗಿ ಹೋಗಬೇಕು, ಎಂದರವರು.

● ಅಮೇರಿಕೆಯಿಂದ ಕಳೆದ ವರ್ಷ ದೊರೆತ ಸಾಲ ಭರದಿಂದ ಕರಗುತಿರುವದನ್ನು ನೋಡಿ ಹೊರಗಿನಿಂದ ಸರಕು ತರಿಸುವದನ್ನು ನೂರಕ್ಕೆ ೨೫ ರಷ್ಟು ಕಡಿಮೆ ಮಾಡಬೇಕೆಂದು ಮಂತ್ರಿಮಂಡಲದ ಸೂಚನೆಯುಂಟು. ಇದಕ್ಕಾಗಿ ಅವರು ಮಿತವ್ಯಯ ಯೋಜನೆಮಾಡುತ್ತಿದ್ದಾರೆ.

● ಈ ಮಿತವ್ಯಯ ಯೋಜನೆಯಿಂದ ಬ್ರಿಟಿಶ ಜನರ ಆಹಾರ ವಿಹಾರಗಳ ಮೇಲೆ ತೀಕ್ಷ್ಣ ಕಡಿತ ಬೀಳಬಹುದು. ಅದಕ್ಕೆ ಜನ ಎಷ್ಟು ಸಿದ್ಧವಿದೆಯೋ ನಾಡಿ ಹಿಡಿಯಬೇಕೆಂದು ನಾಳೆ ಅಕ್ಟೋಬರಕ್ಕೆ ಬ್ರಿಟಿಶ ಪಾರ್ಲಮೆಂಟಿಗೆ, ಅವಧಿಗಿಂತ ಮೊದಲೇ, ಹೊಸ ಸಾರ್ವತ್ರಿಕ ಚುನಾವಣೆಗಳನ್ನು ಕೂಡ ಕೂಲಿಕಾರ ಸರಕಾರ ಹೂಡಬಹುದು.

ಗ್ರೀಸಿನಲ್ಲಿ ಬಂಧನ ಸತ್ರ

ಜುಲೈ ೯ ಕ್ಕೆ ಅಖಿಲ ಗ್ರೀಸಿನಲ್ಲಿ ಪ್ರಚಂಡ ಬಂಧನ ಸತ್ರವೊಂದು ಪ್ರಾರಂಭವಾಯಿತು. ೪೦೦೦ ಮಿಕ್ಕ ಸ್ತ್ರೀಪುರುಷರನ್ನು ಹಿಡಿಯಲಾಯಿತು. ಅವರಲ್ಲಿ ಬಹುಸಂಖ್ಯಾಕರನ್ನು ಒಡನೆ ದ್ವೀಪಾಂತರಕ್ಕೊಯ್ದು ಸೆರೆಯಿಡಲಾಗಿದೆ.

ಕಾರಣ: ಮರುದಿನ (ಜುಲೈ ೧೦) ಶಾಸನಬದ್ಧ ಗ್ರೀಕ ಸರಕಾರದಿಂದ ಬಲಾತ್ಕಾರದಿಂದ ಅಧಿಕಾರವನ್ನು ಕಸಿದುಕೊಳ್ಳುವ ಭಾರೀ ಒಳಸಂಚೊಂದು ಗೊತ್ತು ಹಚ್ಚಲ್ಪಟ್ಟಿತ್ತಂತೆ.

ಬಂಧನಕ್ಕೊಳಗಾದವರಲ್ಲಿ ಗ್ರೀಕ ಕಮ್ಯುನಿಸ್ಟ ಪಕ್ಷದ ಕಾರ್ಯದರ್ಶಿಯೂ ಒಬ್ಬನು. ಬಂಧಿತರಾದವರಲ್ಲಿ ಅನೇಕರನ್ನು ರಾಜದ್ರೋಹಕ್ಕಾಗಿ ವಿಚಾರಣೆಗೊಳಪಡಿಸಲಾಗುವದೆಂದು ತಿಳಿಯುತ್ತದೆ.

ಈ ಬಂಧನ ಸತ್ರಕ್ಕೆ ಬ್ರಿಟಿಶ ಮತ್ತು ಅಮೇರಿಕನ್ ಸರಕಾರಗಳ ಸಮ್ಮತಿಯುಂಟಂತೆ.

● ಕಮ್ಯುನಿಸ್ಟರ ಕಥೆ ಬೇರೆಯೆ ಇದೆ. ಅವರನ್ನುವದು ಹೀಗೆ: ಈವು [ಸರಕಾರ ವಿರೋಧಕ ಪಕ್ಷಗಳ ಗುಂಪು] ಪಕ್ಷಕ್ಕೂ ಸರಕಾರಕ್ಕೂ ನಡುವೆ ಸಂಧಾನ ನಡೆಸಲು ನಾವು ಪಾರ್ಲಮೆಂಟಿನ ಉದಾರ ಪಕ್ಷದವರಿಗೆ ಕೇಳಿಕೊಂಡಿದ್ದೆವು. ಅಂಥ ಸಂಧಾನ ಸರಕಾರಕ್ಕೆ ಬೇಡಾಗಿತ್ತು. ಆದರಿಂದ ಅದು ಈ ಒಳಸಂಚಿನ ನೆವ ತೆಗೆದು ಬಂಧನ ನಡೆಸಿದೆ.

● ಅದು ಹೇಗೆಯೆ ಇರಲಿ, ಅಮೇರಿಕೆಯ ಸಹಾಯದಿಂದ ಕೂಟಯೋಧರನ್ನು ಮುರಿಯುವದೊಂದೇ ಗ್ರೀಸಿನ ನಿಸ್ತಾರಕ್ಕೆ ಹಾದಿಯೆಂಬ ವಿಚಾರದಿಂದ ಸರಕಾರ ಈ ಕೆಲಸದಲ್ಲಿ ಪ್ರವರ್ತಿಸಿತೆಂಬಲ್ಲಿ ಸಂದೇಹವಿಲ್ಲ. ಆದರೆ ವಿರೋಧಿಗಳನ್ನು ಬಗ್ಗು ಬಡಿಯುವದು ಅಷ್ಟು ಸರಳವಾಗಿಲ್ಲ. ಕೂಟಯೋಧರು ಇದರ ನಂತರ ಪ್ರಚಂಡ ದಾಳಿಯನ್ನು ಕೈಕೊಂಡು ಸರಕಾರದ ವಶದಲ್ಲಿದ್ದ ಅನೇಕ ಭಾಗಗಳನ್ನು ವಶಪಡಿಸಿಕೊಂಡಿದ್ದಾರೆ. ಈಗ, (ರಶಿಯಾದ ಸಹಾಯದಿಂದ ಎಂಬ ಅರ್ಥ ಬರುವಂತೆ), ಯುರೋಪಿನಲ್ಲಿ ಗ್ರೀಕ ಬಂಡಾಯಗಾರರಿಗೆ ಸಹಾಯ ಮಾಡಲು ಅಂತರ್ರಾಷ್ಟ್ರೀಯ ಸೈನ್ಯವೊಂದನ್ನು ತರಬೇತುಗೊಳಿಸಲಾಗುತ್ತಿದೆಯೆಂದು ಗ್ರೀಕ ಸರಕಾರ ಅರೋಪಿಸುತ್ತದೆ.

ತುರ್ಕಿಗೆ ಮಿಲಿಟರಿ ಸಹಾಯ

ಕಮ್ಯುನಿಝಂ ಪ್ರಸಾರಕ್ಕೆ ತಡೆಯೊಡ್ಡಲು ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರು ಕೆಲ ತಿಂಗಳ ಹಿಂದೆ ಪ್ರಕಟಿಸಿದ ಧೋರಣೆಯನ್ವಯ ತುರ್ಕಿಗೆ ಮಿಲಿಟರಿ ಸಹಾಯ ನೀಡುವ ಒಪ್ಪಂದವೊಂದು ಕಳೆದ ವಾರ ಅಮೇರಿಕಾ—ತುರ್ಕಿಗಳ ನಡುವೆ ಆಯಿತು. ಅದರನ್ವಯ ೧೦ ಕೋಟಿ ಡಾಲರು ಬೆಲೆಬಾಳುವ ಮಿಲಿಟರಿ ಸಹಾಯವನ್ನು ಅಮೇರಿಕೆ ತುರ್ಕಿಗೆ ಕೊಡುವದು. "ತುರ್ಕಿಗೆ ತನ್ನ ಸ್ವಾತಂತ್ರ್ಯವನ್ನೂ ಸ್ವಾಧೀನತೆಯನ್ನೂ ರಕ್ಷಿಸಿಕೊಳ್ಳುವದಕ್ಕಾಗಿಯೂ ಅಂತರಿಕ ಆರ್ಥಿಕ ಸ್ಥಿತಿಯನ್ನು ಸ್ಥಿರಗೊಳಿಸುವದಕ್ಕಾಗಿಯೂ" ಈ ಸಹಾಯ ನೀಡಲ್ಪಡುವದಿದೆ.

● ಈ ಸಹಾಯವನ್ನು ತುರ್ಕಿಯ ಅಮೇರಿಕನ್ ರಾಯಭಾರಿ ವಿಲ್ಸನ್ನರು ವ್ಯವಸ್ಥಿತಗೊಳಿಸುವರು. ಅವರಿಗೆ ಸಕಲಸಹಾಯವನ್ನೂ ವಿವರ ಸುದ್ದಿಗಳನ್ನೂ ಕೊಡಲು ತುರ್ಕಿ ಬದ್ಧವಾಗಿದೆ. ಈ ಒಪ್ಪಂದದಂತೆ ದೊರೆತ ಸಹಾಯಧನವನ್ನಾಗಲಿ ಇತರ ಸರಕುಗಳನ್ನಾಗಲಿ ಅಮೇರಿಕೆಯ ಒಪ್ಪಿಗೆಯಿಲ್ಲದೆ ಪರರಿಗೆ ಕೊಡದಂತೆ ತುರ್ಕಿಯನ್ನು ನಿರ್ಬಂಧಿಸಲಾಗಿದೆ. ತುರ್ಕಿಯ ಮತ್ತು ಅಮೇರಿಕೆಯ ಸರಕಾರಗಳು ಒಪ್ಪಿದರೆ ಈ ಯೋಜನೆಯನ್ನು ನಿಲ್ಲಿಸಬಹುದು.

ಜಾಗತಿಕ ಆಹಾರ ಕೊರತೆ

ಕಳೆದವಾರ ಪ್ಯಾರಿಸಿನಲ್ಲಿ ಸೇರಿದ ಜಾಗತಿಕ ಧಾನ್ಯ ಪರಿಷತ್ತಿನಲ್ಲಿ ಭಾಗವಹಿಸಿದ ೩೯ ರಾಷ್ಟ್ರಗಳ ಪ್ರತಿನಿಧಿಗಳನ್ನು ಕುರಿತು ಅಂತರಾಷ್ಟ್ರೀಯ ಆವಸರ ಆಹಾರಮಂಡಲದ ಕಾರ್ಯದರ್ಶಿ ಫಿಟ್ಸಿಜರಾಲ್ಡರು ಕೆಲ ನಿಷ್ಠುರ ವಸ್ತುಸ್ಥಿತಿಗಳನ್ನು ತಿಳಿಹೇಳಿದರು. ಜಾಗತಿಕ ಧಾನ್ಯಕೊರತೆಯಿಂದುದ್ಭವಿಸಿದ ಸಂಕಷ್ಟವನ್ನು ನಿವಾರಿಸುವ ಉಪಾಯ ಹುಡುಕಲು ಈ ಪರಿಷತ್ತು ಸೇರಿತ್ತು.

● ಆಹಾರ ಮತ್ತು ಮೇವಿನ ಧಾನ್ಯಗಳು ಸೇರಿ ಜಗತ್ತಿನ ವಿವಿಧ ರಾಷ್ಟ್ರಗಳಿಗೆ ೫ ಕೋಟಿ ಟನ್ ಕೊರತೆ ಬೀಳುತ್ತದೆ (೧೯೪೭–೪೮ ರಲ್ಲಿ) ಉಳಿಕೆ ದೇಶಗಳು ಇವರಲ್ಲಿ ೩,೨೦,೦೦,೦೦೦ ಟನ್ ಮಾತ್ರ ಹಂಚಿಕೊಡಬಲ್ಲವು ಹೀಗೆ ಕೊರತೆ ಬೀಳುವ ಒಟ್ಟು ೧,೮೦,೦೦,೦೦೦ ಟನ್ ಧಾನ್ಯದಲ್ಲಿ ಮನುಷ್ಯರ ಆಹಾರದ ಕೊರತೆಯೆ ೧ ಕೋಟಿ ಟನ್ ಮಿಕ್ಕುವದೆಂದು ಫಿಟ್ಸಿಜರಾಲ್ಡರು ಹೇಳಿದರು.

● ಕಳೆದ ವರ್ಷಕ್ಕಿಂತ ಈ ವರ್ಷ ಹುಟ್ಟುವಳಿ ಕಡಿಮೆಯಾಗುವ ಸಂಭವವಿದ್ದು ಪರಿಸ್ಥಿತಿ ಇನ್ನೂ ಕಠಿಣವಾದೀತು.

● ಆದುದರಿಂದ ಪ್ರತಿಯೊಂದು ರಾಷ್ಟ್ರವೂ ಆಹಾರ ಧಾನ್ಯದ ವಿಷಯದಲ್ಲಿ ಅತ್ಯಂತ ನಿಷ್ಠುರವಾದ ನಿಯಮವನ್ನು ಅನುಸರಿಸಿದರೇನೇ ಆಹಾರ ಕೊರತೆಯಿಂದಾಗಬಹುದಾದ ವಿಘಾತಕ ಪರಿಣಾಮಗಳನ್ನು ಅದಷ್ಟು ಕಡಿಮೆ ಮಾಡಬಲ್ಲವು.

● ಅಮೇರಿಕೆಯ ಸಂಯುಕ್ತ ಸಂಸ್ಥಾನ ಸರಕಾರದ ಕೃಷಿ ಕಾರ್ಯದರ್ಶಿ ಕ್ಲಿಂಟನ್ ಆ್ಯಂಡರಸನ್ನರು ಅಮೇರಿಕೆಯಿಂದ ಸರ್ವ ಸಹಾಯವನ್ನು ವಾಗ್ದಾನ ಮಾಡಿದರೂ ಅಮೇರಿಕೆ ಅಪರಿಮಿತ ಧಾನ್ಯವನ್ನು ಪೂರೈಸಬಲ್ಲದೆಂಬ "ಭ್ರಮಪೂರ್ಣ ಕಲ್ಪನೆ"ಯನ್ನು ಹಚ್ಚಿಕೊಳ್ಳಬಾರದೆಂದು ಜಗತ್ತನ್ನು ಎಚ್ಚರಿಸಿದರು. (ಸಂಯುಕ್ತ ಸಂಸ್ಥಾನವೂ ಕೆನಡಾವೂ ಸೇರಿ ಕೊರತೆಯಲ್ಲಿ ೨,೩೦,೦೦,೦೦೦ ಟನ್ ಧಾನ್ಯವನ್ನು ತುಂಬಿಕೊಡಬಹುದೆಂದು ಊಹಿಸಲಾಗಿದೆ)

● ಇಷ್ಟಾಗಿ ಈ ಪರಿಷತ್ತು ಅಕ್ಕಿಯ ಸಮಸ್ಯೆಯನ್ನು ವಿಚಾರಿಸಲೇ ಇಲ್ಲ. ಗೋದಿ, ಗೋವಿನ ಜೋಳ, ರೈ ಮತ್ತು ಇತರ ಒರಟು ಧಾನ್ಯಗಳಿಗಷ್ಟೇ ಅದು ಸೀಮಿತವಾಗಿತ್ತು. ಇದನ್ನು ನೋಡಿ ಇಜಿಪ್ತದ ಪ್ರತಿನಿಧಿ ಹೇಳಿದ್ದು: "ಇವರು ಜಗತ್ತಿನ ಅರ್ಧ ಜನಸಂಖ್ಯೆಯನ್ನು ಮಾತ್ರ ಉಪೇಕ್ಷಿಸಿಬಿಟ್ಟಿದ್ದಾರೆ!"

ಇಂಡೊನೇಶಿಯಾದಲ್ಲಿ ಶಾಂತಿ ?

ಕಳೆದ ವಾರ ಇಂಡೊನೇಶಿಯಾದ ಪ್ರಜಾರಾಜ್ಯ ಸರಕಾರ ಡಚ್ಚರ ಕರಾರುಗಳಲ್ಲಿ ಒಂದನ್ನು ಹೊರತು ಉಳಿದವೆಲ್ಲವನ್ನು ಒಪ್ಪಿತು. ಒಪ್ಪದೆ ಇದ್ದ ಕಲಮೆಂದರೆ ಪ್ರಜಾರಾಜ್ಯದ ಪ್ರದೇಶದಲ್ಲಿನ ಶಾಂತಿ ಸುವ್ಯವಸ್ಥೆ ಕಾಯಲು ಪೋಲೀಸದಲದಲ್ಲಿ ಡಚ್ಚರಿಗೂ ಸೇರ್ಪಡೆ ದೊರೆಯಬೇಕೆಂಬ ಬೇಡಿಕೆಯನ್ನೊಳಗೊಂಡದ್ದು.

ಇದು ಡಚ್ ಸರಕಾರಕ್ಕೆ ಬಹಳಮಟ್ಟಿಗೆ ಒಪ್ಪಿಗೆಯಾಗಿದ್ದು ಇನ್ನು ಮುಂದೆ ಅಲ್ಲಿ ಶಾಂತಿ ಸ್ಥಾಪನೆಯಾಗುವ ಲಕ್ಷಣ ಕಾಣುತ್ತದೆ.

● ಈ ಕರಾರುಗಳನ್ನೊಪ್ಪಿ ಇಂಡೊನೇಶಿಯಾದ ಪ್ರಜಾರಾಜ್ಯ ಸರಕಾರ ವಿದೇಶ ಸಂಪರ್ಕದ ಮಹತ್ವದ ಅಧಿಕಾರವನ್ನು ಬಿಟ್ಟುಕೊಟ್ಟಂತಾಗಿದೆ. ಅದರೂ ಇಜಿಪ್ತದೊಡನೆ ಈಗಾಗಲೆ ಅದು ಮಾಡಿಕೊಂಡ ಒಪ್ಪಂದವನ್ನೂ ಇತರ ಅರಬ ರಾಷ್ಟ್ರಗಳೊಡನೆ ಬೆಳೆಸಿದ ಸಂಪರ್ಕವನ್ನೂ ಉಳಿಸಬೇಕೆಂದು ಡಚ್ಚರಿಗೆ ಕೇಳಿಕೊಳ್ಳಲಾಗಿದೆ.

● ಪ್ರಜಾರಾಜ್ಯದ ಅಧ್ಯಕ್ಷ ಡಾ ಸೊಕರ್ನೊ ಅವರು ಬಿತ್ತರಿಸಿದ ಒಂದು ಭಾಷಣದಲ್ಲಿ ಪ್ರಜಾರಾಜ್ಯ ಪ್ರದೇಶದಲ್ಲಿರುವ ಎಲ್ಲ ವಿದೇಶಿ ಸೊತ್ತುಗಳನ್ನು ತಿರುಗಿ ಕೊಡುವದಾಗಿ ಮಾತುಕೊಟ್ಟರು.

● ಈಗ ನೆದರ್ಲಂಡ್ಸ, ಇಂಡೊನೇಶಿಯಾ ಪ್ರಜಾರಾಜ್ಯ, ಪೂರ್ವ ಇಂಡೊನೇಶಿಯಾ ಮತ್ತು ಸೆಲೆಬಿಸ್ ರಾಜ್ಯಗಳನ್ನೊಳಗೊಂಡ ಸಂಯುಕ್ತ ರಾಜ್ಯ ರಚಿಸುವ ಪೂರ್ವಭಾವಿಯಾಗಿ ನಡುಗಾಲ ಸರಕಾರವನ್ನು ಸ್ಥಾಪಿಸುವ ಮಾರ್ಗ ನಿರ್ವಿಘ್ನವಾಗಿದೆ.

ನಾಲ್ಕು ಮಾತು — ರಂಗನಾಥ ದಿವಾಕರ

ಸ್ವರಾಜ್ಯ—ಸ್ವಾತಂತ್ರ್ಯ

ಜುಲೈ ೪ನೆಯ ದಿನಾಂಕವು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಇತಿಹಾಸದಲ್ಲಿ ಅತ್ಯಂತ ಮಹತ್ವದ ದಿವಸವು. ಅದು ಅವುಗಳ ಸ್ವಾತಂತ್ರ್ಯದ ದಿವಸ. ಆ ದಿನ ಆ ದೇಶದಲ್ಲಿ ಎಲ್ಲೆಲ್ಲಿಯೂ ಅದ್ಭುತವಾದ ಉತ್ಸವವಾಗುತ್ತದೆ. ಅದೇ ದಿನ ಈ ವರುಷ ಬ್ರಿಟಿಶ ಪಾರ್ಲಿಮೆಂಟಿನಲ್ಲಿ ಇಂಡಿಯಾ ಸ್ವಾತಂತ್ರ್ಯದ ಬಿಲ್ಲಿನ ಪ್ರಥಮ ವಾಚನವು ನಡೆಯಿತು. ಇದೇನೋ ಒಂದು ಶುಭ. ಆದುದರಿಂದ ಸಧ್ಯಕ್ಕೆ ಪಾಕಿಸ್ತಾನ ಇಂಡಿಯಾ ಎಂಬ ಎರಡು ತುಂಡುಗಳು ಭಾರತದಲ್ಲಿ ಆದರೂ ಯಾವುದೇ ಒಂದು ಕಾರಣದಿಂದ ಎರಡೂ ಕೂಡಿ ಒಂದಾಗಬಹುದೋ ಎಂಬ ಆಶೆ. ಈ ಕ್ಷಣಕ್ಕೆ ನೋಡಿದರೆ ಆ ಆಶೆಗೆ ಆಧಾರವೇನೂ ಇಲ್ಲ. ಆದರೆ ಆ ಆಶೆ ಮಾತ್ರ ನಮ್ಮನ್ನು ಬಿಡುವದಿಲ್ಲ ಎಂಬ ಮಾತು ನಿಜ.

× × × ×

೧೯೦೬ರಲ್ಲಿ ಕಾಂಗ್ರೆಸ್ಸು ಪ್ರಥಮದಲ್ಲಿ ಸ್ವರಾಜ್ಯದ ಮಂತ್ರವನ್ನು ಸ್ವೀಕರಿಸಿತು. ೧೯೧೬ರಲ್ಲಿ ಆ ಮಂತ್ರಕ್ಕೆ ಹೋಮರೂಲ ಚಳವಳಿಯ ಮೂಲಕ ಹೆಚ್ಚಿನ ತೇಜಕಳೆ ತುಂಬಿತು. ೧೯೨೦ರಲ್ಲಿಯ ಅಸಹಕಾರದ ನಿರ್ಧಾರದಿಂದ ಯಾವುದಕ್ಕೆ ಸ್ವರಾಜ್ಯಪ್ರಾಪ್ತಿಯ ಶಕ್ತಿ ಎಷ್ಟು ಪರೋ ಆ ಶಕ್ತಿ ಸಂಚಯವಾಗಲು ಪ್ರಾರಂಭವಾಯಿತು. ೧೯೨೯ರಲ್ಲಿ ಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿ ಎಂದು ಸಾರುವ ಧೈರ್ಯ ಬಂದಿತು. ೧೯೪೨ರಲ್ಲಿ 'ಹೊರಟು ಹೋಗಿರಿ' ಎಂದು ಬ್ರಿಟಿಶರಿಗೆ ಹೇಳಿಬಿಡುವಷ್ಟು ಸಾಹಸವುಂಟಾಯಿತು. ಕೊನೆಗೆ ೧೯೪೭ರಲ್ಲಿ ಬ್ರಿಟಿಶರು ಹೊರಟೇಬಿಟ್ಟರು. ಈಗ ಕೈಸೇರುವದು ಪೂರ್ಣ ಸ್ವಾತಂತ್ರ್ಯವೆನಿಸದಿದ್ದರೂ ಅಗಸ್ಟ ೧೫ನೆಯ ದಿನ ಅಥವಾ ಮುಂದೆ ಬೇಕಾದಾಗ ನಾವು ಪೂರ್ಣ ಸ್ವತಂತ್ರರೆಂದು ಸಾರಲು ನಾವು ಸ್ವತಂತ್ರರೆಂಬುದು ನಿಜ.

ವರಂಗಲ್ಲಿನ ವಾರ್ತೆ

ನಿಜಾಮ ಹೈದ್ರಾಬಾದಿನ ತೆಲುಗು ಭಾಗದಲ್ಲಿ ವರಂಗಲ್ಲ ಎಂಬಲ್ಲಿ ನಡೆದ ದುರ್ಘಟನೆಗಳನ್ನು ಕೇಳಿದ ಪ್ರತಿಯೊಬ್ಬನೂ ಇನ್ನು ಹೆಚ್ಚಿನ ದುರ್ಘಟನೆಗಳನ್ನು ಕೇಳಲು ಸಿದ್ಧನಾಗಬೇಕಾಗುವದೊ ಏನೊ ಎಂಬ ಭಯ ಈಗ ಉಂಟಾಗಿದೆ. ಇಷ್ಟೇ ಅಲ್ಲದೆ ಹೈದ್ರಾಬಾದ ಸಂಸ್ಥಾನದಲ್ಲಿ ನಡೆಯುವ ಈ ಬಗೆಯ ಘಟನೆಗಳ ಪರಿಣಾಮಗಳು ಕೇವಲ ಆ ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿರದೆ ಇಡೀ ಹಿಂದುಸ್ಥಾನವನ್ನೆ ವ್ಯಾಪಿಸುವಂತಿವೆ. ವರಂಗಲ್ಲಿನಲ್ಲಿ ಹೈದ್ರಾಬಾದ ಸ್ವಾತಂತ್ರ್ಯದಿನವು ಮುಸಲ್ಮಾನ ಬಾಂಧವರಿಂದ ಆಚರಿಸಲಾಯಿತು. ಮುಂದೆ ಹಿಂದುಗಳು ಏಕಾದಶಿಯ ದಿವಸ ಭಜನ ಪೂಜನಾದಿಗಳನ್ನು ನಡೆಸುವ ಕಾಲಕ್ಕೆ ಜಾತೀಯ ಗಲಭೆ ಶುರುವಾಗಿ ಸರಕಾರೀ ಅಧಿಕಾರಿಗಳ ಪಕ್ಷಪಾತದ ಮೂಲಕ. ಆರ್ಯ ಸಮಾಜದ ವೀರ ದಲಗಳ ಮೇಲೆ ಹಾಗೂ ಜನಸಾಮಾನ್ಯರ ಮೇಲೆ ಗುಂಡಿನ ಮಳೆ ನಡೆದು ೨೫ ಜನ ಸತ್ತರು. ಹಾಗೂ ಸಾವಿರಾರು ಜನರಿಗೆ ಗಾಯಗಳಾದವು. ಇದೇ ಕ್ರಮವು ಆ ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ನಡೆಯಬಹುದೆಂಬ ಭಯ ಪ್ರಜೆಗಳಲ್ಲಿ ಉಂಟಾಗಿದೆ. ಆ ಮೂಲಕ ಸಾವಿರಾರು ಜನ ಅಲ್ಲಿಂದ ಹೊರಗೆ ಹೋಗಲಾರಂಭಿಸಿದ್ದಾರೆ. ಆದರೆ ಹಾಗೆ ಹೊರಗೆ ಹೋಗುವದರಿಂದ ಈ ಪ್ರಶ್ನೆಯು ಬಿಡುಗಡೆಯಾಗಲಾರದು. ಹೈದ್ರಾಬಾದ ಸಂಸ್ಥಾನದಲ್ಲಿ ಹಿಂದುಗಳ ಸಂಖ್ಯೆ ೧೦೦ಕ್ಕೆ ೮೬ರಷ್ಟು. ೧೦೦ರಲ್ಲಿ ೧೪ ಮಾತ್ರ ಮುಸಲ್ಮಾನರು. ಅರಸನು, ಮುಖ್ಯ ಅಧಿಕಾರಿಗಳು, ಮುಂತಾದವರು ಮುಸಲ್ಮಾನರಿದ್ದಷ್ಟು ನಿಜವಿದ್ದರೂ ಅಲ್ಲಿಯ ಜನತೆ ಹಿಂದುಗಳು. ಈಗ ಅಲ್ಲಿ ಜನ ಜಾಗೃತಿ ಸಾಕಷ್ಟು ಆಗಿರುವದರಿಂದ ತಮ್ಮನ್ನು ಕೇಳಿ ತಮ್ಮ ಸಮ್ಮತಿಯಿಂದ ರಾಜ್ಯಕಾರಭಾರವು ನಡೆಯಬೇಕೆಂದು ಜನರು ಹಟಹಿಡಿದಿರುವರು. ಆದರೆ ತಮಗೆ ಇಷ್ಟಬಿದ್ದಂತೆ ತಾವು ಮಾಡತಕ್ಕವರೆಂದು ನಿಜಾಮ ಸಾಹೇಬರು ಹಾಗೂ ಅವರ ಜಾತಿಯವರಾದ ಮುಸಲ್ಮಾನ ಬಾಂಧವರು ಪಣತೊಟ್ಟಿದ್ದಾರೆ. ಹೀಗಾಗಿ ಕೇವಲ ಒಂದು ರಾಜಕೀಯ ಪ್ರಶ್ನೆಗೆ —ಪ್ರಜೆಗಳ ಮತದಿಂದ ರಾಜ್ಯ ನಡೆಯಬೇಕು ಎಂಬ ಪ್ರಶ್ನೆಗೆ— ಜಾತೀಯ ಸ್ವರೂಪ ಬಂದು ಬಿಟ್ಟಿದೆ ಹಾಗೂ ಇಡೀ ಹಿಂದುಸ್ತಾನದ ವಾತಾವರಣವನ್ನೆ ಅದು ಆವರಿಸಿ ಬಿಡುವದೊ ಏನೋ ಎಂಬ ಭಯ ಎಲ್ಲರಿಗೂ ಇದೆ. ಮುಸಲ್ಮಾನ ಬಾಂಧವರು ಶಸ್ತ್ರಾಸ್ತ್ರಗಳನ್ನು ಶೇಖರಿಸುತ್ತಿರುವರು, ಅವರಿಗೆ ಅಧಿಕಾರಿಗಳು ಅನುಕೂಲ ಮಾಡಿಕೊಡುತ್ತಿರುವರು ಎಂಬ ಮುಂತಾದ ದೂರುಗಳು ಕೇಳಬರಹತ್ತಿ ಬಹುದಿವಸಗಳಾಗಿ ಹೋದರೂ ಅವರ ಪ್ರತ್ಯಕ್ಷ ಪ್ರತೀತಿ ಈ ವರೆಗೂ ಬಂದಿರಲಿಲ್ಲ. ಆ ಪ್ರತೀತಿ ವರಂಗಲ್ಲಿನಲ್ಲಿ ಬಂದಿತು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

× × ×

ಸರಿ. ಹೀಗೆ ನಡೆದಿದೆ ಇದಕ್ಕೆ ಉಪಾಯವೇನು ಎಂಬುದೆ ಮುಖ್ಯ ಸಮಸ್ಯೆ. ನಿಜಾಮ ಸರಕಾರಕ್ಕಾಗಲಿ ಅಲ್ಲಿ ನೂರಕ್ಕೆ ೧೪ರಷ್ಟಿರುವ ಮುಸಲ್ಮಾನ ಬಾಂಧವರಿಗಾಗಲಿ ಅಂಜಿ ಓಡಿಹೋಗುವದು ಎಂದೂ ಧರ್ಮವಾಗಲಾರದು. ನಿಂತಲ್ಲಿಯೆ ನಿಂತು ಒಂದು ಇಂಚು ಸಹ ಹಿಂಜರಿಯದೆ ಧೈರ್ಯದಿಂದ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವದರಲ್ಲಿಯೆ ಗಂಡಸುತನವಿದೆ. ನಮ್ಮ ಸಂಸ್ಕೃತಿ, ಧರ್ಮ, ಪರಂಪರೆ, ಭೂಮಿ ಸೀಮೆ ಇವುಗಳ ಸಂರಕ್ಷಣವನ್ನು ಸರ್ವಸ್ವ ತ್ಯಾಗಮಾಡಿಯಾದರೂ ಮಾಡೇ ತೀರಲಿಕ್ಕೆಬೇಕು. ಅವರೇ ವೀರರೂ ಶೂರರೂ ಧೀರರು.

ಹೈದರಾಬಾದ ಹಾಗೂ ಕರ್ನಾಟಕ

ನಿಜಾಮ ಹೈದ್ರಾಬಾದದಲ್ಲಿ ಸುಮಾರು ೩೦ ಲಕ್ಷ ಕನ್ನಡಿಗರು ಸಿಕ್ಕಿಬಿದ್ದಿರುವರು. ಅವರ ಮೇಲೆ ಯಾವ ಕಾಲಕ್ಕೆ ಯಾವ ಆಪತ್ತು ಬಂದೊದಗುವದೊ ಇದನ್ನು ಹೇಳುವದು ದುರಾಪಾಸ್ತವಾಗಿದೆ. ಈ ಹೊತ್ತು ವರಂಗಲ್ಲಿನಲ್ಲಿ ಆದುದು ನಾಳೆ ರಾಯಚೂರಲ್ಲಿಯೊ ಗುಲಬುರ್ಗೆಯಲ್ಲಿಯೊ ಬೀದರದಲ್ಲಿಯೊ ಆಗಬಲ್ಲದು. ನಿಜಾಮ ಹೈದ್ರಾಬಾದಿನಲ್ಲಿ ಪೂರ್ಣ ಜವಾಬ್ದಾರಿ ರಾಜ್ಯಪದ್ಧತಿಯ ಬಗ್ಗೆ ಹೋರಾಟ ನಡೆಯುವದು ನಿಶ್ಚಯ. ಅದರಲ್ಲಿ ನಿಜಾಮ ಕರ್ನಾಟಕವು ಭಾಗವಹಿಸುವದು ನಿಶ್ಚಯ. ಈ ಹೋರಾಟಕ್ಕೆ ಜಾತೀಯ ಸ್ವರೂಪವು ಬರುವದು (ಈಗ ಬಂದೇ ಬಿಟ್ಟಿರುವದೆಂದರೂ ಸಲ್ಲುವದು) ನಿಶ್ಚಯ. ಇಷ್ಟೆಲ್ಲ ಆದ ಬಳಿಕ ಆ ಭಾಗದಲ್ಲಿಯ ಕನ್ನಡಿಗರಿಗೆ ಯಾವ ಯಾತನೆಗಳನ್ನು ಸಹಿಸುವ ಪ್ರಸಂಗ ಬಂದೇತೀರುವದೆಂಬುದೂ ಅಷ್ಟೇ ನಿಶ್ಚಯ. ಅಂಥ ಪ್ರಸಂಗದಲ್ಲಿ ಅಲ್ಲಿಯ ಕನ್ನಡಿಗರು ವೀರೋಚಿತವಾದ ಧೈರ್ಯ ಶೌರ್ಯದಿಂದ ಹೋರಾಡುವರೆಂಬಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಇನ್ನು ಬರುವ ಕಾಲವು ಸ್ಮಶಾನ ಶಾಂತಿಯ ಕಾಲವಲ್ಲ. ಭೂಮಿಗಾಗಿ ಸೀಮೆಗಾಗಿ, ಧರ್ಮಕ್ಕಾಗಿ ಭಾಷೆಗಾಗಿ ಹೋರಾಡಿ ವೀರಸ್ವರ್ಗವನ್ನು ಪಡೆಯಲು ಸಿದ್ಧವಾಗುವ ಕಾಲವು. ಹಿಂಜರಿಯದೆ ಹೆದರದೆ ಬೆದರದೆ ಒಂದು ಗುಂಜಿ ತೂಕ ಭೂಮಿಯನ್ನು ಯಾರಿಗೂ ಕೊಡದೆ ಅಲ್ಲಿಯ ಕನ್ನಡಿಗರು ಹೋರಾಡಲು ಅಣಿಯಾಗಬೇಕು. ಯಾವ ಮೂಲೆಯಿಂದಲೊ ಬಂದು ಇಲ್ಲಿ ವಾಸವಾಗಿರುವ ನಾಲ್ಕು ಪಠಾಣರು ಯಾವ ನಿರ್ಭಯತೆಯಿಂದ ಇಲ್ಲಿರುವರೊ ಅದೇ ಬಗೆಯ ನಿರ್ಭಯತೆಯಿಂದ ನಮ್ಮ ಜನರು ಮುಸಲ್ಮಾನರ ರಾಜ್ಯದಲ್ಲಿ ಇರಲು ಕಲಿಯಲಿಕ್ಕೆಬೇಕು. ಈ ಸಂದರ್ಭದಲ್ಲಿ ನೆರೆಯ ಬ್ರಿಟಿಶ್ ಭಾಗಗಳಲ್ಲಿಯ ಕನ್ನಡಿಗರು ಕೂಡ ಈ ಹೋರಾಟದಲ್ಲಿ ಕನ್ನಡ ಬಾಂಧವರಿಗೆ ಅಪಾರ ಸಹಾಯವನ್ನು ಮಾಡಲಿಕ್ಕೆ ಸಿದ್ಧರಾಗಲಿಕ್ಕೆಬೇಕು.

ಹೋಟೆಗಳಲ್ಲಿಯ ಕೂಲಿಕಾರರು

ಕಾಫೀ—ಟೀಗಳನ್ನು ಕುಡಿಯುವಾಗ ನಮಗೆ ಒಳ್ಳೆ ಸುಖವಾಗುವದು. ಆದರೆ ಅದು ಬಾಯಲ್ಲಿ ಬಂದು ಬೀಳಬೇಕಾದರೆ ಯಾರ್ಯಾರಿಗೆ ಎಷ್ಟೆಷ್ಟು ದುಃಖವಾಗುತ್ತಿರುವದು ಎಂಬದರ ಕಲ್ಪನೆ ನಮಗೆ ಸಾಕಷ್ಟಿಲ್ಲ, ಆ ಬಗ್ಗೆ ಕಳೆದ ಸಾರೆಯ 'ಕರ್ಮವೀರದ'ಲ್ಲಿ ಒಂದು ಪ್ರತ್ಯೇಕವಾದ ಲೇಖ ಬಂದಿರುವದು. ಅದು ಅನುಭವ ಪಡೆದವರು ಬರೆದುದು. ಅದರಲ್ಲಿ ಕಾಲ್ಪನಿಕವಾದುದೇನೂ ಇಲ್ಲ. ವಾಸ್ತವವಾದುದನ್ನೆ ಲೇಖಕರು ವರ್ಣಿಸಿದ್ದಾರೆ. ಈ ಬಗೆಯ ದುಃಖವು ಅನಿವಾರ್ಯವಲ್ಲ. ಅದು ನಿವಾರ್ಯವು. ನಮ್ಮ ಸಮಾಜದಲ್ಲಿಯ ಆರ್ಥಿಕ—ಪದ್ಧತಿಯ ಮೂಲಕ, ಧಂಡವಲಶಾಹಿಯ ಮೂಲಕ ಈ ತರದ ಪರಿಸ್ಥಿತಿ ಉಂಟಾಗಿದೆ. ೮ ಗಂಟೆ ದುಡಿಯುವ ಪ್ರತಿಯೊಬ್ಬ ಕೂಲಿಕಾರನಿಗೆ ಇಂತಿಷ್ಟು ಜೀವನ ವೇತನವು ಸಿಕ್ಕೇತೀರಬೇಕು, ಅವನ ಊಟ ಉಡಿಗೆ, ಆಶ್ರಯಸ್ಥಾನ, ವಿದ್ಯಾಬುದ್ಧಿ ಇಂತಿಷ್ಟು ಮಟ್ಟದವು ಇದ್ದೇತೀರಬೇಕು. ಎಂಬ ನಿರ್ಬಂಧ ಹಾಕಿ ಆ ಪ್ರಕಾರ ನಮ್ಮ ಸಮಾಜ ರಚನೆಯಾದರೆ ಕಾಫೀ ಹೋಟೆಗಳಲ್ಲಿ ಕೂಲಿಕಾರರಿಗೆ ಆಗುತ್ತಿರುವ ದುಃಖಗಳು ನಿರ್ನಾಮವಾಗಬಲ್ಲವು. ಇಲ್ಲದೆ ಹೋದರೆ ಈಗ ಶತಕಾನುಶತಕಗಳ ವರೆಗೆ ನಡೆಯುತ್ತ ಬಂದ ಶೋಷಣೆಯು ಹಾಗೆಯೆ ಸಾಗುವದು. ಯಾವುದೊಂದು ವ್ಯಕ್ತಿಯ ದೋಷದ ಮೂಲಕ ಈ ಬಗೆಯ ದುಃಖವು ಕೂಲಿಕಾರರಿಗೆ ಆಗುತ್ತಿರುವದೆಂದು ಹೇಳಲಿಕ್ಕಾಗುವದಿಲ್ಲ. ಅದೊಂದು ಈಗಿನ ಆರ್ಥಿಕ ಪದ್ಧತಿಯಲ್ಲಿಯ ದೋಷವು. ವ್ಯಕ್ತಿಗಳಿಗೆ ತಮ್ಮ ವೈಯಕ್ತಿಕ ಲಾಭಕ್ಕಾಗಿ ಬೇಕಾದ ಹಾಗೆ ಧನಸಂಪಾದನೆ ಮಾಡಲು ಆಸ್ಪದವಿರುವ ಆರ್ಥಿಕ ಪದ್ಧತಿ ಪ್ರಚಲಿತವಿರುವವರೆಗೆ ಈ ಬಗೆಯ ಶೋಷಣೆಯ ಲಯವಾಗಲು ಆಸ್ಪದವಿಲ್ಲ ಎಂಬುದು ಸಿದ್ಧಾಂತ. ಆದುದರಿಂದ ಈಗಿನ ಈ ಪದ್ಧತಿಯನ್ನೆ ಬದಲಾಯಿಸುವದು ಕ್ರಮಪ್ರಾಪ್ತವಾಗಿದೆ ಎಂಬಲ್ಲಿ ಸಂದೇಹವಿಲ್ಲ.

ಕಸ್ತೂರಬಾ ನಿಧಿಯ ಕಾರ್ಯ

ಇದೇ ೮ನೆಯ ತಾರೀಖಿನ ದಿನ ಸಾಯಂಕಾಲ ಬೆಳವಡಿ ಗ್ರಾಮದಲ್ಲಿ ಒಂದು ಚಿಕ್ಕ ಸಮಾರಂಭ ನಡೆಯಿತು. ಈಗೊಂದು ವರುಷ ಕಸ್ತೂರಬಾ ನಿಧಿಯ ಪರವಾಗಿ ಸೇವಿಕೆಯರದೊಂದು ಶಿಬಿರ ಅಲ್ಲಿ ನಡೆದಿತ್ತು. ೩೦ ಸೇವಿಕೆಯರು ತರಬೇತು ಹೊಂದಿ ಕುಗ್ರಾಮಗಳಲ್ಲಿ ಹೋಗಿ ನೆಲೆಸಿ ಜನಸೇವೆ ಮಾಡಲು ಸಿದ್ಧರಾಗಿ ನಿಂತಿದ್ದರು. ಆ ಶಿಬಿರದ ಮುಕ್ತಾಯ ಸಮಾರಂಭ ಆ ದಿನ ನಡೆಯಿತು. ಸತಿ ಕಸ್ತೂರಬಾ ಅವರ ಪುಣ್ಯ, ನಮ್ಮ ಸಹೋದರಿಯರ ಭಾಗ್ಯೋದಯ. ಸಿಟ್ಟಿಂದು ಬಾಯಿಬಿಚ್ಚುವ ಧೈರ್ಯವಿಲ್ಲದ ಸುಕುಮಾರಿಯರು ಗಂಡುಗಚ್ಚೆ ಹಾಕಿ ವೀರೆಯರಂತೆ ಧ್ವಜವಂದನ ಮಾಡುವದನ್ನೂ ಕವಾಯತು ಕಲಿಯುವದನ್ನೂ ಟೊಂಕಕಟ್ಟಿ ಹಳ್ಳಿಗರ ಸೇವೆ ಮಾಡುವದನ್ನೂ ನೋಡಿದರೆ ನಮ್ಮ ಸ್ತ್ರೀವರ್ಗದಲ್ಲಿ ಒಂದು ಹೊಸ ತೇಜದ ಸಂಚಾರವಾಗಿದೆ ಎಂಬುದು ಯಾರಿಗಾದರೂ ಸ್ಪಷ್ಟ ಒಡೆದು ಕಾಣುವಂತಿತ್ತು. ಗಂಡಸರಲ್ಲನೇಕರು ಹಳ್ಳಿಗಳ ಸೇವೆ ಮಾಡಲು ಹಿಂಜರಿಯುತ್ತಿರುವಾಗ ಮಹಿಳೆಯರು ಈ ಪರಿ ಸಿದ್ಧರಾಗಿ ನಮ್ಮನ್ನು ನಾಚಿಸುತ್ತಿರುವದನ್ನು ನೋಡಿದರೆ ಒಂದು ಬಗೆಯ ಹೊಸ ಅಭಿಮಾನದೊಡನೆ ಅಸೂಯೆಯೂ ಉಂಟಾಗುವದು. ಇದೇನು? ಗಂಡಸರನ್ನು ಸೋಲಿಸಿದರಲ್ಲಾ ಹೆಂಗಳೆಯರು ಎನಿಸುವದು. ಆದರೆ ಇದೇ ಭಾವನೆ, ಇದೇ ಪ್ರೇರಣೆ. ನಮ್ಮನ್ನೂ ಸಮಾಜವನ್ನೂ ಅಧೋಗತಿಯಿಂದ ಮೇಲಕ್ಕೆತ್ತಬಲ್ಲದು ಹೊರತು ಇನ್ನೊಂದಲ್ಲ. ಸ್ವಾತಂತ್ರ್ಯವೇನೋ ಬಂದು ಬಿಟ್ಟಿತೆನ್ನಬಹುದು. ಆದರೆ ಅದು ಏತಕ್ಕೆ? ನಮ್ಮ ಮಟ್ಟವನ್ನು ಎತ್ತಲಿಕ್ಕೆ, ನಮ್ಮ ಬಡತನವನ್ನು ಹಿಂಗಿಸಲಿಕ್ಕೆ, ನಮ್ಮ ಅಜ್ಞಾನವನ್ನು ಹೋಗಲಾಡಿಸಲಿಕ್ಕೆ, ಆರ್ಥಿಕ ವಿಷಮತೆಯನ್ನು ಕಳೆಯಲಿಕ್ಕೆ. ಅದೆಲ್ಲ ಆಗುವ ಬಗೆ ಹೇಗೆ? ಬರಿಯ ಸರಕಾರದವರಿಂದ, ಕಾನೂನುಗಳಿಂದ ಆಗದು. ಜನಸೇವೆಯೆ ತಮ್ಮ ಪರಮ ಧರ್ಮವೆಂದು ಬಗೆದು ತಮ್ಮ ಜನಪ್ರಿಯತೆಯನ್ನು ಸೇವಾರೂಪಕ್ಕೆ ಇಳಿಸಬೇಕೆನ್ನುವ ಲಕ್ಷಾಂತರ ಸಮಾಜ ಸೇವಕ ಸೇವಕಿಯರೆ ಮೇಲಿನ ಧ್ಯೇಯವನ್ನು ಸಾಧಿಸಬಲ್ಲರು.

ಹಿಂದು ಮತ್ತು ಮುಸಲ್ಮಾನ

(ದಿವಂಗತ ರವೀಂದ್ರರು ೧೯೨೨ರಲ್ಲಿ ಬರೆದ ಪತ್ರವೊಂದರ ಅನುವಾದ)

ಅನುವಾದಕರು— ಶ್ರೀ "ಚನ್ನ" ಶಾಂತಿನಿಕೇತನ, ಬಂಗಾಲ.

ಅನ್ಯ ಧರ್ಮಗಳೊಂದಿಗೆ ವಿರೋಧವು ಉಗ್ರವಾಗಿದ್ದ ಧರ್ಮ ಸಂಪ್ರದಾಯಗಳು ಜಗತ್ತಿನಲ್ಲಿ ಎರಡು ಮಾತ್ರ ಇವೆ. ಅವು ಈಸಾಯಿ ಮತ್ತು ಇಸ್ಲಾಮ ಧರ್ಮಗಳು. ಉಕ್ತ ಧರ್ಮದ ಅನುಯಾಯಿಗಳು ಕೇವಲ ತಮ್ಮ ಧರ್ಮ ಒಂದನ್ನು ಪಾಲಿಸಿಕೊಂಡು ಸಂತುಷ್ಟರಾಗಿ ಉಳಿಯದೆ ಅನ್ಯ ಧರ್ಮಗಳನ್ನು ಪ್ರತಿಹತ ಮಾಡುವದಕ್ಕೂ ಉದ್ಯುಕ್ತರಿದ್ದಾರೆ; ಆದ್ದರಿಂದ ಅವರೊಂದಿಗೆ ಒಂದಾಗಲಿಕ್ಕೆ ಅವರ ಧರ್ಮಗ್ರಹಣದ ವಿನಾ ಎರಡನೆಯ ಉಪಾಯವಿಲ್ಲ. ಈಸಾಯಿ ಧರ್ಮಾವಲಂಬಿಗಳ ವಿಷಯದಲ್ಲಿ ಸರಳವಾದ ಸಂಗತಿಯಿದು—ಅವರ ಮನಸ್ಸು ಮಧ್ಯಯುಗದ ಸೀಮೆಯಲ್ಲಿ ಸಿಕ್ಕಿಕೊಂಡಿಲ್ಲ. ಅವರು ಆಧುನಿಕ ಯುಗದ ವಾಹನವಾಗಿದ್ದಾರೆ. ಧರ್ಮವು ಅವರ ಸಮಗ್ರ ಜೀವನವನ್ನು ಸುತ್ತಿಕೊಂಡಿರದ ಕಾರಣ ಅವರು ಅನ್ಯ ಧರ್ಮಾವಲಂಬಿಗಳನ್ನು ತಮ್ಮ ಧಾರ್ಮಿಕ ವ್ಯವಧಾನಗಳ ಮೂಲಕ ಬೇರ್ಪಡಿಸಲಿಕ್ಕೆ ಅಸಮರ್ಥರಿದ್ದಾರೆ. 'ಯುರೋಪಿಯ' ಮತ್ತು 'ಈಸಾಯಿ' ಈ ಎರಡು ಶಬ್ದಗಳು ಸಮಾನಾರ್ಥವಾಗಿಲ್ಲ; 'ಯುರೋಪೀಯ ಬೌದ್ಧ' ಮತ್ತು 'ಯುರೋಪೀಯ ಮುಸಲ್ಮಾನ' ಶಬ್ದಗಳಲ್ಲಿ ಸ್ವತಃ ವಿರೋಧವಿಲ್ಲ. ಆದರೆ ಧರ್ಮದ ಹೆಸರಿನಿಂದ ಯಾವ ಜಾತಿಯ ನಾಮಕರಣವಾಗುತ್ತದೆಯೋ ಅದರ ಪ್ರಧಾನ ಪರಿಚಯವು ಧರ್ಮದ ಮೂಲಕವಾಗಿಯೆ ಆಗುತ್ತದೆ. 'ಮುಸಲಮಾನ ಬೌದ್ಧ' ಅಥವಾ 'ಮುಸಲಮಾನ ಈಸಾಯಿ'— ಇವು ತಮ್ಮೊಳಗೇ ಅಸಂಭವ ಇವೆ. ಇನ್ನು ಎರಡನೆಯದಾಗಿ ಹಿಂದು ಜಾತಿ ಕೂಡ ಒಂದು ವಿಧವಾಗಿ ಮುಸಲ್ಮಾನದ ತರಹವಿದೆ. ಅರ್ಥಾತ್ ಹಿಂದುವೂ ಧರ್ಮದ ಪ್ರಾಕಾರದಿಂದ ಪರಿವೇಷ್ಟಿತನು. ಆದರೆ ಬಾಹ್ಯ ಪ್ರಭೇದವಿಷ್ಟೇ—ಅನ್ಯ ಧರ್ಮಗಳೊಂದಿಗೆ ವಿರೋಧವು ಅದರಲ್ಲಿ (ಹಿಂದು ಧರ್ಮದಲ್ಲಿ) ಸಕರ್ಮಕವಾಗಿಲ್ಲ, ಸಮಸ್ತ ಅಹಿಂದು ಧರ್ಮಗಳೊಂದಿಗೆ ಅದರ ಸಂಬಂಧ "ಅಹಿಂಸಾತ್ಮಕ", ಅಸಹಕಾರಾತ್ಮಕ" ಇದೆ.

ಹಿಂದುಗಳ ಧರ್ಮವು ಮುಖ್ಯತಃ ಜನ್ಮಗತ ಮತ್ತು ಆಚಾರ ಮೂಲಕವಾಗಿರುವ ಕಾರಣ ಅದರ ವ್ಯವಧಾನ ಮತ್ತೂ ಕಠಿಣವಾಗಿದೆ. ಇಸ್ಲಾಮ ಧರ್ಮವನ್ನಂಗೀಕರಿಸಿ ಮುಸಲ್ಮಾನರೊಂದಿಗೆ ಮೇಳೈಸಿಕೊಂಡಿರಲಿಕ್ಕಾಗಬಲ್ಲುದು; ಆದರೆ ಹಿಂದು ಧರ್ಮದ ಈ ಮಾರ್ಗ ಅತಿಶಯ ಸಂಕೀರ್ಣವಿದೆ. ಆಹಾರ ವ್ಯವಹಾರ ಮೊದಲಾದವುಗಳಲ್ಲಿ ಇಸ್ಲಾಮವು ನಿಷೇಧದ ಮೂಲಕ ಅನ್ಯ ಸಾಂಪ್ರದಾಯಿಗಳ ಪ್ರತ್ಯಾಖ್ಯಾನ ಮಾಡುವದಿಲ್ಲ; ಆದರೆ ಹಿಂದುವು ಅಲ್ಲಿಯೂ ಸತರ್ಕನಾಗಿದ್ದಾನೆ. ಮುಸಲ್ಮಾನ ಗುರು ಪದವಿಯ ಕಾಲದಲ್ಲಿ, ಮುಸಲ್ಮಾನರು ತಮ್ಮ ಮಸೀದೆಯಲ್ಲಿ ಅನ್ಯತ್ರ ಹಿಂದುಗಳನ್ನು ಎಷ್ಟು ಸಮೀಪಕ್ಕೆ ಸೆಳೆದುಕೊಂಡಿದ್ದರೋ ಅಷ್ಟು ಸಮೀಪಕ್ಕೆ ಮುಸಲ್ಮಾನರನ್ನು ಹಿಂದುಗಳೆಂದೂ ಜಗ್ಗಿಕೊಂಡಿಲ್ಲ. ಮನುಷ್ಯ—ಮನುಷ್ಯರಲ್ಲಿ ಆಚಾರದ ಸೇತುವೆಯುಂಟಾಗಿದೆ; ಇದೇ ಜಾಗದಲ್ಲಿ ಹಿಂದುವು ಹೆಜ್ಜೆ ಹೆಜ್ಜೆಗೆ ಪ್ರತಿಬಂಧಗಳನ್ನು ನಿಲ್ಲಿಸಿದ್ದಾನೆ. ಯಾವ ದಿನ ನಾನು ಮೊಟ್ಟಮೊದಲು ಜಹಾಗೀರದಾರಿಯ (ಜಮೀನದಾರಿ) ಕೆಲಸ ಕೈಕೊಂಡಿದ್ದೆನೋ ಆ ದಿನಗಳಲ್ಲಿ ಕಂಡಿದ್ದು ಇದು— ನಮ್ಮ ಕಚೇರಿ (ಚಾವಡಿ) ಯಲ್ಲಿ ಮುಸಲ್ಮಾನ ರೈತರನ್ನು ಕೂಡ್ರಿಸುವಾಗ ಜಮಖಾನೆಯ ಒಂದು ಭಾಗವನ್ನು ಮಡಿಚಿ ಅವರಿಗೆ ಬರಿ ನೆಲವನ್ನು ಕೊಡಲಾಗುತ್ತಿತ್ತು. ಮನುಷ್ಯರ ಮಿಲನ ಕ್ಷೇತ್ರದಲ್ಲಿ ಅನ್ಯ ಧರ್ಮಾವಲಂಬಿಗಳು ಅಪವಿತ್ರರೆಂದು ತಿಳಿಯುವ ಭಯಂಕರ ಬಾಧಕಗಿಂತ ದೊಡ್ಡ ಬಾಧಕ ಇನ್ನಿಲ್ಲ. ಭಾರತದ ದುರ್ಭಾಗ್ಯವೇನೋ ಹೀಗೆಯೇ ಇದೆ— ಹಿಂದು ಮತ್ತು ಮುಸಲ್ಮಾನ ಒಂದಾಗೇನೋ ಇದ್ದಾರೆ; ಆದರೆ ಹಿಂದುಗಳನ್ನು ಸುತ್ತಿದ ಪ್ರತಿಬಂಧವು ಧರ್ಮದ ಮೂಲಕ ಪ್ರಬಲವಾಗಿರದೆ ಆಚಾರದ ಮೂಲಕವಾಗಿದೆ; ಮುಸಲ್ಮಾನರನ್ನು ಸುತ್ತಿದ ಪ್ರತಿಬಂಧವು ಆಚಾರದ ಮೂಲಕ ಪ್ರಬಲವಾಗಿರದೆ ಧರ್ಮದ ಮೂಲಕವಾಗಿ ಪ್ರಬಲವಿದೆ. ಒಂದು ಪಕ್ಷದ ಬಾಗಿಲು ಎಲ್ಲಿ ತೆರೆದಿದೆಯೋ ಅಲ್ಲಿಯೇ ಇನ್ನೊಂದು ಪಕ್ಷದಬಾಗಿಲು ಮುಚ್ಚಿದೆ; ಆದರೂ ಕೂಡಿದ್ದು ಯಾತಕ್ಕಾಗಿ?

ಒಂದು ಕಾಲವಿತ್ತು—ಭಾರತದಲ್ಲಿ ಗ್ರೀಕ, ಪಾರಸಿಕ, ಶಕ ಇತ್ಯಾದಿ ಅನೇಕ ಜಾತಿಗಳ ಅಬಾಧ ಸಮಾಗಮ ಮತ್ತು ಸಮ್ಮಿಲನವಾಗಿತ್ತು; ಆದರೆ ನೆನಪಿರಲಿ, ಅದು "ಹಿಂದು" ಯುಗದ ಮುಂಚಿನಲ್ಲಿ ಮಾತ್ರ. ಯಾವುದಕ್ಕೆ ನಾವು "ಹಿಂದು" ಯುಗವೆಂದು ಎನ್ನುತ್ತೇವೋ ಅದು ಪ್ರತಿಕ್ರಿಯೆಯ ಯುಗ! ಈ ಯುಗದಲ್ಲಿ ಬ್ರಾಹ್ಮಣ ಧರ್ಮದ ಮಂದಿರವನ್ನು ಬಲ ಪ್ರಯತ್ನದಿಂದ ದೃಢವಾಗಿ ದಿಗ್ಬಂಧನ ಮಾಡಲಾಗಿತ್ತು. ಆಚಾರದ ದುರ್ಲಂಘನ ಗೋಡೆಗಳನ್ನು ನಿಲ್ಲಿಸಿ ಅದನ್ನು ದುಷ್ಪ್ರವೇಶ್ಯವನ್ನಾಗಿ ಮಾಡಲಾಗಿತ್ತು. ಈ ಸಂಗತಿಯನ್ನು ಆಗ ಮರೆಸಲಾಗಿತ್ತು. ಯಾವ ಪ್ರಾಣವುಳ್ಳ ವಸ್ತುವನ್ನೇ ಆಗಲಿ ಅಂಗ—ಪ್ರತ್ಯಂಗಗಳನ್ನು ಬಿಗಿದು ಕಟ್ಟುವದು ಅದನ್ನು ಕಾಪಾಡುವದಕ್ಕಲ್ಲ; ಆದರೆ ಜೀವ ತಗೆದುಕೊಳ್ಳುವದಕ್ಕೆ ಬುದ್ಧಿಪರಿವರ್ತನದ ಯಾವದೋ ವಿಶೇಷ ಕಾಲದಲ್ಲಿ, ರಜಪೂತ ಮೊದಲಾದ ವಿದೇಶೀ ಜಾತಿಗಳನ್ನು ತಮ್ಮ ಗುಂಪಿನಲ್ಲಿ ಸೆಳೆದುಕೊಂಡು ವಿಶೇಷ ಅಧ್ಯವಸಾಯದ ಮೂಲಕ ತಮ್ಮನ್ನು ಪರಕೀಯ ಸಂಸ್ರವ ಮತ್ತು ಪ್ರಭಾವದಿಂದ ಸಂಪೂರ್ಣವಾಗಿ ಸುರಕ್ಷಿತವಾಗಿಟ್ಟುಕೊಳ್ಳುವದಕ್ಕಾಗಿಯೇ ಭಾರತವಾಸಿಗಳು ಹಿಂದು ಧರ್ಮಕ್ಕೆ ಒಂದು ಪ್ರಕಾರದ ಸುನಿಪುಣ ಚತುರತೆಯಿಂದ ರಚಿಸಿದ ಪ್ರತಿಬಂಧಗಳ ಉದಾಹರಣೆಗಳು ಜಗತ್ತಿನಲ್ಲಿ ಬಹುಶಃ ಕೆಲವೇ ಸಿಗಬಹುದು. ಈ ಪ್ರತಿಬಂಧವು ಕೇವಲ ಹಿಂದು

—೧೩ನೇ ಪುಟಕ್ಕೆ

ಕರ್ಮವೀರ ಹರಿಜನ ಪುರವಣಿ

ಸಾಮ್ಯವಾದ

ಸಾಮ್ಯವಾದ ಸತ್ಯ ಮತ್ತು ಅಹಿಂಸೆಯ ಮೂರ್ತಿವಂತ ಪ್ರತೀಕವಾಗಬೇಕು. ಅದು ಸಾಧ್ಯವಾಗಬೇಕಾದರೆ ಸಾಮ್ಯವಾದಿಯು ಪರಮಾತ್ಮನಲ್ಲಿ ಆತ್ಯಂತಿಕ ಶ್ರದ್ಧೆಯುಳ್ಳವನಿರಲಿಕ್ಕೆ ಬೇಕು. ಕೇವಲ ಯಂತ್ರದಂತೆ ಸತ್ಯ ಮತ್ತು ಅಹಿಂಸೆಯಲ್ಲಿ ಶ್ರದ್ಧೆಯಿದ್ದುದಾದರೆ ಆಯತ್ತ ಪ್ರಸಂಗದಲ್ಲಿ ಅದು ನಿಷ್ಪ್ರಯೋಜಕವಾಗುವದು ಅಂತೆಯೆ ಸತ್ಯವೆಂದರೇ ಪರಮಾತ್ಮನೆಂದು ನಾನು ಹೇಳಿದ್ದು. ಈ ಪರಮಾತ್ಮ ಜೀವಂತಶಕ್ತಿಯಾಗಿದ್ದಾನೆ. ನಮ್ಮ ಜೀವನವೇ ಆ ಜೀವಂತ ಶಕ್ತಿಯಿಂದ ಮಾರ್ಪಟ್ಟಿದ್ದಿದೆ. ಆ ಶಕ್ತಿ ಒಳಗೆ ಇರುವದು ಆದರೆ ಅದು ಶರೀರವಲ್ಲ. ಆ ಪ್ರಚಂಡ ಶಕ್ತಿಯನ್ನು ಯಾವನು ಅಲ್ಲಗಳೆಯುವನೋ ಅವನು ತನ್ನ ಅಸ್ತಿತ್ವವನ್ನೇ ಅಲ್ಲಗಳೆದಂತೆ; ಆ ಅಕ್ಷಯ್ಯ ಶಕ್ತಿಯ ಉಪಯೋಗವೇ ಅವನಿಗಾಗದಂತಾಗಿ ಅವನು ನಿಃಸತ್ವನಾಗಿ ಪರಿಣಮಿಸುವನು. ಚುಕ್ಕಾಣಿಯಿಲ್ಲದ ಹಡಗದಂತೆ ಅವನ ಪರಿಸ್ಥಿತಿಯಾಗುವದು, ಅತ್ತಿತ್ತ ಹೊಯ್ದಾಡಿ ಮುಂದೆ ಸ್ವಲ್ಪೂ ಚಲಿಸದೆ ನಾಶ ಹೊಂದುವನು. ಇಂಥ ಸಾಮ್ಯವಾದದಿಂದ ಅವರು ಯಾವ ಗತಿಯನ್ನೂ ಮುಟ್ಟಲಾರರು, ಅವರೇ ಗತಿಗಾಣದವರಾದ ಬಳಿಕ ಅವರಿರುವ ಸಮಾಜದ ಗತಿ[illegible] ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಪರಿಸ್ಥಿ[illegible]ರೆ, ಯಾವ ಸಾಮ್ಯವಾದಿಯೂ ಪರಮಾತ್ಮ[illegible]ಶ್ವಾಸ ತಾಳುವದಿಲ್ಲೆಂದು ಇದರ ಅ[illegible] ಅಂಥವರಾರಾದರೂ ಇದ್ದರೆ ಅವರು ಕಾಣುವಂತಹ ಪ್ರಗತಿಯನ್ನು ಏಕೆ ಹೊಂದಿಲ್ಲ? ಈ ಮೊದಲು ಅನೇಕ ದೇವಾಂಶ ಮಾನವರು ಬಾಳಿದ್ದುಂಟು; ಸಾಮ್ಯವಾದೀ ರಾಷ್ಟ್ರವನ್ನು ಕಟ್ಟುವಲ್ಲಿ ಅವರೇಕೆ ಸಮರ್ಥರಾಗಲಿಲ್ಲ. ?

ಇವೆರಡೂ ಪ್ರಶ್ನೆಗಳಿಗೆ ಸಮಾಧಾನಕಾರಕ ಉತ್ತರ ಕೊಡುವುದು ಕಠಿನವಾಗಿದೆ. ಆದರೂ ಪರಮಾತ್ಮನಲ್ಲಿ ಶ್ರದ್ಧೆಯಿದ್ದ ಸಾಮ್ಯವಾದಿಗೆ ತನ್ನ ಸಾಮ್ಯವಾದ ಮತ್ತು ಪರಮಾತ್ಮನಲ್ಲಿಯ ವಿಶ್ವಾಸ ಇವೆರಡರಲ್ಲಿ ಸಂಬಂಧವಿದೆಂದು ಹೊಳೆದಿರಲಿಕ್ಕಿಲ್ಲೆಂದು ಇದಕ್ಕೆ ಸಮಾಧಾನ ಹೇಳಬಹುದಾಗಿದೆ. ದೇವಾಂಶ ಸಂಭೂತ ಮಾನವರು ಜನಸಾಮಾನ್ಯಕ್ಕೆಲ್ಲ ಸಾಮ್ಯವಾದವನ್ನು ಎಂದೂ ಬೋಧಿಸಲಿಲ್ಲೆಂದೂ ಈ ಸಂಬಂಧದಲ್ಲಿ ಸುಲಭವಾಗಿ ಹೇಳಬಹುದಾಗಿದೆ.

ದೇವಾಂಶ ಸಂಭೂತ ಸ್ತ್ರೀಪುರುಷರು ಜಗತ್ತಿನಲ್ಲಿ ಬಾಳಿದ್ದರೂ ಅಂಧಶ್ರದ್ಧೆ ತಾಂಡವನೃತ್ಯ ಮಾಡಿದೆ. ಹಿಂದೂ ಧರ್ಮದಲ್ಲಿಯ ಅಸ್ಪೃಶ್ಯತೆ ಇತ್ತೀಚಿನ ವರೆಗೆ ನಿಃಸಂದೇಹವಾಗಿ ತಲೆಯೆತ್ತಿದ್ದಿತು.

ಆ ಪ್ರಚಂಡಶಕ್ತಿ ಮತ್ತು ಅದರ ಸುಪ್ತ ಪರಿಣಾಮಗಳನ್ನು ತಿಳಿದುಕೊಳ್ಳುವದಕ್ಕಾಗಿ ಯಾವಾಗಲೂ ಸಂಶೋಧನ ನಡೆಸಬೇಕಾಗುವದೆಂಬುದು ಸ್ಪಷ್ಟವಿದೆ.

ಆ ಸಂಶೋಧನೆಯಲ್ಲಿಯೆ ಸತ್ಯಾಗ್ರಹದ ಪ್ರಾದುರ್ಭಾವವೆಂದು ನಾನು ಹೇಳಬಯಸುತ್ತೇನೆ. ಆದರೂ ಸತ್ಯಾಗ್ರಹದ ಎಲ್ಲ ನಿಯಮನಿಬಂಧನೆಗಳು ಹೇಳಲ್ಪಟ್ಟಿವೆ ಇಲ್ಲವೆ ಗೊತ್ತಾಗಿವೆಂದು ನಾನು ಹೇಳಲಾರೆ. ಸತ್ಯಾಗ್ರಹದಿಂದ ಪ್ರತಿಯೊಂದು ಉಚಿತ ಧ್ಯೇಯವನ್ನು ಸಾಧಿಸಬಲ್ಲೆವೆಂದು ನಿರ್ಭೀತಿಯಿಂದ ಮತ್ತು ದೃಢವಾಗಿ ನಾನು ಹೇಳಬಲ್ಲೆ. ಅದು ಅತಿ ಶ್ರೇಷ್ಠ ಮತ್ತು ಅಯಶಸ್ವಿಯಾಗದ ಸಾಧನವು. ಅತ್ಯಂತ ಶ್ರೇಷ್ಠ ಶಕ್ತಿಯು. ಬೇರೆ ಯಾವ ಸಾಧನಗಳಿಂದಲೂ ಸಾಮ್ಯವಾದವು ಸಾಧ್ಯವಾಗದು. ಸಮಾಜದಲ್ಲಿಯ ಎಲ್ಲ ಬಗೆಯ ರಾಜಕೀಯ ಆರ್ಥಿಕ, ನೈತಿಕ ಅನಿಷ್ಟಗಳನ್ನು ಸತ್ಯಾಗ್ರಹವೇ ಹೊಡೆದು ಹಾಕಬಲ್ಲುದು.

ಹೊಸದಿಲ್ಲಿ ಮೋ. ಕ. ಗಾಂಧಿ

೧೪-೭-೪೭

(ಗುಜರಾಥಿಯಿಂದ)

ಸೈನ್ಯಗಳೇಕೆ?

ಶಿಕ್ಷಣ ಪ್ರೇಮಿಯೂ ಯುದ್ಧವನ್ನು ಮನಸಾ ತೆಗಳುವವನೂ ಆದ ಇಂಗ್ಲಿಶ್ ಗೆಳೆಯನೊಬ್ಬ ಮೊನ್ನೆ ದಿನ ನನಗೆ ಹೀಗೆ ಹೇಳಿದ. "ದೇಶವಿಭಜನೆಗಾಗಿ ನನಗೆ ಅತೀವ ದುಃಖ. ಆದರೆ ಅದು ಅನಿವಾರ್ಯವಾಗಿತ್ತೆಂದು ನನಗೆನಿಸುತ್ತದೆ. ಆದರೂ ಯಾವದೊಂದು ದೇಶಕ್ಕೆ ಸೈನ್ಯಗಳ ಅವಶ್ಯಕತೆಯೇಕೆನಿಸುವುದೊ ನನಗೆ ತಿಳಿಯದಾಗಿದೆ? ಮಾನವೀಯ ಹಕ್ಕುಬಾಧ್ಯತೆ ಮತ್ತು ಜಾಗತಿಕ ಶಾಂತಿಯ ಬಗ್ಗೆ ನಾವು ಎಷ್ಟೆಷ್ಟೋ ಜಂಭದ ಮಾತು ಆಡುತ್ತೇವೆ. ಆದರೆ ದೇಶದಲ್ಲಿ ಭೂ-ಜಲ ವಾಯು ಯಾವದೇ ಬಗೆಯ ಸೈನ್ಯವಿರುವವರೆಗೆ ಶಾಂತಿ ಅದೆಂತು ಶಕ್ಯವಿದೆ? ಶಾಂತಿ ಸುವ್ಯವಸ್ಥೆಯನ್ನಿಡುವುದಕ್ಕೆ ಸಾಕಷ್ಟು ಪೋಲೀಸ ಪಡೆಯಷ್ಟೇ ಏಕೆ ಸಾಲದು? ಮತ್ತು ಎಲ್ಲ ಸೈನ್ಯಪಡೆಗಳನ್ನು ವಿಸರ್ಜಿಸುವದಿಲ್ಲೇಕೆ? ಪ್ರಾರಂಭ ಕಾಲದಲ್ಲಿ ಅಂತರ್‌ರಾಷ್ಟ್ರೀಯ ಪೋಲೀಸಪಡೆ ಅವಶ್ಯವೆನಿಸಬಹುದು. ನಿಮ್ಮ ಧುರೀಣರ ನೇತೃತ್ವದಲ್ಲಿ ಹಿಂದುಸ್ತಾನ ಇಡೀ ಜಗತ್ತಿಗೇ ಈ ಸಂಬಂಧದಲ್ಲಿ ಮಾರ್ಗದರ್ಶನ ಮಾಡಿಕೊಡಬಲ್ಲದೆಂದು ನಾನು ಆಶಿಸಿದ್ದೆ. ಆದರೆ ಜಾತೀಯ ಹೊಡೆದಾಟಗಳು–ಸದ್ಯದ ಮಟ್ಟಿಗೆ ಮಾತ್ರ ಅವುಗಳ ತಾಂಡವವೆಂದು ಆಸಿಸುವೆ–. ಹಿಂದುಸ್ತಾನದ ಈ ಧ್ಯೇಯವನ್ನು ಹಿಮ್ಮೆಟ್ಟಿಬಿಟ್ಟವೆಂದು ನಾನು ವಿಷಾದಿಸಬೇಕಾಗಿದೆ. ಸೈನ್ಯಪಡೆಗಳಿಗಾಗಿಯೇ ನೀವು ಅಪರಿಮಿತ ಹಣವನ್ನು ವೆಚ್ಚಮಾಡುವದಾದರೆ ಶಿಕ್ಷಣಕ್ಕೆ ಹಣವೆಲ್ಲಿಂದ ಸಿಕ್ಕಬಲ್ಲುದು? ಹಳೆಯ ಅಳದಕ್ಕೀ ರಾಗವನ್ನೇ ಮತ್ತೆ ತೆಗೆಯಬೇಕಾಗುವುದು; ಮುಖ್ಯ ಅವಶ್ಯಕತೆಗಳಿಗೆ ಹಣವೇ ಉಳಿಯುವದಿಲ್ಲ"

ಸೈನ್ಯದ ವಿಭಜನೆಯಿಂದ ಗಾಂಧೀಜಿಗೆ ಅತ್ಯಂತ ವ್ಯಸನವಾಗಿದೆ, ದೇಶವಿಭಜನೆಯ ತರುವಾಯ ಕದಾಚಿತ ಈ ಸೈನ್ಯ ವಿಭಜನೆಯೆ ಗಾಂಧೀಜಿಯವರ ದುಃಖಕ್ಕೆ ಹೆಚ್ಚು ಕಾರಣವೆಂದು ಹೇಳಬಹುದು. ಹಿಂದೂ ಮುಸಲ್ಮಾನ ಸೈನ್ಯಗಳು ಒಬ್ಬರನ್ನೊಬ್ಬರು ಕೊಲ್ಲುವ ಮತ್ತು ಸಂಪೂರ್ಣವಾಗಿನಾಶಗೊಳಿಸುವ ಇಚ್ಛೆಯಿಂದ ಪರಸ್ಪರರನ್ನೆದುರಿಸುವ ಈ ಭಯಾನಕ ಚಿತ್ರವನ್ನು ಗಾಂಧೀಜಿ ತಮ್ಮ ಪ್ರಾರ್ಥನಾ ಸಭೆಯಲ್ಲಿ ರೇಖಿಸಿ ತೋರಿಸಿದರು. ಈಗ ಒಂದೇಸವನೆ ನಡೆದ ಹತ್ಯಾಕಾಂಡವು ಕೊಲೆ, ಸುಲಿಗೆ, ಕೊಳ್ಳಿ ಮತ್ತು ಅಪಹರಣ ಮೊದಲಾದವುಗಳಿಂದ ಮಾನವನ ಮನಸ್ಸನ್ನು ಪರಾವೃತ್ತಗೊಳಿಸಲು ಸಾಕಾಗಲಿಲ್ಲೋ ಎನ್ನುವಂತೆ ಹಿಂದು ಮುಸಲ್ಮಾನ ಸೈನ್ಯ ಪರಸ್ಪರರನ್ನೆದುರಿಸುವ ಸಂಭವವನ್ನು ಗಾಂಧೀಜಿ ಹೇಳಿದರು. ಈ ಇಂಗ್ಲಿಶ್ ಗೆಳೆಯನ ಭೀತಿ ನ್ಯಾಯ್ಯವಾಗಿದೆ. ಹಿಂದುಸ್ತಾನದಂಥ ಬಡ ರಾಷ್ಟ್ರಕ್ಕೆ ಬಲಿಷ್ಠ ಸೈನ್ಯಪಡೆಯನ್ನಿಡಬೇಕಾದ ಪ್ರಸಂಗ ಬಂದುದಾದರೆ ರಾಷ್ಟ್ರರಚನೆಯ ಕಾರ್ಯಕ್ಕೆ ಸಾಕಷ್ಟು ಹಣವುಳಿಯಲಾರದು ಮತ್ತು ಮೊದಲಿಗಿಂತ ಹಿಂದುಗಡೆಯ ಸ್ಥಿತಿ ಮತ್ತಷ್ಟು ಕೆಟ್ಟಾಗುವದು.

ಯುರೋಪಿನ ಅತ್ಯಾಚಾರವನ್ನೆದುರಿಸಲು ಅತ್ಯಾಚಾರದಹೊರತು ಬೇರೆ ಯಾವ ಮಾರ್ಗವಿದೆಂದುಗಾಂಧೀಜಿಯನ್ನು ಕಾಣಲು ಬಂದ ಇಬ್ಬರು ಇಂಡೊನೇಶಿಯನ್ ಗೆಳೆಯರು ಕೇಳಿದರು. ಯುರೋಪಿಗೆ ಯಾವಾಗಲೂ ಬಲದಲ್ಲಿಯೆ ವಿಶ್ವಾಸ. ಯಾವುದೊಂದು ದೇಶವು ಬಲಪ್ರಯೋಗದ ಹೊರತು ಬೇರೆ ಮಾರ್ಗದಿಂದ ಅದೆಂತು ಎರಡನೆ ದೇಶವನ್ನು ಎದುರಿಸುವದೆಂಬದು ಇಂಡೋನೇಶಿಯನ್ ಗೆಳೆಯರಿಗೆ ಹೊಳೆಯಲಿಲ್ಲ.

ಈ ಬಗೆಯ ಪ್ರಶ್ನೆಗೆ ಅಹಿಂಸೆಯ ಬಗ್ಗೆ ಅತೀವ ಅಜ್ಞಾನವೆ ಕಾರಣವೆಂದು ಗಾಂಧೀಜಿ ಸ್ವಲ್ಪ ರೊಚ್ಚಿನಿಂದ ಉತ್ತರಿಸಿದರು. "ನಾನೊಂದು ಪ್ರತಿಪ್ರಶ್ನೆಯನ್ನು ಹಾಕಬಯಸುವೆ" ಎಂದೆಂದರವರು. "ಬ್ರಿಟನ್, ಅಮೇರಿಕೆ ಮತ್ತು ರಶಿಯದ ಏಕೀಕೃತ ಶಸ್ತ್ರಾಸ್ತ್ರ ಬಲವು ನಿಮ್ಮನ್ನು ದಾಸ್ಯದಲ್ಲಿಡಲು ಬಯಸಿದೆಂದು ಭಾವಿಸಿದರೆ, ಅದನ್ನೆದುರಿಸಲು ಎಷ್ಟು ಹತ್ಯಾಕಾಂಡವನ್ನು ನಡೆಸಬೇಕಾಗುವುದು?"

'ಹಿಂಸೆಯಿಂದ ನೀವು ಅದನ್ನೆದುರಿಸಲಾರಿರೆಂದು ನನಗೆನಿಸುವದು. ಒಂದು ವೇಳೆ ಇಡೀ ಏಶಿಯದ ಬೆಂಬಲ ನಿಮಗೆ ದೊರೆತದ್ದಾದರೆ ಹಿಂಸೆಯಿಂದ ನೀವು ಅವರನ್ನೆದುರಿಸಬಹುದು ಆದರೆ ಆಗ ಕೂಡ ಯುರೋಪಿನ ಯುದ್ಧಾಸ್ತ್ರಗಳು ಹೆಚ್ಚು ಪರಿಣಾಮಕಾರಿಯಾಗಿದ್ದರೆ ನೀವು ಅದರಲ್ಲಿ ಪರಾಜಯ ಹೊಂದದಿರಲಾರಿರಿ. ಆದರೆ ನೀವು ಅಹಿಂಸೆಯಿಂದಲೆ ಅವರನ್ನೆದುರಿಸಬಲ್ಲಿರಿ. ನೀವೆಲ್ಲ ನಾಶಹೊಂದಬಹುದು. ಆದರೆ, ಯಾರೂ ನಿಮ್ಮನ್ನು ಗೆದೆಯಲಾರರು.' ಗಾಂಧೀಜಿ ಮುಂದುವರಿಯುತ್ತ, 'ಹಿಂದುಸ್ತಾನದ ಸ್ವಾತಂತ್ರ್ಯ ಸಂಗ್ರಾಮವು ಕೇವಲ ಅಶಕ್ತರ ಶಸ್ತ್ರವಾದ ನಿಷ್ಕ್ರಿಯ ಪ್ರತೀಕಾರವಾಗಿ ಶಸ್ತ್ರಾಸ್ತ್ರ ಪ್ರತೀಕಾರದ ಪೂರ್ವಪೀಠಿಕೆ ಇದೆಂದು ಇತ್ತೀಚೆ ಒಂದಲ್ಲ ಹಲವು ಸಲ ತಾವು ಪ್ರತಿಪಾದಿಸುತ್ತ ಬಂದಿರುವುದಾಗಿ ಹೇಳಿದರು. ಕಾಂಗ್ರೆಸ್ಸು ನಿಜವಾಗಿ ಅಹಿಂಸೆಯನ್ನು ಆಶ್ರಯಿಸಿದ್ದರೆ ಸದ್ಯದ ಜಾತೀಯ ಜಗಳಗಳು ಏಳುತಿರಲೇ ಇಲ್ಲ. ಶರೀರಬಲಕ್ಕಿಂತ ಮಾನಸಿಕಬಲ ಯಾವಾಗಲೂ ಹೆಚ್ಚು ಶ್ರೇಷ್ಠವಾಗಿದೆ. ಅಹಿಂಸಾತ್ಮಕ ಇಂಡೋನೇಶಿಯ ಇಡೀ ಪೂರ್ವ ರಾಷ್ಟ್ರಗಳಿಗೇ ಮಾರ್ಗದರ್ಶನ ಮಾಡಬಲ್ಲದು, ಹಿಂದುಸ್ತಾನ ಯಾವ ಸ್ಥಾನವನ್ನು ಸಂಪಾದಿಸಬೇಕೆಂದು ಗಾಂಧೀಜಿ ಬಯಸಿದ್ದರೋ ಅದನ್ನೇ ಇಂಡೋನೇಶಿಯ ಪಡೆಯಬಲ್ಲದು. ಆದರಿಂದು ಹಿಂದುಸ್ತಾನದಲ್ಲಿ ರಕ್ತದ ಕಾಲುವೆ ಹರಿಯುತಿದೆ; ಇದನ್ನು ಅಹಿಂಸೆಯಿಂದ ಎಂತು ಎದುರಿಸಬೇಕೆಂಬುದನ್ನು ಹಿಂದೀಯರು ಕಲಿತಿರುವುದಿಲ್ಲ; ಇದೇ ಅವರಿಗೆ ಮುಳುವು 'ನಾವು ಈ ಶಕ್ತಿಯನ್ನು ಸಂಪಾದಿಸದಿದ್ದರೆ, ಈ ಅನೇಕ ವರ್ಷಗಳಿಂದ ಹಿಂದುಸ್ತಾನದ ಬಗ್ಗೆ ನಾನು ಮನಸ್ಸಿನಲ್ಲಿ ಕಟ್ಟಿಕೊಂಡಿದ್ದ ಉಚ್ಚ ಆಸೆ ಕಾಂಕ್ಷೆಗಳು ಈಡೇರಲಾರವು" ಎಂದು ಗಾಂಧೀಜಿ ಮಾತು ಮುಗಿಸಿದರು.

ಹೊಸದಿಲ್ಲಿ ಅಮೃತ ಕೌರ

೧೦-೭-೪೭

ಉಷಃಕಾಲದ ಮುನ್ನ ಕಾರ್ಗತ್ತಲೆ

ಮತ್ತೊಬ್ಬ ಯುರೋಪಿಯನ್ ಮಿತ್ರ ಹಿಂದುಗಡೆ ಬಂದ. ಗಾಂಧೀಜಿ ಹಿಂದೆ ಹಿಂದು ಮುಸಲ್ಮಾನ ಐಕ್ಯದ ಸಲುವಾಗಿ ದಿಲ್ಲಿಯಲ್ಲಿ ೨೧ ದಿನ ಉಪವಾಸ ಮಾಡಿದ ಕಾಲಕ್ಕೆ ಅವನು ಮೊದಲು ಹಿಂದುಸ್ತಾನಕ್ಕೆ ಬಂದದ್ದು. "ಈ ವರೆಗೆ ಉಪವಾಸ ಫಲಕಾರಿಯಾಗಿಲ್ಲೆಂದು ತೋರುತ್ತದೆ" ಅವನುಸುರಿದ. "ಆದರೆ ಪರಿಣಾಮವೇನಾದರೂ ಆಗಲಿಕ್ಕೆ ಬೇಕು. ಪರಸ್ಪರರಲ್ಲಿ ತಿಳುವಳಿಕೆ ಮತ್ತು ಗೆಳೆತನವೆ ನಿಜವಾಗಿ ಅವಶ್ಯವಾದುದೆಂಬ ಮೂಲ ಮಾತನ್ನೇ ಇಂದು ಜನ ಮರೆತು ಬಿಟ್ಟಂತೆ ತೋರುವದು. ಪ್ರತಿಯೊಬ್ಬರು ಗಡಿಗಳ ಮೇಲೆಯೆ ತಮ್ಮ ಲಕ್ಷ್ಯವನ್ನೆಲ್ಲ ಹಾಕಿರುವರೆಂದು ಕಾಣುತ್ತದೆ. ಆದರೆ ಅದೇನೂ ಪ್ರಯೋಜನಕಾರಿಯಲ್ಲ."

ಗಾಂಧೀಜಿ ಒಪ್ಪಿದರು. ಸಾಧ್ಯವಿದ್ದುದನ್ನೆಲ್ಲ ತಾವು ಮಾಡುತಿದ್ದರೂ ನಿಃಸತ್ವ ಗುಂಡಿನಂತಾಗಿದೆ ತಮ್ಮ ಪರಿಸ್ಥಿತಿಯೆಂದರು. ಇದಕ್ಕೆ ಆ ಸಂದರ್ಶಕ ಒಪ್ಪಲಿಲ್ಲ. ನಿಮ್ಮಲ್ಲಿ ಪ್ರಚಂಡ ಶಕ್ತಿಯಿದೆ. ನೀವಿನ್ನೂ ಮಧ್ಯಬಿಂದು ಆಗಿರುವಿರಿ. ಏನು ಮಾಡಬೇಕೆಂಬದನ್ನು ನಮಗೆ ಹೇಳಿರಿ" ಎಂದು ನುಡಿದನವನು.

'ಪ್ರಾರ್ಥಿಸಿರಿ' ಎಂಬ ಸರಳ ಮತ್ತು ಸೂತ್ರರೂಪೀ ಉತ್ತರವನ್ನು ಗಾಂಧೀಜಿ ಕೊಟ್ಟರು.

ಜನತೆಯ ಮನಸ್ಸಿನಲ್ಲಿ ಪ್ರತೀಕಾರದ ಭಾವನೆ ಬಲಿಯುತಿದೆ" ಎಂದು ನುಡಿದ. "ಅದು ವಿಷಾದಕರ"

"ಈ ಭಾವನೆ ಹಾಗೆಯೇ ಉಳಿಯುವದೆಂದು ನಾನು ಭಾವಿಸುವದಿಲ್ಲ" ಗಾಂಧೀಜಿ ಉತ್ತರಿಸಿದರು. "ಅದು ಉಳಿದದ್ದಾದರೆ ಸ್ವಾತಂತ್ರ್ಯಕ್ಕೇ ಶರಣು ಹೊಡೆಯಬೇಕಾಗುವದು. ಹಿಂದುಸ್ತಾನ ಆತ್ಮಹತ್ಯೆ ಮಾಡಿಕೊಳ್ಳುವದು."

"ಪಾಕಿಸ್ತಾನಕ್ಕೆ ಕೊಡಲ್ಪಟ್ಟ ಪ್ರದೇಶವನ್ನು ಮರಳಿ ಪಡೆಯತಕ್ಕದ್ದೆಂದು ಅನೇಕ ಹಿಂದುಗಳು ಭಾವಿಸುವರು. ಅದರಿಂದ ಮುಸಲ್ಮಾನರಿಗೆ ತಲೆತಿರುಗುತ್ತದೆ" ಎಂದ ಆ ಸಂದರ್ಶಕ.

"ವೈಯಕ್ತಿಕವಾಗಿ ಹೇಳಬೇಕಾದರೆ ಪಾಕಿಸ್ತಾನ ಶಾಶ್ವತವಾಗಿ ಉಳಿಯಲು ಅಸ್ತಿತ್ವಕ್ಕೆ ಬಂದಿದೆಂದು ನನಗೆನಿಸುತ್ತಿದೆ" ಗಾಂಧೀಜಿ ನುಡಿದರು.

"ಆ ತಳಹದಿಯಮೇಲೆಯೇ ಮಿತ್ರತ್ವ ಶಕ್ಯವಿದೆ" ಎಂದು ನುಡಿದ ಆ ಸಂದರ್ಶಕ. "ಪಾಕಿಸ್ತಾನ ಸ್ಥಾಪನೆಯಾಗಿದೆ" ಗಾಂಧೀಜಿ ಎಂದರು "ಆದರೆ ಗೆಳೆತನವನ್ನು ಹೇಗೆ ಸಾಧಿಸಬೇಕೆಂಬುದು ನನಗೆ ತಿಳಿಯದಾಗಿದೆ"

"ಪರಿಸ್ಥಿತಿ ಸುಧಾರಿಸುವ ಮೊದಲು ಅದು ಬಹಳ ಕೆಡುವದುಂಟು" ಎಂದ ಆ ಸಂದರ್ಶಕ. "ಉಷಃಕಾಲದ ಮುನ್ನದ ಕಾರ್ಗತ್ತಲೆಯಿದು."

ಹೊಸದಿಲ್ಲಿ ಸುಶೀಲಾ ನಯ್ಯರ

೧೦-೭-೪೭

ಶಾಂತಿ ಮತ್ತು ಸೊತ್ತು

ಯಾರ್ಕಿನ ಆರ್ಚಬಿಶಪ ಇತ್ತೀಚೆಗೆ ಮಾಡಿದ ಭಾಷಣದಲ್ಲಿ, "ಜಗತ್ತಿನ ಶಾಂತಿ ಉಳಿಯಬೇಕಾದರೆ ಬ್ರಿಟನ್ನು ಸಶಸ್ತ್ರವಾಗಬೇಕು" ಎಂದೂ ಅದರ ಸಮರ್ಥನೆಗಾಗಿ, "ಬಹಳ ಸೊತ್ತುಗಳಿರುವ ನಿಶ್ಶಸ್ತ್ರ ರಾಷ್ಟ್ರವು ಆಕ್ರಾಮಕ ರಾಷ್ಟ್ರಗಳಿಗೆ ಪ್ರೋತ್ಸಾಹಕವಾಗುತ್ತದೆ" ಎಂದೂ ಪ್ರಧಾನ ಪಾದ್ರಿಯವರು ಅಪ್ಪಣೆ ಕೊಡಿಸಿದರು.

ಶಾಂತೀಶ್ವರನಾದ ಯೇಸುವು— "ಜೀವನವೆಂದರೆ ಬಹಳ ವಸ್ತುಗಳ ಒಡೆಯತನವಲ್ಲ; ನಮ್ಮನ್ನು ನಿರ್ಲಕ್ಷ್ಯವಾಗಿ ಬಳಸಿಕೊಂಡವರಿಗೂ ನಾವು ಒಳ್ಳೆಯದನ್ನು ಮಾಡಬೇಕು, ಇಡಿಯ ಜಗತ್ತೇ ನಮಗೆ ಸಿಗುವಂತಿದ್ದರೂ ಆತ್ಮವನ್ನು ಕಳೆದುಕೊಳ್ಳಬಾರದು (ಮರೆಯಬಾರದು)" ಎಂದು ನಮಗೆ ಉಪದೇಶಿಸಿದನು. ಮತ್ತು ಜಗತ್ತಿನ ಪ್ರಭುತ್ವದ ಪ್ರಲೋಭನವನ್ನು ಸೈತಾನನು ಅವನಿದಿರೊಡ್ಡಿದಾಗ ಕೋಪ ತಿರಸ್ಕಾರಗಳಿಂದ ಅವನು, "ನನ್ನ ಹಿಂದೆ ನಡೆ, ಸೈತಾನ್, ನಿನ್ನ ಒಡೆಯನಾದ ದೇವರನ್ನು ನೀನು ಪೂಜಿಸು ಮತ್ತು ಕೇವಲ ಅವನನ್ನೇ ನೀನು ಸೇವಿಸು" ಎಂದು ಸೈತಾನನ್ನೊದಿಸಿದನು.

ಮೇಲೆ ಹೇಳಿದ ಪಾದ್ರಿಗಳು ಇದರ ವಿರುದ್ಧ ಉಪದೇಶಿಸತೊಡಗಿದ್ದಾರೆ! ಬ್ರಿಟನ್ನಿಗೆ ಬಹಳ ಸೊತ್ತಿದೆ, ರಾಷ್ಟ್ರಸಂಘದಲ್ಲಿ ಅದರ ವರ್ಚಸ್ಸಿರಬೇಕು. ತನ್ನ ದುರಾಶೆಯ ಪೂರೈಕೆಯ ಮಾರ್ಗದಲ್ಲಿ ಅಡ್ಡ ಬರುವವರನ್ನೆಲ್ಲ ನಾಶಮಾಡಲು ಅದಕ್ಕೆ ಸಶಸ್ತ್ರ ದಲಗಳು ಬೇಕು. ಇದು ಶಾಂತಿಯ ಮಾರ್ಗವೇ? ಎಳೆಯ ಶ್ರೀಮಂತ ಅರಸುವರನಿಗೆ ಆಸ್ತಿಯನ್ನು ಮಾರಿ ಬಡವರಿಗೆ ಹಂಚೆಂದು ಯೇಸುವು ಉಪದೇಶಿಸಿದನು. ಅಂಥವನು ಅನಗತ್ಯವಾದ ಐಶ್ವರ್ಯವನ್ನು ಕ್ಕಜಿಸಿ, ಅದನ್ನು ಕಳೆದುಕೊಂಡು ಊಟಕ್ಕಿಲ್ಲದೆ ನರಳುತ್ತಿರುವ ಕೋಟಿಗಟ್ಟಲೆ ಜನರಿಗೆ ತಿರುಗಿ ಕೊಡೆಂದು ಬ್ರಿಟನ್ನಿಗೆ ಉಪದೇಶಿಸಲಾರನೇ?

ಇದರೊಟ್ಟಿಗೆ ಬ್ರಿಟಿಶ ಸರಕಾರದ ಕೋಶಾಧಿಕಾರಿಯಾದ ಡಾ. ಹ್ಯೂಗ್ ಡಾಲ್ಟನ್ನನು ಬ್ರಿಟಿಶ ಸರಕಾರದ "ಸ್ಪಷ್ಟ ನಿರ್ಣಯ" ವೆಂದು ಪಾರ್ಲಿಮೆಂಟಿನೆದುರಿಟ್ಟು ಯುದ್ಧದ ಬಗ್ಗೆ ಬ್ರಿಟನ್ನು ಮಾಡಿದ ಸಾಲವನ್ನು ಈಜಿಪ್ತಿಗೆ ತಿರುಗಿ ಕೊಡಬೇಕಾದ ನೈತಿಕ ನ್ಯಾಯವನ್ನು ಬ್ರಿಟಿಶ ಸರಕಾರವು ಮನ್ನಿಸುವುದಿಲ್ಲವೆಂದು ಹೇಳಿದನು. ನೈತಿಕ ವಿಚಾರಗಳು ಅನುಕೂಲ ಸಿಂಧುಗಳೇ?

ಅನ್ಯಾಯ ಮತ್ತು ಬಲಪ್ರಯೋಗದಿಂದ ಜಗತ್ತಿನ ಶಾಂತಿಯನ್ನು ಸಾಧಿಸಲಾಗದು. ಕಳೆದ ಎರಡು ಮಹಾ ಯುದ್ಧಗಳಲ್ಲಿ ಮಾನವ ಕುಲ ಪಟ್ಟ ಪಾಡು ನಮ್ಮ ಮುಖಂಡರಿಗೆ ಈ ನಷ್ಟವನ್ನು ಸಾಕ್ಷಾತ್ಕರಿಸಿ ಕೊಡದಾಯಿತು. ಇಷ್ಟು ಕಟು ಅನುಭವವಿದ್ದರೂ ನಾವು ಎಂದೂ ಬುದ್ಧಿಗಲಿಯಲಾರೆವೇ?

— ಜೆ. ಸಿ. ಕುಮಾರಪ್ಪ

ಕೈಯಿಂದ ಮಾಡಿದ ಸಕ್ಕರೆ

ಸಕ್ಕರೆ ಮತ್ತು ಅದರಿಂದ ತಯಾರಾದ ವಸ್ತುಗಳನ್ನು ನಿಯಂತ್ರಿಸುವ ೧೯೪೬ ರ ಆಜ್ಞೆಯು ಸಂಯುಕ್ತಪ್ರಾಂತದಲ್ಲಿ ಖಂಡಸಾರಿ ಮತ್ತು ದೇಶೀ ಚೀನಿಯ ತಯಾರಿಕೆಗೆ ಅಘಾತವಾಗಿ ಪರಿಣಮಿಸಿದೆ. ಹಿಂದುಸ್ತಾನ ಸರಕಾರದ ಆಹಾರ ಶಾಖೆಯವರು ನಂ. ೨೦—೪೦—(೩೨)/೪೭ ನೆಯ ನೋಟೀಸು ಕಾರಖಾನೆಯಲ್ಲಿ ತಯಾರಾಗುವ ಸಕ್ಕರೆಗಲ್ಲದೆ ಬೇರೆಯದಕ್ಕೆ ಅನ್ವಯಿಸುವುದಿಲ್ಲವೆಂದೂ ತಾಳೆಯ ರಸದಿಂದ ತಯಾರಿಸುವ ಸಕ್ಕರೆಯ ಮೇಲೆ ಯಾವ ನಿರ್ಬಂಧವೂ ಇಲ್ಲವೆಂದೂ ತಿಳಿಸಿದ್ದಾರೆ. ಪ್ರಾಂತಿಕ ಸರಕಾರಗಳು ಕೂಡ ಹಾಗೇ ಮಾಡುವ್ರವೆಂದು ನಂಬುತ್ತೇವೆ.

— ಜೆ. ಸಿ. ಕುಮಾರಪ್ಪ

ಪಾರಾಗುವ ಮಾರ್ಗ

ಇನ್ನು ಹಿಂದೆ ಜರುಗಿರುವ ಸ್ವಾತಂತ್ರ್ಯದ [illegible] ನಮ್ಮ ಉಸ್ಸುಸಿರನ್ನು [illegible] ನಮ್ಮ ಹೇಳಿದೆ. ಈ ಹಿಂದೆ ನಾವು ಸ್ವಾತಂತ್ರ್ಯ [illegible] ಬೇರೆ [illegible] [illegible] ಬೇರೆ [illegible] ನಮ್ಮ [illegible] ಇವುಗಳನ್ನು [illegible] ಅಂಗೀಕರಿಸುವುದರಿಂದ [illegible] [illegible] ಒಂದೇ [illegible].

ಕಾಂಗ್ರೆಸ್ಸು ಲೀಗುಗಳು ಒಟ್ಟು ಸೇರಿ [illegible] ನಾಯಕರ ಮುಖ್ಯಸ್ಥಿತಿಯಲ್ಲಿ ಪರಸ್ಪರ ಒಪ್ಪಂದ [illegible] ಮಾಡಿಕೊಳ್ಳುವುದೇ ಅಸ್ತಿತ್ವದಿಂದ ಪಾರಾಗುವ ಮಾರ್ಗ. ಲೀಗು ಇದರಲ್ಲಿ ಮೊದಲ [illegible] [illegible] ನಮ್ಮ [illegible] ಹೇಳುವುದಿಲ್ಲ. [illegible] [illegible] ಅವರ ಜನರು [illegible] ಒಂದು [illegible] [illegible] ಬರುವ ಹರಿಗೆ [illegible] [illegible]. ಅಂಥ ಸಂಗತಿಯೇನಾದರೂ ನಡೆ [illegible] ಅವರ ಅದು ಎರಡು ಸಮುಸ್ಥಾನದ ವಿಭಾಗಗಳಾಗಿ ಭಾರತವನ್ನು ವಿಭಜಿಸುವ ಸ್ವಾತಂತ್ರ್ಯ [illegible] ಎಷ್ಟೋ ಕಾಲ [illegible] ನಾನು [illegible] ಹೇಳಬಲ್ಲೆ. [illegible] ನಡೆಯುತ್ತಿರುವ ಸಂಗತಿಗಳಿಂದ [illegible] ಹಿಂದು [illegible] [illegible]. ಪ್ರತಿದಿನವೂ [illegible] ಹಿಂದು ಮುಸ್ಲಿ [illegible] [illegible] ನಾನು [illegible] ಪ್ರಶ್ನೆ [illegible]. ಅವರ [illegible] ಸರಿ. ಬ್ರಿಟಿಶರ ಮಧ್ಯಸ್ಥಿಕೆಯು [illegible] ಈಗ ಲೀಗು [illegible] ಅಥವಾ [illegible] ಮಾಡಿಕೊಳ್ಳಲು ಬರುವ [illegible]?

[illegible] ಬರಲು ಇಷ್ಟೇ [illegible] ಉಪಾಯವಿದೆ. ಇಲ್ಲಿಯ ವರೆಗೆ— [illegible]—ಒಂದೇ [illegible] [illegible] [illegible] ಎರಡು [illegible] ಭಾರತವನ್ನು [illegible] [illegible]. [illegible] [illegible] ಅನ್ಯಾಯದ ವಿರುದ್ಧ ಹೋರಾಟ ನಡೆಸುವುದನ್ನು ಬಿಟ್ಟು ಜಗತ್ತು [illegible] ಪರಸ್ಪರ ಹೋರಾಡ [illegible] [illegible] [illegible] ಎರಡು [illegible] ನ್ಯಾಯವೆ?

[illegible] ಅವರ [illegible] [illegible] ಹಿಂದುಸ್ಥಾನದ [illegible]— ಅದನ್ನು [illegible] ಪ್ರತಿಯೊಬ್ಬನೂ ಅದನ್ನು [illegible]. ಬದಲು ಹೇಳಿದ [illegible] ನಿಸಂದೇಹವಾಗಿ [illegible]. ಅಸಂ [illegible] ಹಿಂದುಗಳೂ ಅವರೊಡನೆ ಸ್ವಾತಂತ್ರ್ಯ [illegible] ಸೇರಿದವರೂ [illegible] [illegible] ವಿಚಾರ ಮಾಡಿ ಈ ಸಂದರ್ಭ [illegible] [illegible] ಬರದು [illegible] ಸ್ವಸ್ಥವೇ ಬೇಡ [illegible] ತಮ್ಮ ಸ್ವಸ್ಥವನ್ನು ಹಿಂದು [illegible] ಎಲ್ಲಿಯೂ ಮುಸಲ್ಮಾನರ [illegible] ಉಪಯೋಗಿಸುವುದಿಲ್ಲವೆಂದಾಗಲಿ ಪ್ರತಿಜ್ಞೆ ತೆಗೆದುಕೊಳ್ಳುವರೇ?

ಈ ಕಲಹದ ಅರ್ಥವು ಹಿಂದು ಮತ್ತು [illegible] ವರ್ಷಗಳ [illegible] [illegible] ಮುಖ್ಯವಾಗಿ [illegible] [illegible] ವರೆಗೆ ಮುಟ್ಟುತ್ತದೆ. [illegible] [illegible] ಅವರ [illegible] ಸ್ಥಿತಿಯನ್ನು [illegible]. [illegible] ಇವರ [illegible] ಇಂದಿನ ವರೆಗೆ ನಡೆದು ಬಂದಿದೆ. ಪರಸ್ಪರ [illegible], [illegible] ಸ್ವಸ್ಥ [illegible] ಎಲ್ಲ ಪಕ್ಷಗಳ [illegible] ಈ ಪ್ರಯತ್ನವನ್ನು [illegible] ಯೋಗ್ಯವಾಗಿದೆ.

—(ಗಾಂಧಿಯವರ ಭಾಷಣಗಳಿಂದ ಸಂಗ್ರಹಿಸಿ [illegible]— [illegible])

ನಾವು ಕಲಿಯೋಣ

ಬ್ರಿಟಿಶ ಕೋಶಾಧಿಕಾರಿ ಡಾಲ್ಟನ್ ರವರು [illegible] ಹಾಕಿದ [illegible] ಕೆಲವಿಷ ಗಳ ಹಿಂದೆ ಮಂಡಿಸುತ್ತ ಬ್ರಿಟನ್ನಿನ ಆಹಾರ [illegible] ಕೆಲವು ಕಷ್ಟ ಗಳನ್ನು [illegible] ನಿಯಂತ್ರಣದ [illegible] [illegible] ಆರ್ಥಿಕ [illegible] ಕಾಯ್ದು [illegible]. ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿಯು ನಮ್ಮದಕ್ಕಿಂತ ತೀರಾ ಭಿನ್ನವಿದೆ. ಜೀವನ ಪ್ರಧಾನವಾದ ಆಹಾರ ದ್ರವ್ಯ ಗಳು ಬ್ರಿಟನ್ನಿಗೆ ಹೊರಗಿಂದ ಬರುತ್ತವೆ; ಅವು ಗಳನ್ನು ಕೊಳ್ಳಲು ಕಾರಖಾನೆಗಳಲ್ಲಿ ತಯಾ ರಾದ ವಸ್ತುಗಳನ್ನು ಪರದೇಶಗಳಿಗೆ ಮಾರಾಟ ಮಾಡಲಾಗುತ್ತದೆ. ಅದು ಹೇಗೇ ಇರಲಿ, ಅವರ ಧೋರಣವನ್ನು ನಮ್ಮ ದೇಶಕ್ಕೂ ಅನ್ವಯಿಸಬಹು ದಾಗಿದೆ. ಡಾ. ಡಾಲ್ಟನ್ನನ ಧೋರಣದ ಉದ್ದೇ ಶವೆಂದರೆ ಜನರಿಗೆ ಸಾಕಷ್ಟು ಆಹಾರ ಪೂರೈಸು ವುದು ಮತ್ತು ಪ್ರತಿಯೊಬ್ಬನೂ ಸರಿಸಮಾನ ನೆಂದು ವಿತರಣ ಮಾಡುವುದು.

ಆರ್ಥಿಕ ಸಂಘಟನೆಗೆ ಒಂದು ನಿಶ್ಚಿತ ಧೋರ ಣವಿದ್ದರೆ ಭಾರತವೂ ತನಗೆ ಅಗತ್ಯವಾದ ವಸ್ತುಗಳನ್ನು ಪೂರೈಸಿಕೊಳ್ಳಬಹುದು. ಇದು ಈಗ ಸಾಧ್ಯವಾಗಿದೆಯೆಂದು ನಮ್ಮ ಸಂದೇಹ. ಆದುದರಿಂದ ಬ್ರಿಟನ್ನಿನ ದುಸ್ಥಿತಿಗಳು ಪರಿಸ್ಥಿತಿ ಯನ್ನು ಹೇಗೆ ಸುಧಾರಿಸುವರೆಂಬುದನ್ನು ನಾವು ಅಭ್ಯಸಿಸುವುದು ಒಳ್ಳೆಯದು.

ಡಾ. ಡಾಲ್ಟನ್ನನು —“ಬ್ರಿಟನ್ನಿನ ಉತ್ಪಾದಕ ಶಕ್ತಿಯನ್ನು ಕಾಯ್ದುಕೊ ಳ್ಳುವುದು, ನಮ್ಮ ಜನದ ಆರೋಗ್ಯ ಸಾಮರ್ಥ್ಯ ಗಳಿಗೆ ಅತ್ಯಗತ್ಯವಾಗಿದೆ ಕಾರಣ ಮತ್ತು ಅವರ ಉದ್ಯೋಗ ಹಾಗೂ ದೇಶದ ಸ್ಥಿತಿಯು ಸುಧಾ ರಣೆ ಇವುಗಳಿಗೆ ಅವಶ್ಯಕವಾದ ಆಯಾತ ದ್ರವ್ಯ ಗಳನ್ನು ಸುರಕ್ಷಿತವಾಗಿಡುವುದು, ಇವೇ ಈ ಧೋರಣದ ಮೂಲಭೂತ ತತ್ವ” ಎಂದು ಹೇಳಿ ದನು. ಇದನ್ನು ಮಾಡಲು ಯಾವ ವಸ್ತುವಿಗೆ ಪ್ರಥಮಸ್ಥಾನ ಕೊಡಬೇಕೆಂದು ನಿರ್ಣಯಿಸಲು ನಮಗೊಂದು ಬೆಲೆಯ ಮಾಪು ಬೇಕು. ಡಾ. ಡಾಲ್ಟನ್ನನು ಹೇಳಿದಂತೆ “ನಾವು ಹೆಚ್ಚು ಅಗತ್ಯವಲ್ಲದ ವಸ್ತುಗಳ ಆಯಾತವನ್ನು ಮಿತ ವಾಗಿಡಬೇಕು.” ಇದನ್ನು ಸಾಧಿಸಲು ಅವನು ಹೊಗೆಸೊಪ್ಪು, ಪೆಟ್ರೋಲು ಮತ್ತು ಮುದ್ರಾ ಪತ್ರಗಳ ಆಯಾತವನ್ನು ಕಡಿಮೆಮಾಡಬೇಕೆನ್ನು ತ್ತಾನೆ. ಬ್ರಿಟನ್ನಿನಲ್ಲಿ ಜನರು ಈ ಮೂರನ್ನು ಎಷ್ಟಕ್ಕಾದರೂ ಕೊಳ್ಳುವರೆಂಬುದು ನಮಗೆ ಗೊತ್ತು. ಬ್ರಿಟಿಶರ ಸೇದುವ ಚಟ, ಪೆಟ್ರೋಲಿ ನಿಂದ ನಡೆವ ವಾಹನಗಳ ಅವಲಂಬನ ಮತ್ತು ಸಾರ್ವಜನಿಕ ಕಾರ್ಯಗಳಲ್ಲಿಯ ಆಸಕ್ತಿ—ಇವು ಆ ಮೂರನ್ನು ಅವರ ಅವಶ್ಯಕ ವಸ್ತುಗಳ ನ್ನಾಗಿಯೇ ಮಾಡಿವೆ. ಅವರೂ ಅವರ ಅಧಿಕ ಗಾರರಿಗೆ ಆಹಾರ ಪರಿಸ್ಥಿತಿ ಭಯಗ್ರಸ್ತವಿರು ವಾಗ ಇವುಗಳಲ್ಲಿ ಕಡಿತ ಹಾಕುವ ಮುನ್ನೋಟ ಮತ್ತು ಧೈರ್ಯವಿದೆ. ಇಷ್ಟೇ ಅಲ್ಲ, ಆಹಾರದ ಆಯಾತಕ್ಕಾಗಿ ಬಟ್ಟೆಬರೆಗಳ ನಿರ್ಯಾತವನ್ನು ಕೂಡ ಡಾಲ್ಟನ್ನನು ಸೂಚಿಸಿರುವನು.

ಇದರ ಅರ್ಥ, ಉಪಯೋಗ ಮಾಡುವ ಜನ ತೆಯನ್ನಷ್ಟೇ ಅಲ್ಲ, ಡಾಲ್ಟನ್ನನು ಬಟ್ಟೆಯ ಕೈಗಾ ರಿಕೆಯಲ್ಲಿಯ ವಿಶಿಷ್ಟಹಿತಗಳನ್ನೂ ಎದುರಿಸಬಲ್ಲ ನೆಂಬುದೇ. ಈ ಪ್ರಯೋಗಗಳನ್ನು ಅವರು “ಪ್ರಥಮಾಲಿಪದ ಕಡಿತ” ಎನ್ನುತ್ತಾರೆ.

ಬ್ರಿಟನ್ನಿನಲ್ಲಿ ಮೇಲೆ ಹೇಳಿದ ವಸ್ತುಗಳಲ್ಲದೆ ಸಿನೆಮಾಗಳ ಮೇಲೂ ತೆರಿಗೆ ಹೇರುತ್ತಿದ್ದಾರೆ. ಬ್ರಿಟನ್ನಿನಂತಹ ದೇಶಗಳಲ್ಲಿ ಇವು ಕೂಡ ಅವ ಶ್ಯಕ ವಸ್ತುಗಳೇ ಆಗಿವೆ. ಆಹಾರ ನ್ಯೂನತೆಯ ಮೇಲಿನ ಈ ಪ್ರತಿಜ್ಞಾಬದ್ಧ ದಾಳಿಗೆ ಸರಿವಿರು ದ್ಧವಾಗಿ ಭಾರತದಲ್ಲಿ ಸರಕಾರವು ಹತ್ತಿಯ ನಿರ್ಯಾತಕ್ಕೆ ಅತಂಕ ಪಡಿಸುತ್ತಿಲ್ಲ. ಇದರರ್ಥ, ಆಹಾರಕ್ಕಿಂತ ಹತ್ತಿಯನ್ನೇ ಹೆಚ್ಚು ಬೆಳೆಯು ತ್ತೇವೆಂದಾಗುತ್ತದೆ. ಹಿಂದುಸ್ಥಾನವು ಒಕ್ಕಲಿ ತದ ದೇಶ. ಆಹಾರದ ಬೆಳೆಗೇ ಭೂಮಿಯನ್ನು ಮೊದಲು ಬಳಸಬೇಕು. ಆಹಾರದ ಕೊರತೆ ಯಿರುವಾಗ ದುಡ್ಡಿಗಾಗಿ ಇರುವ ಧಾನ್ಯಗಳ ಬೆಳೆಗೆ ಅವಕಾಶ ಕೊಡಕೂಡದು. ಗಿರಣಿಗಳಿ ಗಾಗಿ ಹತ್ತಿಬೆಳೆವ ಮತ್ತು ಹೊಗೆಸೊಪ್ಪಿಗಾಗಿ ಮೀಸಲಾದ ಭೂಮಿ ಬಹಳವಿದೆ. ನಾವು ಬ್ರಿಟ ನ್ನಿನ ಸದುದಾಹರಣವನ್ನನುಸರಿಸಿ ಪ್ರತಿಜ್ಞಾ ಬದ್ಧರಾಗಿ ವರ್ತಿಸೋಣವೆ?

ನಾವು ಆಹಾರ ದ್ರವ್ಯಗಳನ್ನು ಹೆಚ್ಚು ಬೆಳೆ ಯುವದಲ್ಲದೆ ಬೆಳೆದದ್ದನ್ನು ಸಂಗ್ರಹಿಸಿಡಬೇಕು. ನಾವು ಈ ಪತ್ರಿಕೆಯಲ್ಲೇ ಬಿಳಿಯ ಸಕ್ಕರೆಯ ಉತ್ಪಾದನದಿಂದ ನಮ್ಮ ಒಕ್ಕಲತನದ ಉತ್ಪತ್ತಿ ಗಳ ಆಹಾರ ಸತ್ವ ಕಡಿಮೆಯಾಗುವುದೆಂದು ಎಷ್ಟೋಸಲ ಹೇಳಿದ್ದೇವೆ. ಹಾಗೆಯೇ ಗಿರಣಿಗೆ ಕೊಟ್ಟು ಅಕ್ಕಿಯನ್ನು ಸ್ವಚ್ಛ ಪಡಿಸುವುದೂ ಭತ್ತದಲ್ಲಿಯ ಆಹಾರ ಸತ್ವವನ್ನು ಕಡಿಮೆಮಾಡ ತಕ್ಕದ್ದಾಗಿದೆ. ಆದುದರಿಂದ ನಮಗೆ ಇಂದಿನ ಪರಿಸ್ಥಿತಿಯನ್ನೆದುರಿಸುವ ಧೈರ್ಯವಿದ್ದರೆ ನಾವು ಅಕ್ಕಿಯ ಗಿರಣಿಗಳನ್ನು ಬಹಿಷ್ಕರಿಸಬೇಕು ಮತ್ತು ಸಕ್ಕರೆಯ ಉತ್ಪಾದನ ಕಡಿಮೆಮಾಡ ಬೇಕು.

ದುರದೃಷ್ಟವಶದಿಂದ ಜನರಿಗೆ ಅಗತ್ಯವಾದು ದರಲ್ಲಿ ನಮ್ಮ ಸರಕಾರಗಳು ಅಷ್ಟು ಕರ್ತವ್ಯ ತತ್ಪರಗಳಾಗಿಲ್ಲ. ಬಿಹಾರದ ಬೇರೆ ಬೇರೆ ಪ್ರದೇಶ ಗಳಲ್ಲಿ ೫ ಸಕ್ಕರೆ ಕಾರಖಾನೆಗಳನ್ನು ತೆರೆಯಲಿ ರುವರೆಂದೂ ಸರಕಾರವು ಕೆಲವೇ ವಾರಗಳಲ್ಲಿ ಅದಕ್ಕೆ ಅನುಮತಿಪತ್ರ ಕೊಡಲಿದೆಯೆಂದೂ ಸುದ್ದಿ ಬಂದಿದೆ. ಕೆಲವು ಸಕ್ಕರೆ ಕಾರಖಾನೆ ಗಳಿಗೆ ಸರಕಾರದ ಮೇಲೆ ದಾವೆ ಮಾಡಿ ಹಾನಿ ಯನ್ನು ತುಂಬಿಸಿಕೊಳ್ಳುವಷ್ಟು ಧೈರ್ಯವಿದೆ. ಸಕ್ಕರೆಯ ಬೆಲೆಯನ್ನು ನಿಯಂತ್ರಿಸಿದುದರಿಂದ ಅವಕ್ಕೆ ನಷ್ಟಸಂಭವಿಸಿತೆಂದು ಅವುಗಳ ವಾದ. ಬೆಲೆಯನ್ನು ನಿಯಂತ್ರಿಸುವುದು ಮುಂತಾದವುಗ ಳಲ್ಲಿ ಕೈಹಾಕುವದಕ್ಕಿಂತ ಸಕ್ಕರೆ ಮತ್ತು ಅಕ್ಕಿ ಯ ಗಿರಣಿಗಳನ್ನು ಆಹಾರ ನಾಶಕ—ಸಮಾಜ ವಿಘಾತಕ ಯೋಜನೆಗಳೆಂದು ಬಹಿಷ್ಕರಿಸಿ ತಪ್ಪು ಮಾಡುವ ಕೈಯನ್ನೇ ಕಡಿದುಹಾಕುವದು ಸರ ಕಾರಕ್ಕೆ ಸೂಕ್ತವಾದುದು.

ಜನತೆಯ ಬೆಂಬಲವಿರುವ ಮಂತ್ರಿಮಂಡಳ ಗಳುಳ್ಳ ಸ್ವರಾಜ್ಯ ಸರಕಾರದಲ್ಲಿ ಯಾವಾಗಲೂ ವಿಶಿಷ್ಟ ಹಿತಗಳ ವಿರುದ್ಧ ಕಾರ್ಯಕ್ರಮತೆಗೆದು ಕೊಳ್ಳಲು ಮಂತ್ರಿಗಳ ತೋಳಿಗೆ ಬಲದೊರೆಯು ದಿರದೆಂದು ನಾವು ಆಶಿಸುತ್ತೇವೆ.

—ಜೆ. ಸಿ. ಕುಮಾರಪ್ಪ

ನಮ್ಮ ನೌಕಾಧೋರಣ

ಸಾಮಾನುಗಳ ಸಾಗಿಗೆಯು ಒಂದು ದೇಶದ ಆರ್ಥಿಕ ಜೀವನದ ಮುಖ್ಯ ಅಂಗವಾಗಿದೆ. ಅದು ಹೊಲಕು ದಾರಿಯಲ್ಲಿ ಹೋಗುವ ಎತ್ತಿನ ಗಾಡಿಯ ರೂಪದಲ್ಲಿರಬಹುದು, ಅಸ್ಫಾಲ್ಟ ರಸ್ತೆ ಗಳ ಮೇಲೆ ತಿರುಗುವ ಮೋಟಾರು ಲಾರಿಯಾಗಿರ ಬಹುದು, ರೈಲುಗಾಡಿಯ ಸ್ವರೂಪದಲ್ಲಿರ ಬಹುದು, ನದಿ ಕಾಲುವೆಗಳಲ್ಲಿ ತೇಲುವ ದೋಣಿ ಯ ಇಲ್ಲವೆ ಸಾಗರಗಾಮಿಯಾದ ಹಡಗಿನ ಬಗೆ ಯಲ್ಲಿರಬಹುದು. ಇವು ಎಲ್ಲಿ ಮತ್ತು ಹೇಗೆ ನಡೆಯಬೇಕೆಂಬುದು ಪ್ರತಿಯೊಂದು ರಾಷ್ಟ್ರವೂ ನಿರ್ಣಯಿಸಬೇಕಾದ ಮಹತ್ವದ ಪ್ರಶ್ನೆ.

ಸ್ವಯಂಪೂರ್ಣತೆಯೆಂದರೆ ಅವೆಯು ತನ್ನ ಚಿಪ್ಪಿನೊಳಗೆ ಸರಿದುಕೊಳ್ಳುವಂತಿರುವುದೆಂದರ್ಥ ವಲ್ಲ. ಸ್ವಯಂ ಪೂರ್ಣತೆಯು ನಮ್ಮ ಎಲ್ಲ ಪ್ರಾಥಮಿಕ ಅವಶ್ಯಕತೆಗಳಿಗೂ ಅನ್ವಯಿಸು ತ್ತದೆ. ಅವುಗಳ ಪೂರೈಕೆಯಾದೊಡನೆ ಹೆಚ್ಚಾದ ದ್ದೆಲ್ಲ ವ್ಯಾಪಾರ ಪ್ರಪಂಚವನ್ನು ಪ್ರವೇಶಿಸುತ್ತದೆ. ಪ್ರಾಥಮಿಕ ಅವಶ್ಯಕತೆಗಳಲ್ಲದೆ ವೈಲಾಸಿಕ ಹಾಗೂ ಕಲಾತ್ಮಕ ವಸ್ತುಗಳೂ ಇವೆ. ಅವು ನಮ್ಮ ದೇಶದವರಿಗೂ ಪರದೇಶದವರಿಗೂ ಬೇಕಾಗುತ್ತವೆ. ಆದುದರಿಂದ ಸ್ವಯಂಪೂರ್ಣತೆ ಯು ಎಲ್ಲ ತರಹದ ವ್ಯಾಪಾರವನ್ನು ಪ್ರತಿಬಂಧಿ ಸುವುದಿಲ್ಲ. ಅದರ ಎಲ್ಲರಿಗೂ ಅವಶ್ಯವಾದ ವಸ್ತುಗಳೆಲ್ಲ ಎಲ್ಲರಿಗೂ ಸಿಕ್ಕುವೆಯೆಂದೂ ಅವರು ತಮ್ಮ ಅನ್ನ ಬಟ್ಟೆಗಳನ್ನು ವೈಲಾಸಿಕ ವಸ್ತುಗ ಳನ್ನು ವಿಕ್ರಯಿಸಲು ಪರದೇಶಗಳಿಗೆ ಮಾರುವ ದಿಲ್ಲವೆಂದೂ ಸ್ವಯಂಪೂರ್ಣತೆಯ ನಿಯಂತ್ರಣ ವಿದ್ದಲ್ಲಿ, ನಾವು ನಂಬಬಹುದು.

ಹಿಂದುಸ್ಥಾನವು ಮೊದಲಿನಿಂದಲೂ ಸಮುದ್ರ ಯಾನಕ್ಕೆ ಪ್ರಸಿದ್ಧವಾಗಿತ್ತು. ಅದರ ವ್ಯಾಪಾರ ವ್ಯವಹಾರಗಳು ಒಂದು ಕಡೆ ಮೆಕ್ಸಿಕೋ ದೇಶ ವನ್ನೂ ಮತ್ತೊಂದೆಡೆ ಯುರೋಪಿನ ಅತಿದೂರ ಪ್ರದೇಶಗಳನ್ನೂ ಮುಟ್ಟಿದ್ದವು; ಅದೂ ಬರಿ ದಿಟ್ಟ ಚಂತ್ರಿಯೆಂದರೇನೆಂಬುದು ತಿಳಿಯದ ಆ ಕಾಲದಲ್ಲಿ! ಪರದೇಶದೊಡನೆ ವ್ಯಾಪಾರ ನಾವಡುವುದನ್ನು ಚೆನ್ನಾಗಿ ಅರ್ಥಮಾಡಿಕೊಂಡರೆ ಅದು ಒಂದು ರಾಷ್ಟ್ರಕ್ಕೆ ತನ್ನ ಸಂಸ್ಕೃತಿಯನ್ನು ಇತರದೇಶಗಳಲ್ಲಿ ಹರಡಲೂ ಪರರಾಷ್ಟ್ರಗಳ ಸಂಬಂಧದಿಂದ ಅದನ್ನು ಸುಧಾರಿಸಿಕೊಳ್ಳ ಲಿಕ್ಕೂ ಅವಕಾಶ ದೊರೆಯುತ್ತದೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ನೌಕಾಯಾನ ವನ್ನು ನಮ್ಮ ರಾಷ್ಟ್ರಜೀವನದ ಮುಖ್ಯಾಂಗ ವೆಂದು ಎಣಿಸತಕ್ಕದ್ದು. ಇಂದು ನೌಕಾ ಸಂಚಾ ರವು ಸಂಪೂರ್ಣ ವ್ಯಾಪಾರ ಪ್ರಪಂಚದ ವ್ಯವ ಸ್ಥೆಗೆ ವಶವಾಗಿರುವುದರಿಂದ ನಮ್ಮ ದೇಶಕ್ಕೆ ಹಡಗುಗಳು ಬೇಕೆಂಬುದನ್ನೇ ಎಲ್ಲರೂ ಮರೆ ತಂತಿದೆ. ಬ್ರಿಟನ್ನು ಭಾರತದ ಎಲ್ಲ ನೌಕಾಶಕ್ತಿ ಯನ್ನೂ ಅಪಹರಿಸಿ ಬಿಟ್ಟಿದೆ. ಒಂದು ದೇಶದ ಹಡಗುಗಳಿಂದಲೇ ಅದರ ಪರರಾಷ್ಟ್ರ ವ್ಯಾಪಾರ ದಲ್ಲಿ ನೂರಕ್ಕೆ ಐವತ್ತರಷ್ಟು ಒಳದೇಶದ ಮತ್ತು ತೀರ ಪ್ರದೇಶದ ಎಲ್ಲ ವ್ಯಾಪಾರವೂ ನಡೆಯತಕ್ಕದ್ದೆಂಬುದು ಸುಪ್ರಸಿದ್ಧವಾದ ನಿಯ ಮ. ಆದರೆ ಇಂದು ಭಾರತದಲ್ಲಿ ಪರರಾಷ್ಟ್ರ ಗಳೊಡನೆ ಸಾಗುವ ಎಲ್ಲ ವ್ಯಾಪಾರವೂ ವಸ್ತುತಃ ಬ್ರಿಟಿಶರ ಕೈಯಲ್ಲಿಯೇ ಇದೆ ಮತ್ತು ತೀರ ಪ್ರದೇಶದಲ್ಲಿಯ ನೌಕಾ ಸಂಚಾರ ವ್ಯವಸ್ಥೆಯೂ ಅವರ ವಶದಲ್ಲಿದೇ ಇದೆ. ಇದರ ಪರಿಣಾಮ ವಾಗಿ ಸಾಮಾನುಗಳ ಸಾಗಿಗೆಯ ಮೇಲೆ ನಮ್ಮ ಅಧಿಕಾರವು ಎಳ್ಳಷ್ಟೂ ಇಲ್ಲದಂತಾಗಿದೆ.

ರಾಷ್ಟ್ರೀಯ ಸರಕಾರ ಬಂದೊಡನೆ ನಮ್ಮ ದೇಶದಲ್ಲಿ ಸಾಮಾನುಗಳ ಆಗಮನ ನಿರ್ಗಮನ ಗಳ ನಿಯಂತ್ರಣದ ಬಗ್ಗೆ ನೌಕಾಸೌಕರ್ಯ ಗಳನ್ನು ವ್ಯವಸ್ಥೆಗೊಳಿಸಬೇಕು. ಯುಕ್ತವಾದ ನೌಕಾ ಧೋರಣದಿಂದ ಸರಕಾರವು ತನ್ನ ಧೋರಣವನ್ನು ಕಾರ್ಯರೂಪಕ್ಕೆ ತರಬಹು ದಾಗಿದೆ. ಆಗ ಮಾತ್ರ ಜನರ ಆರ್ಥಿಕ ಜೀವ ನವು ಅಪೇಕ್ಷಿತ ಮಾರ್ಗದಲ್ಲಿ ವೃದ್ಧಿಹೊಂದೀತು. ಈಗ ನಮ್ಮ ಆರ್ಥಿಕ ಕಾರ್ಯಕಲಾಪಗಳೆಲ್ಲವೂ ಪರದೇಶಗಳ ಅವಶ್ಯಕತೆಯನ್ನು ಅವಲಂಬಿ ಸಿವೆ. ಇದು ಪೂರ್ಣ ತಪ್ಪು. ಆದುದರಿಂದ ಈ ಸ್ಥಿತಿಯಲ್ಲಿ ನಾವು ನಮ್ಮ ನೌಕಾ ಧೋರಣದತ್ತ ಲಕ್ಷ್ಯ ಕೊಡತಕ್ಕದ್ದು ಅವಶ್ಯಕ.

ನಮ್ಮ ಆರ್ಥಿಕ ದಶೆಗೆ ಹೊಂದಿಕೆಯಾಗುವಂತೆ ನಮ್ಮ ಸಾಗಿಗೆಯ ಕ್ರಮವನ್ನು ಸರಿಪಡಿಸಿಕೊಳ್ಳ ಬೇಕು. ಹಿಂದುಸ್ಥಾನವು ಈಗಿದ್ದ ಹಾಗೇ ಇರು ವುದಾದರೆ ಕಲ್ಲಿದ್ದಲಿನಿಂದ ನಡೆಯುವ ಹಡಗುಗ ಳನ್ನು ಇಟ್ಟುಕೊಳ್ಳುವುದು ಸರಿ. ಏಕೆಂದರೆ ನಮ್ಮ ಲ್ಲಿ ಕಲ್ಲಿದ್ದಲಿನ ಉತ್ಪತ್ತಿಯಿದೆ. ಆದರೆ ಕಲ್ಲಿದ್ದ ಲನ್ನು ಬಳಸುವ ನಮ್ಮ ಹಡಗುಗಳನ್ನಿಟ್ಟುಕೊಂಡ ರೆ ಸಾಕೇ? ಎಂಬುದು ವಿಚಾರಣೀಯವಾಗಿದೆ. ಆದರೆ ಎಣ್ಣೆಯಿಂದ ನಡೆವ ಹಡಗುಗಳ ಪರಿ ಸ್ಥಿತಿಯೇ ಬೇರೆ; ಎಣ್ಣೆಯು ನಮ್ಮ ಕೈಯೊಳಗಿನ

೯ ನೇ ಪುಟಕ್ಕೆ

ರಾಜಕೋಟೆ ರಾಷ್ಟ್ರೀಯ ಶಾಲೆಯ ನೂಲುವ ಪ್ರದರ್ಶನ

(೨೬—೬—೪೭ ರಿಂದ ೧೧-೧೦-೪೭ ರ ವರೆಗೆ)

ಭಾದ್ರಪದ ಶುದ್ಧ ದ್ವಾದಶಿ ದಿನ, ಅಂದರೆ ಅಕ್ಟೋಬರ ೧೧ಕ್ಕೆ ಗಾಂಧೀಜಿಯ ೭೮ ನೇ ಜನ್ಮದಿನ.

ಈ ಶಾಲೆ ಕಳೆದ ಹದಿಮೂರು ವರ್ಷಗಳಿಂದ ಗಾಂಧೀಜಿಯ ಹುಟ್ಟು ಹಬ್ಬವನ್ನು ಚರಖಾ ಜಯಂತಿಯೆಂದು ಆಚರಿಸುತ್ತ ಬಂದಿದೆ. ಆದುದ ರಿಂದ ಜುಲೈ ೨೬ ರಿಂದ ಅಕ್ಟೋಬರ ೧೧ ರವರೆಗೆ ೭೮ ದಿನ ಪರ್ಯಂತ ಜನರು ಅಲ್ಲಿ ನೂಲುವರು. ಅಹಿಂಸಾ ಬದ್ಧವಾದ ಸ್ವರಾಜ್ಯದ ಯೋಜನೆ ಯಲ್ಲಿ ಗಾಂಧೀಜಿ ಚರಕಕ್ಕೆ ಕೇಂದ್ರಸ್ಥಾನವನ್ನು ಕೊಟ್ಟಿದ್ದಾರೆ. ರಾಜಕೀಯ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಸಂಪಾದಿಸಲು ಚರ ಕವೇ ಮುಖ್ಯ ಸಾಧನವೆಂದು ಅವರು ನಂಬಿದ್ದಾರೆ. ಆದರೆ ಜನತೆಯು ಅವರ ಈ ವಿಶ್ವಾಸ ದಲ್ಲಿ ಭಾಗಿಯಾಗಿಲ್ಲ. ಆಗಿದ್ದರೆ ಇಂದು ನಾವೀ ವಿಷಮ ಪರಿಸ್ಥಿತಿಯಲ್ಲಿರುತ್ತಿದ್ದಿಲ್ಲ.

ಇಂಥ ಸ್ಥಿತಿಯಲ್ಲಿ ಚರಕಾ ಪ್ರೇಮಿ ಮಾಡತಕ್ಕದ್ದೇನು? ವಾತಾವರಣ ಪ್ರತಿಕೂಲವಾಗಿರುವಾಗ ಕರ್ತವ್ಯವನ್ನು ಇನ್ನಷ್ಟು ನಿಷ್ಠೆಯಿಂದ ಪೂರೈಸ ಬೇಕೆಂಬುದು ವಿಧಿಯೆಂಬುದು. ಅಂಥವರೆಲ್ಲ ಜುಲೈ ೨೬ ಕ್ಕೆ ಪ್ರಾರ್ಥನಾನಂತರ ಪ್ರಾರಂಭವಾಗುವ ಈ ಯಜ್ಞಕಾರ್ಯದಲ್ಲಿ. ಅನೇಕರು ಭಾಗ ವಹಿಸುವರೆಂದು ಹಾರೈಸಲಾಗಿದೆ. ಚರಖಾ ಸಂಘದ ಸದಸ್ಯರೂ ಸರಕಾರಿ ಅಧಿಕಾರಿಗಳೂ ಇದರಲ್ಲಿ ಭಾಗವಹಿಸಬೇಕು. ಅವರು ತಮ್ಮ ಹೆಸರುಗಳನ್ನು ಮುಂದಾಗಿ ತಿಳಿಸಬೇಕು.

ಇಚ್ಛೆಯುಳ್ಳವರು ಎಷ್ಟೇ ಮೌಲ್ಯದ ೭೮ ನಾಣ್ಯಗಳನ್ನು ಕಾಣಿಕೆ ಕೊಡಬಹುದು. ಆದರೂ ಗಾಂಧೀಜಿ ನಾಣ್ಯಕ್ಕಿಂತ ನೂಲಿಗೆ ಮಹತ್ವ ಕೊಡುತ್ತಾರೆ. ಎಂದಿನಂತೆ ೧೧ ನೇ ಅಕ್ಟೋಬರದ ಉತ್ಸವವನ್ನು ನೆರವೇರಿಸಲಿಕ್ಕೂ ನೂಲನ್ನೂ ಹಣವನ್ನೂ ಸ್ವೀಕರಿಸಲಿಕ್ಕೂ ಹಿಂದುಸ್ಥಾನದ ಗಣ್ಯ ವ್ಯಕ್ತಿಯರಲ್ಲಿ ಯಾರಾದರೊಬ್ಬರೂ ಉಪಸ್ಥಿತರಾಗಬಹುದೆಂದು ಆಶಿಸಲಾಗಿದೆ.

—ನಾರಾಯಣದಾಸ ಗಾಂಧಿ

(ಚರಕದ ಮೇಲೆ ಪ್ರೀತಿಯುರುವವರು ಈ ಯಜ್ಞದಲ್ಲಿ ಅಪೂರ್ವ ಉತ್ಸಾಹವನ್ನು ತೋರು ವರೆಂದು ಭಾವಿಸಬಹುದು. ಇದಕ್ಕೆ ನೂಲು ವದರಲ್ಲಿ ಹೆಚ್ಚು ಶ್ರದ್ಧೆ ವಹಿಸುವದೊಂದೇ ದಾರಿ ಯಲ್ಲ,ನೂಲುವದರ ನಿಜವಾದ ಅರ್ಥದ ಮೇಲೆ, ಅರ್ಥಾತ್ ಸತ್ಯ ಅಹಿಂಸೆಗಳ ಮೇಲೆ ವಿಶೇಷ ಗಮನವೀಯುವದೂ ಅವಶ್ಯ. ಇವುಗಳಲ್ಲಿ ವಿಶ್ವಾಸವಿಟ್ಟು ಜೀವನದಲ್ಲಿ ಅನುಸರಿಸದೆ ಇರುವವರು ಈ ಯಜ್ಞದಲ್ಲಿ ಭಾಗವಹಿಸಬೇಕಿಲ್ಲ. ಇವರು ದೇಶದಲ್ಲಿಯೂ ಆದನೊಬ್ಬನ ಸಹಾಯ ದಲ್ಲಿಯೂ ವಿಶ್ವಾಸವುಳ್ಳವರಾಗಿರಬೇಕು.

—ಕೋ. ಕೆ. ಗಾಂ)

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳ ಸಾರ

ಎಂದೂ ತಪ್ಪಲಿಕ್ಕಿಲ್ಲ

ಪ್ರಾರ್ಥನೋತ್ತರ ಭಾಷಣಗಳಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡುವದೊಂದು ಪದ್ಧತಿಯಾಗಿಬಿಟ್ಟಿದೆಯೆಂದೂ ದಾಕ್ಷಿಣಾತ್ಯನೊಬ್ಬನು ಹಲವು ಪ್ರಶ್ನೆಗಳಿಗೆ ಉತ್ತರ ಕೇಳಿರುವನೆಂದೂ ಗಾಂಧಿಯವರು ಹೇಳಿದರು.

ಪತ್ರ ಲೇಖಕನಿಗೆ ರಾಷ್ಟ್ರಭಾಷೆ ತಿಳಿದಿದ್ದಿಲ್ಲವಾಗಿ, ತಮಿಳನ್ನೂ ಕೂಡ—ಅವನು ಸರಿಯಾಗಿ ತಿಳಿದಂತೆ—ಚೆನ್ನಾಗಿ ಓದಲು ಬರುತ್ತಿದ್ದಿಲ್ಲವಾಗಿ ಪ್ರಶ್ನೆಗಳನ್ನು ಇಂಗ್ಲೀಷಿನಿಂದ ಕೇಳಲಾಗಿತ್ತು.

ಆಂಗ್ಲನೆಂದೂ ತಪ್ಪು ಹೆಜ್ಜೆ ಯಿಡುವವನಲ್ಲವೆಂದು ಜಾರ್ಜ ಬರ್ನಾರ್ಡ ಶಾ ಹೇಳಿದ್ದಾನೆ: "ಆಂಗ್ಲನು ಎಲ್ಲವನ್ನೂ ತತ್ವಾನುಸಾರವಾಗಿ ಮಾಡುತ್ತಾನೆ. ಅವನು ದೇಶಪ್ರೇಮದ ತಳಹದಿಯಮೇಲೆ ನಿಮ್ಮೊಡನೆ ಯುದ್ಧಮಾಡುತ್ತಾನೆ; ವ್ಯಾಪಾರ ತತ್ವದ ಮೇಲೆ ನಿಮ್ಮ ದ್ರವ್ಯವನ್ನು ಅಪಹರಿಸುವನು; ಸಾಮ್ರಾಜ್ಯ ತತ್ವದ ಪ್ರಕಾರ ನಿಮ್ಮನ್ನು ದಾಸ್ಯದಲ್ಲಿಡುವನು; ತನ್ನ ರಾಜನಿಗೆ ರಾಜಭಕ್ತಿ ತತ್ವದ ಪ್ರಕಾರ ಬೆಂಬಲಿಗನಾಗುತ್ತಾನೆ ಮತ್ತು ಪ್ರಜಾಸತ್ತೆಯ ತತ್ವದ ಅನುಗುಣವಾಗಿ ಬಳಿಕ ಅವನ ತಲೆಯನ್ನು ತುಂಡರಿಸುತ್ತಾನೆ". "ಇವುಗಳಲ್ಲಿ ಯಾವ ತತ್ವದ ಅನುಗುಣವಾಗಿ ಇಂದು ಆಂಗ್ಲನು ಭಾರತವನ್ನು ಬಿಟ್ಟು ಹೋಗುತ್ತಿದ್ದಾನೆಂಬುದನ್ನು ನಾನು ನಿಮ್ಮಿಂದ ತಿಳಿಯಲಪೇಕ್ಷಿಸುತ್ತೇನೆ. ನಮ್ಮ ಪ್ರೀತಿಯ ದೇಶದ ಇಂದಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಿಂದ ಆಂಗ್ಲನು ಸಂತುಷ್ಟನಾಗಿರುವನೆ? ಹಿಂದೀ ಒಕ್ಕೂಟದಿಂದ ಹೈದರಾಬಾದು ಮತ್ತು ತಿರುವಾಂಕೂರುಗಳು ದೂರ ಉಳಿಯುವದರಲ್ಲಿ ಅವನಿಗೆ ತೃಪ್ತಿಯಿದೆಯೆ?

ಮೇ ೧೬ ರ ಪತ್ರವನ್ನು ಹರಿದು ಬಿಸುಟು ಈಗಿನ ವಿಭಜನಾ ಯೋಜನೆಯನ್ನು ಮುಂದಿಡುವದರಲ್ಲಿ ಅವನಿಗೇನಾದರೂ ಸ್ವಾರ್ಥ ಸಾಧನೆಯ ದೃಷ್ಟಿಯಿರುವುದೇ? ಕಾಂಗ್ರೆಸ್ಸನ್ನು ವಿಭಜನಾ ಯೋಜನೆಗೆ ಒಪ್ಪಲೊತ್ತಾಯಿಸಿದ ಪಂಜಾಬ, ಬಿಹಾರ, ನೌಖಾಲಿಗಳಲ್ಲಿ ನಡೆದ ಭಯಂಕರ ಘಟನೆಗಳು ಅವನ ಮೇಲೇನಾದರೂ ಪರಿಣಾಮ ಮಾಡಿವೆಯೊ? ಅವನು ಅವುಗಳ ಬಗ್ಗೆ ಸಂತಪಿಸುವನೆ? ಚರ್ಚಿಲ್ಲ ಮತ್ತು ಕಂಪನಿಯು ಯೋಜನೆಗೆ ಒಪ್ಪಿಗೆ ಕೊಡುವುದರ ಹಿಂದಿರುವ ಕಾರಣವೇನು? ಉಳಿದ ಭಾರತೀಯರಿಗಿಂತ ಹೆಚ್ಚಾಗಿ ಆಂಗ್ಲನ ಮನೋಧರ್ಮವನ್ನು ಬಲ್ಲೆವೆಂದು ಪದೇ ಪದೇ ನೀವು ಹೇಳುತ್ತಿದ್ದಿರಿ. ಮತ್ತು ಪದೇ ಪದೇ ನಿಮ್ಮ ಪ್ರಾರ್ಥನೋತ್ತರ ಭಾಷಣಗಳಲ್ಲಿ ಅಧಿಕಾರ ದಾನಮಾಡುವ ಆಂಗ್ಲರ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಸದಿಚ್ಛೆಗಳಲ್ಲಿ ವಿಶ್ವಾಸವಿಡಿರೆಂದು ಹೇಳುತ್ತ ಬಂದಿದ್ದೀರಿ. ಆದುದರಿಂದ ನೀವು ಈಸಂಗತಿಯನ್ನು ವಿಶದಗೊಳಿಸಬಲ್ಲವರಾಗಿರಬೇಕು. ನೀವೊಬ್ಬರೇ ನಮ್ಮ ಸಂದೇಹಗಳನ್ನು ಮನಸ್ಸಿಗೆ ಹಿಡಿವಂತೆ ನಿವಾರಿಸಬಲ್ಲವರು."

ಮೇಲಿನದು ಗಾಂಧೀಯವರು ಮಾತಾಡುವಾಗ ಕೊಟ್ಟ ಸಾರಾಂಶ. ಅವರ ಉತ್ತರವಿದು—

"ಬರ್ನಾರ್ಡಶಹನ ಮಾತೂ ಸಂಪೂರ್ಣವಾದದ್ದಲ್ಲ, ಆಂಗ್ಲನ ತತ್ವಗಳಿಗೂ ಮಿತಿಯಿಲ್ಲ. ಆಂಗ್ಲನು ಭಾರತವನ್ನು ತತ್ವಾನುಸಾರವಾಗಿ ಬಿಟ್ಟುಹೋಗುತ್ತಿದ್ದಾನೆಂಬಲ್ಲಿ ನನಗೆ ಸಂದೇಹವಿಲ್ಲ. ಮನುಷ್ಯನಿಗೆ ತನ್ನನ್ನು ಮೋಸಗೊಳಿಸಿಕೊಳ್ಳುವ ಒಂದು ಅದ್ವಿತೀಯವಾದ ಕೌಶಲವಿದೆ. ಅಂಥವರಲ್ಲಿ ಆಂಗ್ಲನು ಅಗ್ರಗಣ್ಯನು. ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದ ಭಾರತವನ್ನು ದಾಸ್ಯದಲ್ಲಿಡುವುದು ತಪ್ಪೆಂದು ತಿಳಿದುದರಿಂದ ಅವನು ಅದನ್ನು ಬಿಟ್ಟು ಹೋಗುತ್ತಿದ್ದಾನೆ. ಇಲ್ಲಿ ಅವನು ಸಂಪೂರ್ಣ ಪ್ರಾಮಾಣಿಕನು. ಅದರೆ—ಹೇಗೇ ಆಗಲಿ—ಆ ಪ್ರಾಮಾಣಿಕತೆಯು ಅವನ ಆತ್ಮವಂಚನೆಗೆ ಸರಿಹೊಂದುವಂಥದೇ ಆಗಿದೆಯೆಂಬುದನ್ನು ಸುಳ್ಳೆನ್ನಲಾಗದು.

ಹಿಂದುಸ್ತಾನದಲ್ಲಿ ಅರಾಜಕತೆಯುಂಟಾದೀತಾದುದರಿಂದ ಅದನ್ನು ಬಿಟ್ಟು ಹೋಗಲಾರೆನೆಂದು ಆಂಗ್ಲನು ತಿಳಿದಿರುವುದು ಅವನ ಆತ್ಮವಂಚನೆ. ಎರಡು ಸಂಘಟಿತ ಸೈನ್ಯಗಳ ನಡುವಣ ರಣರಂಗವನ್ನಾಗಿ ಮಾಡಿ ಭಾರತವನ್ನು ಬಿಟ್ಟು ಹೋಗುವುದರಲ್ಲಿ ಅವನಿಗೆ ತೃಪ್ತಿಯಿದೆ. ಬಿಡುವುದರ ಮೊದಲು ಒಂದು ಜಾತಿಯ ಮೇಲೆ ಇನ್ನೊಂದನ್ನು ಎತ್ತಿ ಕಟ್ಟುವ ಧೋರಣೆಕ್ಕೆ ಅಂಗೀಕಾರ ಮುದ್ರೆಯನ್ನು ಒತ್ತುತ್ತಿದ್ದಾನೆ. ಸಂಸ್ಥಾನಗಳ ವಿಷಯದಲ್ಲಿ ನ್ಯಾಯ್ಯವಾದುದನ್ನು ಮಾಡಲು ಅವನಿಗೆ ಧೈರ್ಯ ಕಡಿಮೆಯಾಯಿತು. ಈಗ ಒಂದು ಪಕ್ಷಕ್ಕೆ ಬೇಕಾದುದೆಲ್ಲ ದೊರಕಿದುದರಿಂದ ಹೋಗುವುದರ ಮೊದಲು ಎರಡು ಪಕ್ಷಗಳನ್ನೂ ಒತ್ತಟ್ಟಿಗೆ ತರಲಿದ್ದಾನೆ. ಪ್ರಯತ್ನಿಸಿದರೆ ಅವನು ಹಾಗೆ ಮಾಡಬಲ್ಲನು. ತಿರುವಾಂಕೂರು ಹೈದರಾಬಾದುಗಳು ಇನ್ನೂ ಸ್ವತಂತ್ರ ಸಂಸ್ಥಾನಗಳಾಗಿಲ್ಲ. ಆಂಗ್ಲನು ಭಾರತೀಯನನ್ನು ಇಂಗ್ಲಂಡಿನಿಂದ— ಆ ಕಾರಣವಾಗಿ ಪರಸ್ಪರ— ಸ್ವತಂತ್ರವೆನಿಸುವ, ಸಂಭಾವ್ಯವಾದ ಪರಸ್ಪರ ಯುದ್ಧಾಸಕ್ತ ರಾಜ್ಯಗಳಲ್ಲಿ ಬಿಟ್ಟುಹೋದರೆ ಬ್ರಿಟಿಶರ ಹೆಸರಿಗೆ ಕಲಂಕವು ಇದಕ್ಕಿಂತ ಹೆಚ್ಚಿನದಿನ್ನೊಂದಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಆಗ ಸಾಮಂತ ಸ್ಥಿತಿಯು ಮೂಗಿಗೆ ನಾತ ಬಡಿಯುವಂಥದಾಗುತ್ತದೆ ಆದರೆ ಆಗಸ್ಟ ೧೫ ರೊಳಗೆ ಬ್ರಿಟಿಶರ ಕಾರಭಾರ ಕೌಶಲವು ತಾನು ದರಿದ್ರನೆಂದು ಡಂಗುರ ಹೊಡೆಯಲಾರದೆಂದು ನನ್ನ ನಂಬಿಗೆ. ಓದಿದಾಗ ಬಹಳ ಉದ್ಧಟವೆಂದು ತೋರುವ, ಬ್ರಿಟಿಶ ಘೋಷಣೆಯಲ್ಲಿಯ ಪತ್ರಲೇಖಕನ ಅವಿಶ್ವಾಸವೆಷ್ಟೇ ಇದ್ದರೂ ಅಲ್ಲಿಯವರೆಗೆ ನಾನು ನನ್ನ ತೀರ್ಪನ್ನು ಕಾದಿಡುತ್ತೇನೆ. ಅವರ ಕಾರ್ಯವೇ ಅವರ ಮಾತಿನ ಸತ್ಯ ಪರೀಕ್ಷೆಯ ನಿರ್ಣಾಯಕವಾಗಲಿ. ಸಂದೇಹಪಡಲು ಸಮರ್ಥಕಾರಣಗಳಿದ್ದ ಹೊರತು ನಾನು ಒಬ್ಬ ಮನುಷ್ಯನ ಮಾತಿನಲ್ಲಿ ಅವಿಶ್ವಾಸಪಡಲಾರೆನು. ಕೈಕೊಂಡ ಕ್ರಮದ ರಾಜಕೀಯ ಮತ್ತು ಆರ್ಥಿಕ ಆವಶ್ಯಕತೆಯನ್ನರಿತುದರಿಂದಲೇ ಚರ್ಚಿಲ್ಲ ಮತ್ತು ಕಂಪನಿಯು ಭಾರತ ಸ್ವಾತಂತ್ರ್ಯ ಮಸೂದೆಯನ್ನು ಹರಸಲು ಮುನದಂದಿತು. ಇತ್ತೀಚಿನ ಚಿಹ್ನಗಳು ಸಂದೇಹಹುಟ್ಟಿಸುವಂತಹ ಭವಿಷ್ಯಸೂಚಿಗಳಾಗಿವೆಯೆಂಬುದನ್ನೇನೋ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸಾವು ತಾನಾಗಿ ಬರುವುದರ ಮೊದಲೇ ಸಾಯುವುದರಲ್ಲಿ ನನಗೆ ನಂಬಿಗೆಯಿಲ್ಲ."

ವಿಷವನ್ನು ಅಮೃತವನ್ನಾಗಿ ಮಾರ್ಪಡಿಸಿರಿ

ಹಿಂದಿನ ದಿನ ಸಾಯಂಕಾಲ ಉಲ್ಲೇಖಿಸಿದ ಪತ್ರದಲ್ಲಿಯ ಅವತರಣಿಕೆಗಳನ್ನು ಗಾಂಧೀಜಿ ವಿವರಿಸಿದರು. ಅದು ಇಂತಿದ್ದಿತು.

"ತಾವು ಉಸಿರಾಡಿಸುತ್ತಿರುವ ಗಾಳಿಯಲ್ಲಿ ಹಿಂಸೆಯನ್ನು ಆಘ್ರಾಣಿಸುತ್ತೇವೆಂದು ಗಾಂಧೀಜಿ ತಮ್ಮ ವೃತ್ತಪತ್ರದಲ್ಲಿ ೧೯೪೦ನೇ ಇಸ್ವಿಯಲ್ಲಿಯೆ ಬರೆದಿದ್ದಾರೆಂದು ನನ್ನ ನಂಬಿಗೆ. ಅಂದಬಳಿಕ 'ವರ್ತಮಾನ'ದ ಬಗ್ಗೆ ಏನು ಹೇಳಬೇಕು? ಇಡೀ ರಾಜಕೀಯ ಜೀವನವೆ ಹದಗೆಟ್ಟಿದೆ. ಎಲ್ಲೆಲ್ಲಿಯೂ ಲಂಚಗುಳಿತನ ಅತ್ಯಂತ ಭೀಕರ ರೀತಿಯಲ್ಲಿ ತಾಂಡವ ಮಾಡುತ್ತಿದೆ. ನಾಚಿಕೆ ಬಿಟ್ಟು ಹಣವನ್ನು ಕೇಳಲಾಗುತ್ತಿದೆ, ಕಳ್ಳತನದಿಂದ ಹಣ ಕೊಡಲಾಗುತ್ತಿದೆ. ಸಾಧನಗಳ ಬಗ್ಗೆ ಜನರು ಸ್ವಲ್ಪೂ ಲಕ್ಷ ಕೊಡುವದಿಲ್ಲೆಂದು ತೋರುತ್ತದೆ. ರೊಕ್ಕಿದ್ದವರು ತಮಗೆ ಬೇಕಾದುದನ್ನೆಲ್ಲ ಯಾವದೇ ಬಗೆಯ ಹೀನ ಸಾಧನದಿಂದಲೂ ಪಡೆಯುತ್ತಾರೆ. ಎಲ್ಲ ಬಗೆಯ ಅನಿಷ್ಟ ಹಿಂಸೆ, ದ್ವೇಷ, ಕ್ಲೇಷ, ಅಪನಂಬಿಗೆ, ಶತ್ರುತ್ವ, ಅಸ್ಥಿರತೆ ಮೊದಲಾದವುಗಳು ವಿವಿಧ ರೂಪಗಳಲ್ಲಿ ಎಲ್ಲೆಲ್ಲಿಯೂ ಹಬ್ಬಿವೆ. ಇದಲ್ಲದೆ ೧೯೪೭ನೇ ಇಸ್ವಿಯ ಜೂನ ೩ ರಿಂದ ಈಚೆಗೆ 'ವಿಭಜನೆ' ಹವೆಯನ್ನೆಲ್ಲ ವ್ಯಾಪಿಸಿಬಿಟ್ಟಿದೆ. ಸಂಪು, ಕಳವು ಲೂಟಿ, ಕೊಳ್ಳಿ, ಕೊಲೆ ಮತ್ತು ಇರಿತಗಳು ಹಿಂದುಸ್ತಾನದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ವರದಿಗಳನ್ನೋದದೆ ದಿನ ಪತ್ರಿಕೆಗಳನ್ನೇ ಯಾರೂ ತೆರೆಯುವದಿಲ್ಲ. ಗಾಂಧೀಜಿ ದಿನಾಲು ಜನತೆಗೆ ಬೋಧಿಸುತ್ತಿರುವ ದ್ವೇಷಕ್ಕೆ ಬದಲು ಪ್ರೇಮ, ಅಸತ್ಯದ ಬದಲು ಸತ್ಯ, ಅಸಹನೆಯ ಬದಲು ಸಹನೆ ಇದೆಲ್ಲ ಎಲ್ಲಿ ಮಾಯವಾಯಿತು? ನಮ್ಮ ದೇಶದ ಇತಿಹಾಸದಲ್ಲಿಯ ಈ ವಿಷಾದಮಯ ಘಟನೆಗಳಿಗೆ ಹೊಣೆಗಾರರಾರು? ಕಳೆದ ಮೂವತ್ತು ವರುಷಗಳಿಂದ ಧುರೀಣರನ್ನು ಹಿಡಿದು ಭಂಗಿಗಳ ವರೆಗೆ ಕಾಂಗ್ರೆಸ್ಸಿನ ಸಾವಿರಾರು ಸ್ತ್ರೀ ಪುರುಷರು ಸಹಿಸಿದ ಅನನ್ಯ ಛಲನೆ ಕಷ್ಟನಷ್ಟ ಮತ್ತು ತ್ಯಾಗ ಎಲ್ಲದರ ಉದ್ದೇಶ ಇಂತು ಪರಿಣಮಿಸಬೇಕೆಂದಿದ್ದಿತೊ? ಹಿಂದುಸ್ತಾನವನ್ನು ಎರಡು ರಾಜಕೀಯ ಭಾಗಗಳನ್ನಾಗಿ ವಿಭಜಿಸಿದ ಬಳಿಕ ಮೇಲೆ ಹೇಳಿದ ಎಲ್ಲ ಅನಿಷ್ಟ ರೂಪೀ ವಿಷವು ಅಮೃತ, ಇಲ್ಲವೆ 'ಪೂರ್ಣ ಸ್ವರಾಜ್ಯ' ಸ್ಥಾಪನೆಯ ಪೂರ್ವಪೀಠಿಕೆಯಾಗಬೇಕೆ? ಆ ವಿಷವನ್ನು ನಾಶಗೊಳಿಸಲು ಇಡೀ ಹಿಂದುಸ್ತಾನದಲ್ಲಿ ಗಾಂಧೀಜಿಯೊಬ್ಬರೆ ಸಮರ್ಥರಿರುವರು. ಸಂಪೂರ್ಣ ಸ್ವಾತಂತ್ರ್ಯದ ಸುಖವನ್ನನುಭವಿಸಲು ನಮಗೆ ಅವಕಾಶ ಮಾಡಿಕೊಡಲೂ ಅವರೇ ಸಮರ್ಥರು."

ಇದರಲ್ಲೇನೂ ಆಶ್ಚರ್ಯವಿಲ್ಲ ಎಂದೆಂದರು ಗಾಂಧೀಜಿ; ಕೊಲೆ ಕೊಳ್ಳಿ, ಸುಲಿಗೆ ಮೊದಲಾದವುಗಳು ಇಂದಿನಷ್ಟು ಹಿಂದೆಂದೂ ವಿಫುಲವಾಗಿರಲಿಲ್ಲ. ತಮ್ಮ ನೇತೃತ್ವದಲ್ಲಿ ಕಳೆದ ಮೂವತ್ತು ವರುಷಗಳಿಂದ ಮಾಡುತ್ತ ಬಂದುದೆಲ್ಲ ನಿಷ್ಕ್ರಿಯ ಪ್ರತೀಕಾರದ ಹೊರತು ಬೇರೆ ಯಾವದೂ ಇರಲಿಲ್ಲೆಂದು ಹೇಳಿ ಗಾಂಧೀಜಿ ಈ ದುರಂತ ಘಟನೆಗಳ ಬಗ್ಗೆ ಇರುವ ತಮ್ಮ ಹೊಣೆಗಾರಿಕೆಯನ್ನು ಒಪ್ಪಿಕೊಂಡರು. 'ಹಿಂದುಸ್ತಾನದಿಂದ ಹೊರಟುಹೋಗಿರೆಂದು ಬ್ರಿಟಿಶ ಸರಕಾರದ ಮನವೊಲಿಸುವದೇನೋ ಚೆನ್ನಾಗಿತ್ತು. ನಿಷ್ಕ್ರಿಯ ಪ್ರತೀಕಾರದಲ್ಲಿ ಅಹಿಂಸೆಯಂತೆ ಮಾನವರ ಮನಸ್ಸನ್ನು ಪರಿವರ್ತಿಸುವ ಶಕ್ತಿಯಿಲ್ಲ. ಪರಿಣಾಮಗಳೂ ಚೆನ್ನಾಗಿ ಗೊತ್ತಿದ್ದವು. ಆ ಬಗ್ಗೆ ಇನ್ನು ಹೆಚ್ಚಿಗೆ ಗಮನ ಕೊಡಬೇಕಿಲ್ಲ. ತಮ್ಮ ಕನಸಿನ ಸ್ವರಾಜ್ಯ ಬಹಳ ದೂರ ಹೋಯಿತು. ವಿಷವನ್ನು ಅಮೃತವನ್ನಾಗಿ ಮಾರ್ಪಡಿಸಲು ಮಾಡತಕ್ಕದ್ದೇನು? ಅದು ಶಕ್ಯವಿದೆಯೇ? ಶಕ್ಯವಿದೆಯೆಂದು ತಮಗೆ ಗೊತ್ತಿದ್ದು ಅದರ ಹಾದಿಯೂ ಗೊತ್ತಿದೆ. ಆದರೆ ನಿಷ್ಕ್ರಿಯ ಪ್ರತೀಕಾರ ಪ್ರಯತ್ನಕ್ಕೆ ಭಾರತೀಯರು ಸಿದ್ಧರಿದ್ದಂತೆ, ವಿಷವನ್ನು ಅಮೃತವನ್ನಾಗಿ ಮಾರ್ಪಡಿಸಲು ಏಕಮೇವ ಸಾಧನವಾದ ಅಹಿಂಸೆಯ ಪಾಠವನ್ನು ಕಲಿಯಲು ಭಾರತೀಯರು ಸಿದ್ಧರಿಲ್ಲ. ಅದೇ ಮಾರ್ಗವೆಂದು ಅನೇಕರು ಒಪ್ಪಿಕೊಂಡರೂ ಆ ಹೆದ್ದಾರಿಯಿಂದ ಹೋಗಲು ಅವರ ಮನಸ್ಸಿಲ್ಲ. ಅಹಿಂಸೆಯೆಂದೂ ಅಯಶಸ್ವಿಯಾಗಿಲ್ಲ, ಎಂದೆಂದಿಗೂ ಆಗಿಲ್ಲ. ಜನರು ಅದನ್ನನುಸರಿಸಲು ಸಮರ್ಥರಾಗಲಿಲ್ಲ. ಅಹಿಂಸೆಯನ್ನು ಪ್ರಸಾರಮಾಡುವ ತಂತ್ರ ತಮಗೆ ಗೊತ್ತಿಲ್ಲೆಂದು ಯಾರಾದರೂ ದೂರಿದರೆ ತಾವದನ್ನು ಲಕ್ಷಿಸುವದಿಲ್ಲ. ತಮ್ಮಲ್ಲಿಯೂ ಅಹಿಂಸೆಯಿಲ್ಲೆಂದು ಟೀಕಿಸುವವರನೇಕರಿರುವರು. ಪರಮಾತ್ಮನೊಬ್ಬನೆ ಮಾನವರ ಮನಸ್ಸನ್ನು ಅರಿಯಬಲ್ಲರು. ಜಗತ್ತಿನಲ್ಲಿ ಶಾಂತಿ ಪ್ರಸ್ಥಾಪಿತವಾಗಬೇಕಾದರೆ ಅಹಿಂಸೆಯೊಂದೇ ಒಂದು ಉಪಾಯವಾಗಿದ್ದು ಅನ್ಯ ಉಪಾಯಗಳಾವುವೂ ಇರುವುದಿಲ್ಲ.

ಆರಾಧನೆಯಿಲ್ಲ

ಹಿಂದುಸ್ತಾನ ಎರಡು ತುಂಡಾಗಿ ಮಾಡಲ್ಪಟ್ಟಿರುವದರಿಂದ ನಾವು ನಮ್ಮ ನಡತೆಯನ್ನು ಅದೇ ಮೇರೆಗೆ ವಿವೇಚಿಸಬೇಕಾಗುತ್ತದೆ. ದುರ್ದೈವದಿಂದ ಈಗೀಗ ನಾವು ಪರಸ್ಪರ ಶತ್ರುಗಳಂಬಂತೆ ನಡೆದುಕೊಳ್ಳುವದೊಂದು ಚಾಳಿಯಾಗಿ ಬಿಟ್ಟಿದೆ. ಈ ನಂಬಿಕೆಗೆ ನನ್ನ ಸಮ್ಮತಿಯಿಲ್ಲ. ಆದರೆ ಆರಾಧಿಸುವ ಅಥವಾ ಸಂತೋಷಗೊಳಿಸುವ ಪದ್ಧತಿಗೂ ನನ್ನ ಬೆಂಬಲವಿಲ್ಲ. ಈ ಶಬ್ದಕ್ಕೆ ಇಂದು ದುಷ್ಟ ಅರ್ಥ ಬಂದಿದೆ. ನನಗೆ ಆರಾಧನೆಯಲ್ಲಿ ವಿಶ್ವಾಸವಿಲ್ಲದಿದ್ದರೆ ೧೯೪೪ ರಲ್ಲಿ ೧೮ ದಿನಗಳ ವರೆಗೆ ಜಿನ್ನಾ ಸಾಹೇಬರ ಮನೆಗೆ ಎಡತಾಕಿದ್ದೇಕೆಂದು ನನ್ನನ್ನು ಕೇಳುವದುಂಟು. ಸ್ನೇಹಪೂರ್ವಕವಾಗಿ ನಡೆದುಕೊಳ್ಳುವದು ಆರಾಧನೆಯಲ್ಲ. ಶತ್ರುಗಳ ನಡುವೆ ಆದರೆ ಅದಕ್ಕೆ ಆರಾಧನೆಯೆಂದು ಹೆಸರು. ಹಿಟ್ಲರನ ವಿಷಯದಲ್ಲಿ ಹೀಗಾಯಿತೆಂದು ಹೇಳುವದುಂಟು. ಇಂಗ್ಲಂಡೂ ಜರ್ಮನಿಯೂ ಪರಸ್ಪರ ವಿರೋಧಿಗಳಾಗಿದ್ದವು. ದಿವಂಗತ ಚೇಂಬರ್ಲೇನರು ಹಿಟ್ಲರನನ್ನು ಆರಾಧಿಸಿದರೆಂದು ಅವರ ಮೇಲೆ ಆರೋಪ ಹೊರಿಸುವದುಂಟು. ನನಗೆ ಶತ್ರುಗಳೇ ಇಲ್ಲ. ನಾನು ಕಾಯದೆ ಆಝಾದರಿಗೆ ಒಂದು ಕೊಡುಗೆಯನ್ನು ಕೊಡಮಾಡಿದನೆಂಬಲ್ಲಿ ಸಂಶಯವಿಲ್ಲ. ಅದಕಾಗಿ ನನಗೆ ಹೆಮ್ಮೆಯಿದೆ. ಆಗ ಜಿನ್ನಾ ಸಾಹೇಬರು ಅದನ್ನು ಸ್ವೀಕರಿಸಿದ್ದರೆ ಅವರು ಪಾಕಿಸ್ತಾನ ಪ್ರದೇಶವೆನಿಸಿದ್ದರಲ್ಲಿ ಪ್ರಭುವಾಗಿರುತಿದ್ದರು. ಅದೇ ವೇಳೆಗೆ ಉಭಯ ಪ್ರದೇಶಗಳಲ್ಲಿ ಗೆಳೆಯರೊಳಗಿರುವಂತೆ ಸಮಾನ ವಿಷಯಗಳು ಇರಬಹುದಾಗಿತ್ತು. ಆಗ ನಮಗೆ ಜಗತ್ತಿನ ಮುಂದೆ ಅಖಂಡವಾದ ಒಂದೇ ಹಿಂದುಸ್ತಾನ ದೊರಕುತ್ತಿತ್ತು. ಅದು ಹೊರಗಿನವರ ವರ್ಚಸ್ಸಿನಿಂದ ಮುಕ್ತವಾಗಿರುತ್ತಿತ್ತು. ಈ ಎಲ್ಲ ರಕ್ತಪಾತ, ಸುಲಿಗೆ, ಕೊಳ್ಳಿ ಇವುಗಳು ಸಂಭವಿಸಬೇಕಾಗದ್ದಿಲ್ಲ. ಈಗ ನಾವು ಒಬ್ಬರನ್ನೊಬ್ಬರು ಕಂಡು ಬೆಳಗುತಿದ್ದೇವೆ. ಈ ಪಾಶವೀ ಸ್ಥಿತಿಯಲ್ಲಿ ಸ್ವಾತಂತ್ರ್ಯದ ಗಂಧವನ್ನೂ ನಾನು ಕಾಣದಾಗಿದ್ದೇನೆ. ಮುಂಬರುವ ೩೫ ದಿನಗಳಲ್ಲಿ ಪರಿಸ್ಥಿತಿ ಬದಲಾಗದಿದ್ದರೆ ಬರಲಿರುವ ಸ್ವಾತಂತ್ರ್ಯದ ಬಗ್ಗೆ ನಾನೇನೂ ಉತ್ಸುಕನಾಗಿರಲಾರೆ. ನಾವು ಅತ್ಯುನ್ನತ ರೀತಿಯ ಶೌರ್ಯವನ್ನು ತೋರಿಸಬೇಕು. ಹಿಂಸೆಗೆ ಎಳ್ಳಷ್ಟೂ ಬಗ್ಗದಿರಬೇಕು ಆದರೆ ನಿಜವಾದ ಸ್ನೇಹಕ್ಕೆ— ಕಪಟ ಸ್ನೇಹಕ್ಕಲ್ಲ— ಬೇಕಾದಷ್ಟು ಬಗ್ಗಬಹುದು.

ಭಾರತವು ಭಾರತೀಯರೆಲ್ಲರ ಮಾತೃಭೂಮಿ

"ಪಾಕಿಸ್ತಾನದಲ್ಲಿರುವ ಹಿಂದು, ಶೀಖ ಮತ್ತು ಇತರ ಮುಸ್ಲಿಮೇತರರು ಏನು ಮಾಡಬೇಕು? ಕೇವಲ ತಮ್ಮನ್ನು ಅಕ್ರಮಿಸುವರೆಂಬ ಭಯದಿಂದ ಅವರು ತಮ್ಮ ಮನೆಮಾರುಗಳನ್ನು ಬಿಡುವುದಿಲ್ಲ. ನಾವೆಷ್ಟು ಪ್ರಾಮಾಣಿಕತೆ ಮತ್ತು ಮನುಷ್ಯಸಹಜ ವರ್ತನೆ ಇಟ್ಟಿದ್ದರೆ ಅಲ್ಲಿಯ ಮುಸಲ್ಮಾನ ಸಹಜೀವಿಯನ್ನು ನಾನು ನಂಬುತ್ತೇನೆ. ಪಾಕಿಸ್ತಾನ ಭಾಗಗಳಲ್ಲಿ ಗುರುದ್ವಾರಗಳೂ ದೇವಾಲಯಗಳೂ ಇವೆ. ಅವುಗಳನ್ನು ನಾಶಮಾಡಬಹುದೆ? ಹಿಂದು-ಶೀಖ ಮತ್ತು ಇತರರಿಗೆ ಅವನ್ನು ಪ್ರವೇಶಿಸಗೊಡದಿರಬಹುದೆ? ನನಗೆ ಅಂತಹ ಭಯವಾವುದೂ ತೋರುವದಿಲ್ಲ. ತದ್ವಿರುದ್ಧವಾದ ಉದಾಹರಣವನ್ನು ತೆಗೆದುಕೊಂಡರೆ ಜುಮ್ಮಾ ಮಸೀದೆಗಳಲ್ಲಿ ಅತ್ಯುತ್ತಮವಾದುದೊಂದು ಹಿಂದೀ ಒಕ್ಕೂಟದಲ್ಲಿದೆ. ತಾಜಮಹಲು ಅಲಿಗಡ ವಿಶ್ವವಿದ್ಯಾಲಯಗಳು ಇಲ್ಲಿವೆ. ವಿಭಜನೆಯಿಂದ ಮುಸಲ್ಮಾನರು ಈ ಸ್ಥಳಗಳಿಗೂ ನಾನು ಹೆಸರಿಸಬಹುದಾದ ಇತರ ಸ್ಥಳಗಳಿಗೂ ಹೋಗಬರುವುದರಲ್ಲೇನಾದರೂ ವ್ಯತ್ಯಯವುಂಟಾಯಿತೆಂದು ಇಲ್ಲವೆಂದು ನನ್ನ ನಂಬಿಗೆ.

ನಿಜವಾದ ಇಲ್ಲವೆ ಸಂದಿಗ್ಧವಾದ ಭಯದಿಂದ ಪಾಕಿಸ್ತಾನದಲ್ಲಿಯ ಹಿಂದುಗಳು ತಮ್ಮ ಮನೆಗಳಲ್ಲೇ ಕಾದಿರಲಾರರು- ಎಂಬ ಪ್ರಶ್ನೆ ಅನಂತರ ಉದ್ಭವಿಸುತ್ತದೆ. ಅವರ ಪ್ರಾಂತದಲ್ಲೇ ಅವರನ್ನು ಪರದೇಶೀಯರೆಂದು ಗಣಿಸಿದರೆ, ಅವರ ವ್ಯಾಪಾರ ವ್ಯವಹಾರಗಳನ್ನು ನಿರ್ಬಂಧಿಸಿದರೆ ಅವರು ಇರಲಾರರೆಂಬುದು ಖಂಡಿತ. ನಿಃಸಂದೇಹವಾಗಿಯೂ ಅಂತಹ ಪ್ರಸ್ತರಿದ್ದರೆ ಅವರನು ಹಿಂದೀ ಒಕ್ಕೂಟವು ಅದರಿಸಿ ರಕ್ಷಿಸಿಯುತ್ತ ಅವರಿಗೆ ನ್ಯಾಯವಾದ ಅನುಕೂಲಗಳನ್ನು ಒದಗಿಸಿಕೊಡುವುದು ಅದರ ಕರ್ತವ್ಯ. ತಾವು ಯಾವುದೋ ಒಂದು ಅಪರಿಚಿತ ಭೂಮಿಗೆ ಬಂದೆವೆಂದು ಅವರಿಗೆ ಎನ್ನಿಸಬಾರದು. ಯಾವ ಧರ್ಮಾವಲಂಬಿಯೇ ಆಗಿರಲಿ ಅವನು ತಾನು ಭಾರತೀಯನೆಂದು ತಿಳಿದು ಹಾಗೆ ನಡೆದುಕೊಂಡರೆ ಇಡಿಯ ಹಿಂದುಸ್ತಾನವು ಪ್ರತಿಯೊಬ್ಬ ಭಾರತೀಯನ ಮನೆಯಾಗಬಲ್ಲುದು. ನಾನು ಹರಿದ್ವಾರದಲ್ಲಿ ಹೇಳಿದಂತೆ ಹೊಸಬನು ಪಾಲಿಸತಕ್ಕ ನಿಯಮವೆಂದರೆ ತನ್ನ ಸುತ್ತು ಮುತ್ತಲಿನ ಜನರ ಜೀವನಕ್ಕೆ ಅವನು ಹಾಲಿಗೆ ಸಕ್ಕರೆಯಿದ್ದಂತೆ ಇದ್ದು ಅದರ ಮಾಧುರ್ಯವನ್ನೂ ಐಶ್ವರ್ಯವನ್ನೂ ಬೆಳೆಸುವುದೇ."

ಸಂಗ್ರಹಿಸಿದವರು. —ಸುಶೀಲಾ ನಯ್ಯರ.]

ದ್ರವಿಡಸ್ತಾನ ಬೇಡಿಕೆ ಮೂರ್ಖತನದ್ದು

ಹೊಸದಿಲ್ಲಿಯಲ್ಲಿ ೧೬ ನೇ ತಾರೀಖಿನ ದಿನ ಪ್ರಾರ್ಥನೋತ್ತರ ಭಾಷಣದಲ್ಲಿ ಮಹಾತ್ಮಾ ಗಾಂಧಿಯವರು ದ್ರವಿಡಸ್ಥಾನದ ಬೇಡಿಕೆಯನ್ನು ಉಲ್ಲೇಖಿಸಿ ಹೀಗೆ ಹೇಳಿದರು.

"ವಿಂಧ್ಯಾಚಲದ ದಕ್ಷಿಣಕ್ಕಿರುವ ಜನರು ಅನಾರ್ಯರೆಂದೂ ಅದರ ಉತ್ತರಕ್ಕೆ ಇರುವ ಜನರು ಆರ್ಯರೆಂದೂ ಹೇಳುವುದು ಕಟ್ಟುಕತೆಯಾಗಿದೆ. ಪ್ರಾಚೀನ ಕಾಲದಲ್ಲಿ ಏನೇ ಇದ್ದರೂ ಜನರಲ್ಲಿ ಪರಸ್ಪರ ನಿಕಟ ಸಂಬಂಧವಿದ್ದು ಈಗ ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಒಂದೇ ಜನಾಂಗದ ಜನರೇ ಇದ್ದಾರೆ. ಭಾರತವು ವಿಭಜನೆ ಹೊಂದಿದ್ದರೂ ಈ ಮಾತು ಸತ್ಯವಾದುದೇ ಆಗಿದೆ. ಇನ್ನು ಮುಂದೆ ಹೆಚ್ಚಿಗೆ ಹಿಂದುಸ್ತಾನದಲ್ಲಿ ವಿಭಜನೆಮಾಡುವದು ಮೂರ್ಖತನದ್ದಾಗಿರುವದು. ದೇಶವನ್ನು ತುಂಡು ಮಾಡುವ ಪ್ರವೃತ್ತಿಯನ್ನು ನಾವು ಈಗಲೇ ತಡೆಯದಿದ್ದರೆ ಹಿಂದುಸ್ತಾನವು ಚಿಕ್ಕ ಚಿಕ್ಕ ರಾಷ್ಟ್ರಗಳಲ್ಲಿ ಹರಿದು ಹಂಚಿ ಹೋಗಬಹುದು. ಇಂಥ ಚಿಕ್ಕ ಸ್ವತಂತ್ರ ರಾಷ್ಟ್ರಗಳು ಹಿಂದುಸ್ತಾನಕ್ಕಾಗಲಿ, ಜಗತ್ತಿಗಾಗಲೀ ಎಳ್ಳಷ್ಟೂ ಉಪಯೋಗವಿಲ್ಲದ ನಿರುಪಯುಕ್ತ ರಾಷ್ಟ್ರಗಳೆನಿಸಬಹುದು.

(೮ನೇ ಪುಟದಿಂದ)

ದಲ್ಲ ಮತ್ತು ಪೆಟ್ರೋಲ ಹಾಗೂ ಗಾಡಿಎಣ್ಣೆಗಳನ್ನು ನಾವು ಹೆಚ್ಚಾಗಿ ಬಳಸಲು ಪ್ರಾರಂಭಿಸಿದರೆ ಅಂತರ್ರಾಷ್ಟ್ರೀಯ ಶಾಂತಿಗೆ ಭಂಗಬರುವ ಅಪಾಯವಿದೆ. ಅದುದರಿಂದ ನಮ್ಮ ಮಿತಿಯೊಳಗೆ ನಾವು ಕೆಲಸ ಸಾಗಿಸಬೇಕಾಗಿದೆಯೆಂಬ ಎಚ್ಚರಿಕೆಯನ್ನು ಮೊದಲೇ ತೆಗೆದುಕೊಳ್ಳಬೇಕು.

ನಾವು ಹಡಗುಗಳನ್ನು ತಯಾರಿಸಿ ನಮ್ಮ ವ್ಯಾಪಾರಕ್ಕೆ ಬೇಕಾದ ರಾಷ್ಟ್ರೀಯ ನೌಕಾಪಡೆಗಳಿಗೆ ಅಗತ್ಯವಾದಷ್ಟು ಹಡಗುಗಳನ್ನು ಪೂರೈಸಬಲ್ಲೆವಾದರೆ ಸ್ವಯಂಪೂರ್ಣತೆಯ ಕ್ಷೇತ್ರವನ್ನು ಸಮಾಧಾನಗೊಳಿಸಬೇಕಾಗುತ್ತದೆ. ಈ ಮಾರ್ಗಗಳನ್ನು ನಮ್ಮ ದೇಶದ ಮಾರ್ಗಗಳಿಗೆ ಮತ್ತು ಸಾರಿಗೆಯ ದರಗಳಿಗೆ ಹೊಂದಿಸಿಕೊಳ್ಳಬೇಕು. ಆ ಹೊಂದಿಕೆಯು ಸರಕಾರದ ಪರದೇಶ ವ್ಯಾಪಾರ ಧೋರಣೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರಿಹೊಂದಿರಬೇಕು.

—ಜೆ. ಸಿ. ಕುಮಾರಪ್ಪ

ದ್ವಂದ್ವ

ಜುಲೈ ೩ರ ಪ್ರಾರ್ಥನೋತ್ತರ ಭಾಷಣದಲ್ಲಿ ಗಾಂಧೀಜಿಯವರು ತಮ್ಮ ಮನಸ್ಸು ಹಲವು ದ್ವಂದ್ವಗಳಿಂದ ಸಂತ್ರಸ್ತವಾಗಿದೆಯೆಂದು ನುಡಿದರು. ಒಮ್ಮೆ ತಮ್ಮನ್ನು ಬಿಹಾರ ಕರೆಯುವಂತೆ ಎನಿಸುತ್ತಿದೆ; ಮತ್ತೊಮ್ಮೆ ಗಲಭೆಯಿಂದ ಸಂಕಷ್ಟಕ್ಕೊಳಗಾದವರ ಸೇವೆಯನ್ನು ತಾವು ಮೊಟ್ಟ ಮೊದಲು ಪ್ರಾರಂಭಿಸಿ ಆ ಕೆಲಸದಲ್ಲಿ ಯೋಗವನ್ನು ಸಾಧಿಸಲು ಪ್ರಯತ್ನಿಸಿದ ಸ್ಥಳವಾದ ನೌಖಾಲಿಗೆ ಹೋಗಬೇಕೆಂದು ತೋರುತ್ತದೆ. ಒಂದು ತಿಂಗಳ ಹಿಂದೆ ತಾವು ಪಾಟಣಾವನ್ನು ಬಿಟ್ಟಾಗ ಒಂದೇ ವಾರದೊಳಗೆ ಬಿಹಾರಕ್ಕೆ ಮರಳುವ ವಿಚಾರವಿತ್ತು. ಆದರೆ ಈ ಒಂದು ತಿಂಗಳಲ್ಲಿ ಘಟನೆಗಳು ರಭಸದಿಂದ, ಇಡಿ ತಲೆಮಾರಿನ ಕಾಲವನ್ನು ಒಂದು ತಿಂಗಳ ಅವಧಿಯಲ್ಲಿ ನುಗಿಸಿದಂತೆ, ನಡೆದಿವೆ. ಹೀಗಾಗಿ ತಾವಿಂದು ದಿಲ್ಲಿಯಲ್ಲೇ ಕೊಳೆಯುತ್ತ, ಆ ಮೂಲಕ ನೌಖಾಲಿಗೂ ಬಿಹಾರಕ್ಕೂ ಸೇವೆಸಲ್ಲಿಸಿದಂತಾಗುವದೆಂಬ ಕಲ್ಪನೆಯಿಂದ ಸಮಾಧಾನ ಪಟ್ಟುಕೊಂಡು, ಬದ್ಧರಬೇಕಾಗಿದೆ. ಇದೂ ಅಲ್ಲದೆ ಪಂಜಾಬವೂ ತಮ್ಮನ್ನು ಕರೆಯುತ್ತಿರುವಂತೆ ಭಾಸವಾಗುತ್ತಿದೆ. ಇಂಥದೇ ದಾರಿ ಹಿಡಿಯಬೇಕೆಂದು ಸಂಕೇತ ಕೊಡುವ ಧ್ರುವತಾರೆಯನ್ನೂ ತಮಗೆ ಗೋಚರವಾಗದಾಗಿದೆ. ಅದುಕಾರಣ ಅನೇಕ ವರ್ಷಗಳ ಹಿಂದೆ ತಾವು ಮನಗಂಡ "ಸಂಶಯ ಬಂದಾಗ ಇದ್ದಲ್ಲೇ ಇರು" ಎಂಬ ವಚನವನ್ನೇ ಆಶ್ರಯಿಸಬೇಕಾಗಿದೆ.

ಒಮ್ಮೆ ಜೇಲಿಗೂ ಹೋಗುವ ಮೊದಲು ಉತ್ತರ ಕಾಶಿಯನ್ನು ಸಂದರ್ಶಿಸಿ ಬರಬೇಕೆಂದು ತಮಗೆ ಮನಸ್ಸಾಗಿತ್ತೆಂದು ಗಾಂಧೀಜಿ ಮುಂದ್ವರಿಸಿದರು. ದಿವಂಗತ ಮಾಲವೀಯಜಿಯವರು ಆ ಪುಣ್ಯಕ್ಷೇತ್ರದ ಮತ್ತು ಅಲ್ಲಿ ಬಂದು ಹೋಗುವ ಯೋಗಿಗಳ ಉಜ್ಜ್ವಲ ವರ್ಣನೆಯನ್ನು ತಮ್ಮ ಮುಂದೆ ಮಾಡುತ್ತಿದ್ದರು. ಒಂದಲ್ಲ ಒಂದು ದಿನ ತಮ್ಮನ್ನು ಉತ್ತರ ಕಾಶಿಗೆ ಕರೆದೊಯ್ಯುವದೇ ಖಂಡಿತವೆಂದು ಮಾಲವೀಯಜಿಯವರು ಛಲ ತೊಟ್ಟಿದ್ದರು. ಆದರೆ ಅವರ ಜೀವಮಾನದಲ್ಲಿ ಅದು ಸಾಧಿಸಲಿಲ್ಲ. ಆದರೂ ತಾವು ಆ ಯಾತ್ರೆಯನ್ನು ಕೈಕೊಂಡರೆ ಮಾಲವೀಯಜಿಯವರ ಆತ್ಮಕ್ಕೆ, ಅದೆಲ್ಲೇ ಇದ್ದರೂ, ಅದು ತರ್ಪಣಪ್ರಾಯವಾಗುವದರಲ್ಲಿ ಸಂದೇಹವಿಲ್ಲ. ಗಾಂಧೀಜಿಯ ಈ ಬಯಕೆಯನ್ನು ಕೇಳಿದ ಸೇಠ ಘನಶ್ಯಾಮದಾಸ ಬಿರ್ಲಾರು ಈ ಯಾತ್ರೆಯನ್ನು ಪಾದಸಂಚಾರದಿಂದಲೇ ನಡೆಸಲು ಬೇಕಾಗುವ ಎಲ್ಲ ಅನುಕೂಲತೆಗಳನ್ನು ಒದಗಿಸಲು ಮುಂದೆ ಬಂದರು. ಗಾಂಧೀಜಿಗೆ ಇದೊಂದು ಹೆಚ್ಚಿನ ಪ್ರಲೋಭನವಾಯಿತು. ಆದರೆ ಹಿಮಾಲಯ ಪರ್ವತದಿಂದ ಶಾಂತಿ ಸ್ಫೂರ್ತಿಗಳನ್ನು ಸಂಪಾದಿಸಲು ಉತ್ತರ ಕಾಶಿಗೆ ತೆರಳಿದ್ದ ಮೀರಾ ಬೆನ್ನಳು ಅವರಿಗೆ ಪತ್ರಬರೆದು ಉತ್ತರ ಕಾಶಿಯ ಹವಾಮಾನ ಸೆಪ್ಟೆಂಬರದ ವರೆಗೂ ಯಾತ್ರೆಗೆ ಅನುಕೂಲವಿಲ್ಲವೆಂದು ತಿಳಿಸಿದಳು. ಅದರಿಂದ ಸದ್ಯಕ್ಕೆ ಈ ಯಾತ್ರೆಯನ್ನು ತಡೆದಿಡಬೇಕಾಯಿತು.

ತಮ್ಮ ಉತ್ತರ ಕಾಶೀ ಯಾತ್ರೆಯ ಸಮಾಚಾರವನ್ನು ಕೇಳಿ ಜನರು ಮುಂದಾಳುಗಳೊಡನೆ ಒದಗಿದ ಮತಭೇದದ ಕಾರಣದಿಂದ ತಾವು (ಗಾಂಧೀಜಿ) ಹಿಮಾಲಯಕ್ಕೆ ವಾನಪ್ರಸ್ಥ ಹೋಗುತ್ತಿರುವದಾಗಿ ತರ್ಕಿಸಿಕೊಂಡಿದ್ದಾರೆಂದು ಗಾಂಧೀಜಿ ಹೇಳಿದರು. ಮುಂದಾಳುಗಳೊಡನೆ ತಮಗೆ ಮತಭೇದಗಳಿರುವದು ನಿಜವೆಂದು ಅವರೊಪ್ಪಿದರು. ರಾಮರಾಜ್ಯದ ತಮ್ಮ ಕನಸು ನನಸಾಗುವ ಲಕ್ಷಣ ಕಾಣುವದಿಲ್ಲ. ಆದರೂ ತಾವು ಬಹಳ ಮಟ್ಟಿಗೆ ಒಂದು ಬಗೆಯ ವಿರಕ್ತಿಯನ್ನು, ಅನಾಸಕ್ತಿಯನ್ನು ಮೈಗೂಡಿಸಿಕೊಂಡಿದ್ದೇವೆ, ...ಂದಿನಿಂದಲೂ ಮಾಡುತ್ತ ಬಂದಂತೆ ಈಗಲೂ ...ಾವು ಮಾಡುತಿದ್ದೇವೆ—ಸರಿಯಾದ ದಾರಿಯ ...ಡೆಗೆ ಬೆರಳು ತೋರುತಿದ್ದೇವೆ; ಯಾರು ...ಕಲಿ ಬಿಡಲಿ, ಸತ್ಯವನ್ನು ಸಾರಿಸಾರಿ ಒದರುತ್ತೇವೆ. ಮುಂದಾಳುಗಳೂ ಸಾರ್ವಜನಿಕರನ್ನು ...ರಿತು ತಮ್ಮ ಕರ್ತವ್ಯವನ್ನು ಮಾಡಬೇಕಾ... ಅದು ಪ್ರಜಾತಂತ್ರದ ನಿಯಮ. ಜನರಿಗೆ ...ಬೇಡವಾದುದನ್ನು ಅವರು ಒತ್ತಾಯದಿಂದ ...ರಲಾರರು. ಆದುದರಿಂದಲೇ ಇಂದು ರೂಪುಗೊಳ್ಳುತ್ತಿರುವ ಹಿಂದುಸ್ತಾನದ ಚಿತ್ರ ಎಲ್ಲರೂ ...ಓಸಿದಂತಿಲ್ಲ. ಇದರಿಂದ ಎಲ್ಲರಿಗಿಂತ ಹೆಚ್ಚು ...ಗೆ ಸಂಕಟವಾಗುತ್ತಿದೆಯೆಂದು ಗಾಂಧೀಜಿ ...ತೋರಿದರು. ಕಳೆದ ಮೂವತ್ತು ವರ್ಷ...ದ ಈ ದೇಶವನ್ನು ತಾವು ತಪ್ಪು ದಾರಿ...ಒಯ್ದುಂತಾಯಿತೇ ಎಂಬ ಸಂದೇಹ ...ಮ್ಮ ತಮ್ಮನ್ನು ಬಾಧಿಸತೊಡಗಿದೆ. ನಮ್ಮ ... ಅಹಿಂಸೆ ಶೂರರ ಅಹಿಂಸೆಯಲ್ಲವೆಂದು ...ಗಲೇ ತಾವು ಅಂದುಕೊಂಡಿದ್ದೇವೆ. ಇಲ್ಲದಿದ್ದರೆ ಒಳಜಗಳಗಳನ್ನು ಬಗೆಹರಿಸಿಕೊಳ್ಳಲು ಹಿಂಸೆಯನ್ನು ನಾವು ಉಪಯೋಗಿಸುತಿದ್ದೆವೆ ಹಿಂಸಾಭಾವದಿಂದ ಗಾಳಿಯೇ ಕಲಕಿ ಹೋದಂತೆ ಕಾಣುತ್ತಿದೆ. ನಾವೆಷ್ಟೇ ಹೆಣಗಿದರೂ ಉಕ್ಕುವ ವೈಷಮ್ಯದ ಸ್ಥಾನದಲ್ಲಿ ಸ್ನೇಹಸೌಹಾರ್ದಗಳು ಉದಯಿಸುವ ಲಕ್ಷಣವಿಲ್ಲ. ಆದುದರಿಂದಲೇ ನಮ್ಮ ಹೋರಾಟ ಸಶಸ್ತ್ರ ಪ್ರತೀಕಾರದ ಮೊದಲಿನ ನಿಷ್ಕ್ರಿಯ ಪ್ರತೀಕಾರ ಮಾತ್ರವಾಗಿತ್ತೆಂದು ನಾವು ಅಂದುಕೊಳ್ಳತೊಡಗಿದ್ದೇವೆ. ಇದಕ್ಕಿಂತ ಮೊದಲಿಂದಲೇ ಹಿಂಸಾಮಾರ್ಗದಲ್ಲಿ ತರಬೇತಿ ಪಡೆದಿದ್ದರೆ ಲೇಸಾಗುತಿದ್ದಿಲ್ಲವೆ? "ಇಲ್ಲ" ಎಂದೇ ಇದಕ್ಕೆ ಉತ್ತರ. ಈ ಪ್ರಯೋಗದಿಂದ ದುರ್ಬಲರ ಅಹಿಂಸೆ ಕೂಡ ಸಾಧಕವೇ ಆಗಿದೆಯೆಂದು ತೋರಿಬಂದಿದೆ. ಶೂರರ ಅಹಿಂಸೆಯ ಒಂದು ಪ್ರದರ್ಶನವನ್ನು ತಾವು ಮಾಡಬೇಕಾಗಿದೆ. ಅದಕಾಗಿಯೇ ನೌಖಾಲಿಯಲ್ಲಿ ಮಾಡುವೆ ಇಲ್ಲವೆ ಮಡಿಯುವೆನೆಂಬ ಪಣತೊಡಬೇಕಾಯಿತು. ಈ ಶಪಥವನ್ನು ತಾವು ಪಾಲಿಸಲೇಬೇಕು.

ತಾ ೧೨ನೆ ದಿನ ಪ್ರಾರ್ಥನಾ ಸಭೆಯಲ್ಲಿ ಮಾತಾಡುವಾಗ ಅಂದು ಹಾಡಿದ ಭಜನೆಯನ್ನೇ ಎತ್ತಿಕೊಂಡು ಗಾಂಧೀಜಿ ಹೇಳಿದ್ದು: "ಈ ಭಜನೆಯಲ್ಲಿ ಕವಿ ಹೇಳಿದ್ದಾನೆ: ಜನರು ಪರಮಾತ್ಮನನ್ನೂ ಸತ್ಯವನ್ನೂ ಮರೆತು ಕ್ರೋಧ ಲೋಭಗಳಂಥ ತಮ್ಮ ಬದ್ಧ ವೈರಿಗಳನ್ನೇ ಏಕೆ ಆಳುಕೊಳ್ಳುವರೋ ತಿಳಿಯದು, ಎಂದು. ನೌಖಾಲಿಯಲ್ಲಿ ಮಾಡುವ ಇಲ್ಲವೆ ಮಡಿಯುವ ನನ್ನ ಪ್ರತಿಜ್ಞೆಯನ್ನೆ ತೆಗೆದುಕೊಳ್ಳೋಣ. ಅಲ್ಲಿಯ ಹಿಂದುಗಳ ಮಾನ ಧನ ಜೀವನಗಳ ಬಗ್ಗೆ ಲವಲೇಶ ಚಿಂತೆಯಿಲ್ಲದೆ ಹೊರಟು ಹೋಗಬಹುದು. ಹಿಂದುಗಳೂ ಮುಸ್ಲಿಮರೂ ಕೂಡಿಯೆ ನನಗೆ ಭರವಸೆ ಕೊಟ್ಟಲ್ಲದೆ ನಾನು ನೌಖಾಲಿಯಿಂದ ಹೊರಡುವಂತಿಲ್ಲವೆಂದು ಹೇಳಿದ್ದೆ. ಅಂಥ ಫಲವನ್ನು ಸಾಧಿಸಲು ನಾನಾರು? ನಾನು ಪರಮಾತ್ಮನ ದಾಸನು ಮಾತ್ರ. ಅವನ ಚಿತ್ತಕ್ಕೆ ಬಂದರೆ ನನ್ನನ್ನು ಇಂಥ ಸೇವೆಯ ನಿಮಿತ್ತವನ್ನಾಗಿ ಮಾಡಬಹುದು. ಇಲ್ಲದಿದ್ದರೆ ನೌಖಾಲಿಯಲ್ಲಿ ಮಾಡುವ ಇಲ್ಲವೆ ಮಡಿಯುವದರಿಂದಲೇ ನಾನು ಸಂತುಷ್ಟನಾಗುವೆ. ನೌಖಾಲಿಯ ಜನರನಡುವೆ ವಾಸಿಸುತ್ತ ಕೈಲಾದಷ್ಟು ಅವರ ಸೇವೆ ಮಾಡುವೆ. ನೌಖಾಲಿಯನ್ನು ಇಷ್ಟು ಹಚ್ಚಿಕೊಂಡದ್ದು ಹುಚ್ಚುತನವೆಂದು ನನ್ನ ಗೆಳೆಯರ ಮತ. ಇಡಿ ಹಿಂದುಸ್ತಾನದ ಮುಂದೆ ನೌಖಾಲಿ ಎಷ್ಟರದು? ಎಂದು ಅವರ ವಾದ. ನೌಖಾಲಿಗೇ ಅಂಟಿಕೊಳ್ಳುವ ಬದಲು ಇಡಿ ಹಿಂದುಸ್ತಾನದ ಸೇವೆಗಾಗಿ ನಾನು ನನ್ನ ಗುಣಗಳನ್ನು ವಿನಿಯೋಗಿಸಬಾರದೇಕೆಂದು ಕೇಳುವರವರು. ಹಿಂದುಸ್ತಾನದಲ್ಲಿಎಲ್ಲ ಲೇಸಾದರೆ ನೌಖಾಲಿಯಲ್ಲಿಯೂ ಆಗೇ ತೀರುವದಲ್ಲವೆ? ಆದರೆ ನನ್ನ ಹುಟ್ಟೇ ಬೇರೆ. ನನ್ನ ತಾಯಿ ನಿರಕ್ಷರಿ ಹಳ್ಳಿಗಳಾಗಿದ್ದರೂ "ಯಥಾ ಪಿಂಡ ತಥಾ ಬ್ರಹ್ಮಾಂಡ" ಎಂದು ನನಗೆ ಕಲಿಸಿದ್ದಾಳೆ. ವಿಶ್ವದ ಪ್ರತಿಬಿಂಬ ಅಣುವಿನಲ್ಲೆ ಕಾಣುತ್ತದೆ. ಸರಿಯಾದುದನ್ನೇ ಮಾಡುವಂತೆ ಎಚ್ಚರಿಕೆಯಿಂದಿರೆಂದು ನನಗೆ ಅವಳು ತಿಳಿಹೇಳಿದ್ದಾಳೆ. ನನ್ನ ವಿಶ್ವವೆಂದರೆ ನನ್ನ ಹತ್ತಿರದ ಸುತ್ತುಮುತ್ತು. ನಾನು ಅದರ ಸೇವೆಯನ್ನು ಸರಿಯಾಗಿ ಮಾಡಿದೆನೆಂದರೆ ಬ್ರಹ್ಮಾಂಡ ತಂತಾನೆ ಸರಿಹೋಗುವದು."

ನೌಖಾಲಿಗೆ ಅಗಸ್ಟ ೧೫ರೊಳಗೆ ಗಾಂಧೀಜಿ ಮರಳದೆ ಹೋದರೆ ಮುಂದೆ ಪಶ್ಚಾತ್ತಾಪಪಡಬೇಕಾದೀತೆಂದು ಅಲ್ಲಿಯ ಒಬ್ಬ ಗೆಳೆಯ ಅವರಿಗೆ ಬರೆದಿದ್ದ. ಅಗಸ್ಟ ೧೫ ಹಿಂದುಸ್ತಾನದ ವಿಭಜನೆಯ ಮತ್ತು ಬ್ರಿಟಿಶರಿಂದ ಹಿಂದೀಯರ ಕೈಗೆ ಅಧಿಕಾರ ಬರುವ ಸೀಮಾರೇಖೆ. ನಿಜವಾಗಿ ವಿಭಜನೆಯೆಂಬದು ಈಗಾಗಲೆ ನಿಶ್ಚಿತಾರ್ಥವಾಗಿದೆ. ಆದರೆ ದೇವರು ಮನುಷ್ಯ ಸಂಕಲ್ಪವನ್ನು ತಲೆಕೆಳಗು ಮಾಡಬಲ್ಲ. ಭೂಕಂಪವಾಗಿ ಇಡೀ ಹಿಂದುಸ್ತಾನವೇ ನಿರ್ದಿಷ್ಟ ದಿನಕ್ಕಿಂತ ಮೊದಲೇ ಧ್ವಂಸಗೊಳ್ಳಬಹುದು. ಅಥವಾ ವಿದೇಶೀ ಅಭಿಯೋಗವೊಂದು ಮನುಷ್ಯನ ಅಲ್ಪಬುದ್ಧಿಯ ಸುಂದರ ಹಂಚಿಕೆಗಳನ್ನು ಉರುಳಿಸಬಲ್ಲದೆಂದು ಗಾಂಧೀಜಿ ಹೇಳಿದರು.

ಆದರೆ ಮನುಷ್ಯ ಸಂಕಲ್ಪದಂತೆ ಅಗಸ್ಟ ೧೫ಕ್ಕೆ ಪಾಕಿಸ್ತಾನ ಶಾಸನ ಸಿದ್ಧ ಅಸ್ತಿತ್ವವನ್ನು ಗಳಿಸಬೇಕು. ತಾವು ನೌಖಾಲಿಯಿಂದ ಬಿಹಾರಕ್ಕೆ ಬಂದವರು. ಅಲ್ಲಿಯ ಮುಸ್ಲಿಮ ಬಾಂಧವರಿಗಾಗಿ ತಾವು ಅಷ್ಟಿಷ್ಟು ಕೆಲಸ ಮಾಡಿದ್ದೇವೆ. ಬಿಹಾರದಲ್ಲಿ ಮರಣ ಸಂಖ್ಯೆ ನೌಖಾಲಿಗಿಂತ ಹೆಚ್ಚಾಗಿತ್ತು. ಅಲ್ಲಿ ಸುಮಾರು ೧೦೦೦೦ ಜನ ಸತ್ತಿದ್ದರು. ನೌಖಾಲಿಯಲ್ಲಿ ಸತ್ತವರು ೫೦೦ ಕ್ಕಿಂತಲೂ ಕಡಿಮೆ. ಆದುದರಿಂದ ನೌಖಾಲಿಯ ದಾರಿ ಹಿಡಿಯುವ ಮೊದಲು ತಾವು ಬಿಹಾರಕ್ಕೆ ಹೋಗುವದು ಉಚಿತ. ಅಲ್ಲಿಗೆ ಆದಷ್ಟು ಬೇಗ ತಲಪುವ ಆತುರ ತಮಗಿದೆ. ದಿಲ್ಲಿಯಲ್ಲಿರುವದೆಂದರೆ ತಮಗೆ ಎಲ್ಲಿಯೊ ಹಿಡಿದುಬಿಟ್ಟಂತೆನಿಸುತ್ತಿದೆ. ಬಿಹಾರದಲ್ಲಾಗಲಿ ನೌಖಾಲಿಯಲ್ಲಾಗಲಿ ಹಾಗೆ ಎನಿಸುತ್ತಿದ್ದಿಲ್ಲ. ತಮಗೆ ಬೇಗನೆ ನೌಖಾಲಿಗೆ ಹೋಗಿ ಪ್ರತಿಜ್ಞಾಪೂರ್ತಿ ಮಾಡುವ ಅನುಕೂಲ ದೊರೆಯಲೆಂದು ಎಲ್ಲರೂ ಪ್ರಾರ್ಥಿಸಬೇಕೆಂದು ಗಾಂಧೀಜಿ ಮುಗಿಸಿದರು.

ಹೊಸದಿಲ್ಲಿ —ಸುಶೀಲಾ ನಯ್ಯರ

೧೨—೭—೪೭

ನೌಖಾಲಿ

ಗಾಂಧೀಜಿಯ ಮನಸ್ಸು ಪದೇ ಪದೇ ನೌಖಾಲಿಯ ಕಡೆಗೆ ತಿರುಗುತ್ತಲಿದೆ. ಗಾಂಧೀಜಿಯ ಸಂಗಡಿಗರಲ್ಲನೇಕರು ಮುಖ್ಯವಾಗಿ ಅನಾರೋಗ್ಯದ ದೆಸೆಯಿಂದ ನೌಖಾಲಿಯಿಂದ ಹೊರಟು ಹೋಗಿದ್ದಾರೆ. ಹವಾಮಾನವೂ ಆಹಾರವೂ ಕಾಣುವ ವಿಷಾದಮಯ ದೃಶ್ಯಗಳೂ ಕೇಳುವ ದುಃಖದಾಯಕ ವಾರ್ತೆಗಳೂ ಯಾರನ್ನಾದರೂ ಕಂಗೆಡಿಸುವಂತಿವೆ. ಅಲ್ಲಿ ಇನ್ನೂ ಇರುವವರಲ್ಲಿ ಶ್ರೀ ಪ್ಯಾರೇಲಾಲಜಿಯನ್ನೂ ಶ್ರೀ ಕನು ಗಾಂಧಿಯವರನ್ನೂ ಲೆಕ್ಕಿಸಬಹುದು. ಅವರು ಒಳ್ಳೆಯ ಕೆಲಸ ಮಾಡುತಿದ್ದಾರೆ. ಗಾಂಧೀಜಿಗಿಂತ ಮೊದಲು ನೌಖಾಲಿಗೆ ಹೋದ ಬೀಬೀ ಅಮತುಲ್ ಸಲಾಮರೂ ತಮ್ಮ ಆರೋಗ್ಯ ಕೆಟ್ಟಿದ್ದರೂ ಅಲ್ಲಿಂದ ಹಿಂತಿರುಗಲು ನಿರಾಕರಿಸಿದ್ದಾರೆ. ಅಲ್ಲದೆ ಖಾದೀ ಪ್ರತಿಷ್ಠಾನದ ದೃಢಬುದ್ಧಿಯ ಕೆಲವರು ಸತೀಶಬಾಬು ಮತ್ತು ಹೇಮಪ್ರಭಾ ದೇವಿಯವರ ನೇತೃತ್ವದಲ್ಲಿ ಕೆಲಸಸಾಗಿಸಿದ್ದಾರೆ. ಇನ್ನು ಅಝಾದ ಹಿಂದ ಸೇನೆಯ ಸರದಾರ ಜೀವನಸಿಂಗರೆಂಬ ಒಬ್ಬ ಸೀಖರೂ ತಮ್ಮ ಕಾರ್ಯವನ್ನು ಬಿಡದೆ ಅಲ್ಲೇ ಇದ್ದಾರೆ.

ನೌಖಾಲಿಯಿಂದ ಬರುತಿರುವ ಸುದ್ದಿಗಳು ಏನೂ ಸಮಾಧಾನಕರವಾಗಿಲ್ಲ. ಅದರ ಬಗ್ಗೆ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಹೇಳಿದ್ದು: "ನೌಖಾಲಿಯ ಹಿಂದುಗಳು ತಮಗೆ ಮಾತು ಕೊಟ್ಟಂತೆ ಪರಿಹಾರ ದ್ರವ್ಯದೊರಕದೆ ಹೋಗಬಹುದೆಂದೂ ಕೊಲೆ ಮೊದಲಾದುದಕ್ಕಾಗಿ ವಿಚಾರಣೆಗೊಳಗಾಗುವ ಬಗ್ಗೆ ಬಂಧಿಸಲ್ಪಟ್ಟವರು ಬಿಡುಗಡೆ ಹೊಂದಬಹುದೆಂದೂ ಭಯಪಡುತಿದ್ದಾರೆ ಅವರ ಭಯ ಅಕಾರಣವಾಗಲೆಂದು ಹಾರೈಸುತ್ತೇನೆ."

ಶ್ರೀ ಕನು ಗಾಂಧಿಯವರಿಗೆ ಬರೆದ ಒಂದು ಕಾಗದದಲ್ಲಿ ಅವರು "ನನ್ನ ದೇಹವಿಲ್ಲಿದ್ದರೂ ಹೃದಯ ನೌಖಾಲಿಯಲ್ಲಿದೆ"ಯೆಂದು ಬರೆದಿದ್ದರು. ಗಾಂಧೀಜಿಯವರಿಗೆ ಹಿಂದುಸ್ತಾನದ ರಾಜಧಾನಿಯೆಂಬದು ಅಶಾಂತಿಸದನವಾಗಿದೆ. ತಮ್ಮ ಸ್ಥಾನ ಬಿಹಾರ ಮತ್ತು ನೌಖಾಲಿಯಲ್ಲಿದೆಯೆಂದು ಅವರು ಬಗೆದಿದ್ದಾರೆ. ಆದರೂ ತಮ್ಮ ಮಿತ್ರರ ಇಚ್ಛೆಗೆ ವಿರುದ್ಧವಾಗಿ ನಡೆಯದಿರಲು ಅವರು ಸಾಧ್ಯವಾದಷ್ಟು ಪ್ರಯತ್ನಿಸುತ್ತಿದ್ದಾರೆ. "ನಾನು ನೌಖಾಲಿಯಲ್ಲಿ ಮಾಡುವೆ ಇಲ್ಲವೆ ಮಡಿಯುವನೆಂಬ ಪಣ ತೊಟ್ಟಿದ್ದೇನೆ. ಅದರ ದೃಶ್ಯದ ಮೇಲೆ ಮೋಡ ಕವಿದಿದೆ. ನಾನು ಅಲ್ಲಿ ಮಡಿಯಲೇ ಬೇಕಾಗುವದೇನೋ" ಎಂದು ಅವರು ಒಮ್ಮೆ ಸಂಭಾಷಣೆಯ ನಡುವೆ ಹೇಳಿದರು. ಅವರು ತಮ್ಮ ಸಂಗಡಿಗರನ್ನು ಬೇರೆ ಬೇರೆ ಹಳ್ಳಿಗಳಿಗೆ ಕಳಿಸಿದಾಗ ಐದಾರು ತಿಂಗಳುಗಳಿಗಿಂತ ಹೆಚ್ಚು ಕಾಲ ಅಲ್ಲುಳಿಯ ಬೇಕಾಗಲಿಕ್ಕಿಲ್ಲವೆಂದು ಹೇಳಿದ್ದನ್ನು ಗೆಳೆಯನೊಬ್ಬನು ನೆನಪಿಗೆ ತಂದುಕೊಟ್ಟನು. "ನಿಜ" ಎಂದು ಗಾಂಧೀಜಿ ಹೇಳಿದರು. "ಆದರೆ ದಕ್ಷಿಣ ಆಫ್ರಿಕೆಗೆ ನಾನು ಹೋದದ್ದು ಒಂದು ವರ್ಷದ ಮಟ್ಟಿಗೆಂದು. ಅಲ್ಲಿ ೨೦ ವರ್ಷ ಉಳಿದುಕೊಂಡೆ. ಮೂರು ದಿನದ ಮಟ್ಟಿಗೆ ಚಂಪಾರಣ್ಯಕ್ಕೆ ಹೋದವನು ಒಂದು ವರ್ಷ ಉಳಿದುಕೊಂಡೆ. ಜೀವನದಲ್ಲಿ ಯಾವುದು ನಿಶ್ಚಿತ?"

ಹೊಸದಿಲ್ಲಿ —ಸುಶೀಲಾ ನಯ್ಯರ

೧೦—೭—೪೭

ಅರಬೀ ಸಮುದ್ರದಲ್ಲಿ ಹಡಗದ ಜಲಸಮಾಧಿ!

ಸುಮಾರು ೫೫೦ ಜನ ಕಾಣೆಯಾಗಿದ್ದಾರೆ!!

ಅರಬೀ ಸಮುದ್ರದಲ್ಲಿ ಮುಂಬಯಿ ಧರ್ಮತಾರಾ ನಡುವೆ ಹಡಗವೊಂದು ಮಳೆಗಾಳಿಯ ಹೊಡೆತ ತಾಳದೆ ಜಲಸಮಾಧಿ ಹೊಂದಿತು. ಇದರಲ್ಲಿ ೭೦೦ ಪ್ರವಾಸಿಕರಿದ್ದರು. ಇವರಲ್ಲಿ ೧೫೦ ಜನರು ಜೀವಂತ ಇದ್ದು ಉಳಿದವರು ಕಾಣೆಯಾಗಿದ್ದಾರೆ.

ಯುರೋಪಿನ ಸಮಸ್ಯೆ

ಡಚ್ಚ ರಾಯಭಾರಿ ವಿಂಕಲ್ಮನ್ನರು ಮೊನ್ನೆ ಗಾಂಧೀಜಿಯನ್ನು ಕಂಡರು. ತಮ್ಮನ್ನು ರಾಯಭಾರ ಚತುರರೆಂಬುದಕ್ಕಿಂತ ದಾರ್ಶನಿಕರೆಂಬುದು ಮೇಲೆಂದು ಅವರ ಅಭಿಪ್ರಾಯವಾಗಿತ್ತು. ಅವರು ಬೇಗನೆ ಸಿಂಗಾಪುರಕ್ಕೆ ಹೊರಡುವವರಿದ್ದರು ಅವರ ಸ್ಥಾನದಲ್ಲಿ ಇಲ್ಲಿ ಬೇರೊಬ್ಬ ಬರುವವನಿದ್ದಾನೆ. ಹಿಂದುಸ್ತಾನದಲ್ಲಿ ಮಹತ್ವದ ಸಂಗತಿಗಳು ಜರುಗುತ್ತಿರುವ ಸಂಧಿಯಲ್ಲಿ ತಾವೀ ದೇಶವನ್ನು ಬಿಡಬೇಕಾಗಿ ಬಂದುದಕ್ಕೆ ಅವರಿಗೆ ವ್ಯಥೆಯಾಗಿತ್ತು ಅವರು ಗಾಂಧೀಜಿಗೆ ದೀರ್ಘಾಯುಷ್ಯವನ್ನು ಕೋರಿದರು. ಇನ್ನೂ ಮಾಡತಕ್ಕದ್ದೆಷ್ಟೋ ಇದೆ. ಎಂದರವರು. "ಇನ್ನೂ ಬಹಳ ವಿಪತ್ತುಗಳುಂಟಾಗುವದೆಂದು ನಿಮ್ಮ ನಿರೀಕ್ಷೆಯುಂಟೆ?" ಎಂದು ಅವರು ಗಾಂಧೀಜಿಯನ್ನು ಕೇಳಿದರು.

ಗಾಂಧೀಜಿ: "ನನ್ನನ್ನು ಭವಿಷ್ಯ ಕೇಳಿದರೆ ನಾವು ಶಾಂತಿ ಸಮಾಧಾನದಿಂದ ಸ್ಥಾಯಿಯಾಗಿ ನಿಲ್ಲುವ ಮೊದಲು ಇನ್ನೂ ಎಷ್ಟೋ ವಿಪತ್ತುಗಳು ಒದಗಬಹುದು."

"ನಿಮಗೆ ದೇವರಲ್ಲಿ ವಿಶ್ವಾಸವುಂಟು ಅತಿಥಿ ಹೇಳಿದ ಹಿಂದುಸ್ತಾನ ಸರಿಯಾದ ದಾರಿಯಲ್ಲಿ ಸಾಗುತಿದೆಯೆಂದೆನಿಸಿದರೆ ನಿಮ್ಮ ಮನಸಿಗೆ ಶಾಂತಿ ದೊರಕಿಯೆ ತೀರುವದು. ಯುರೋಪು ಮಾತ್ರ ಸರಿದಾರಿಯಲ್ಲಿ ನಡೆಯುತ್ತ ಇಲ್ಲ. ಯುರೋಪಿಗೆ ಬಂದಿರುವ ದೊಡ್ಡ ಆಪತ್ತೆಂದರೆ ಅದು ಕ್ರಿಸ್ತಧರ್ಮವನ್ನು ತ್ಯಜಿಸಿದೆ."

"ನಿಜ, ಎಷ್ಟೋ ದಿನಗಳಿಂದ ನನಗೆ ಹಾಗೆ ಅನಿಸುತಿದೆ," ಗಾಂಧೀಜಿ ಉತ್ತರವಿತ್ತರು.

"ಯುರೋಪಿನ ಪರಿಸ್ಥಿತಿಯ ಬಗೆಗೆ ನಿಮ್ಮ ವಿಚಾರವೇನು?" ಅತಿಥಿ ಪ್ರಶ್ನಿಸಿದರು.

ಗಾಂಧೀಜಿ; "ನಾನೇನೂ ವಿಚಾರಿಸಿಲ್ಲ. ಅದು ನನಗೆ ನಿಲುಕದಾಗಿದೆ. ಅದು ಬಹಳ ತೊಡಕು ತೊಡಕಾದ ಸಂಗತಿ."

"ಹೌದು ಅದೊಳ್ಳೆ ಜಟಿಲವಾಗಿದೆ." ಅತಿಥಿ ಒಪ್ಪಿದರು. "ನಾನು ೧೯೩೯ರಲ್ಲಿ ಯುರೋಪಿನಲ್ಲಿ ಡಾ. ಮಲಾನರನ್ನು ಭೆಟ್ಟಿಯಾಗಿದ್ದೆ. ನಾನು ಯುರೋಪಿನ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದೆ. ಮಲಾನರು ಯುರೋಪಿನ ಭವಿಷ್ಯದ ಬಗ್ಗೆ ನಿರಾಶಾವಾದಿಗಳಾಗಿದ್ದರು. ಏಕೆಂದು ಕೇಳಿದರೆ ಅವರು ನುಡಿದದ್ದು: 'ಯುರೋಪು ಧರ್ಮಭ್ರಷ್ಟವಾಗಿದೆ. ಲೌಕಿಕವೆ ಶ್ರೇಷ್ಠವೆಂಬ ತತ್ವಜ್ಞಾನ ಅಲ್ಲಿ ಪೂರ್ತಿ ಬೇರುಬಿಟ್ಟಿದೆ. ದೇವರ ಹಂಗಿಲ್ಲದೆ ಬೇಕಾದ್ದು ಮಾಡಬಹುದೆಂದು ಜನರು ಬಗೆದಿದ್ದಾರೆ. ಅವರು ತಪ್ಪಿನ ಮೇಲೆ ತಪ್ಪು ಮಾಡುತ್ತಿದ್ದಾರೆ. ಇದರಿಂದ ಇನ್ನೊಂದು ಮಹಾ ವಿಪ್ಲವ ಬರುವದು ಖಂಡಿತ.' ಅವರೆಂದುದು ನಿಜವಾಯಿತು. ಧರ್ಮವನ್ನು ವ್ಯವಹಾರದಿಂದ ಬೇರ್ಪಡಿಸಿ ದ್ವಿಧಾಜೀವನವನ್ನು ನಡೆಸಬಹುದೆಂದು ಜನರು ತಿಳಿದಿದ್ದಾರೆ. ಅದು ಸಾಧ್ಯವಿಲ್ಲ."

"ಬಹಳ ಕಾಲದಿಂದ ನಾನೂ ಇದೇ ಅಭಿಪ್ರಾಯದವನಿದ್ದೇನೆ," ಗಾಂಧೀಜಿ ಮಾರುತ್ತರವಿತ್ತರು.

ಹೊಸದಿಲ್ಲಿ —ಸುಶೀಲಾ ನಯ್ಯರ

೧೦—೭—೪೭

ಭಾಷಾನ್ವಯಪ್ರಾಂತರಚನೆ

ಸಾಮಂತ ಸರಕಾರ ಸಮಿತಿಯನ್ನು ನೇಮಿಸಬೇಕು

ಭಾಷಾನ್ವಯ ಪ್ರಾಂತಗಳನ್ನು ರಚಿಸುವ ಆಯಾ ಭಾಗದವರ ಹಕ್ಕುಬಾಧ್ಯತೆಗಳನ್ನು ವಿಚಾರ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಬೇಕೆಂದು ೧೪ನೇ ತಾರೀಕು ಹೊಸದಿಲ್ಲಿಯಲ್ಲಿ ಸೇರಿದ್ದ ಘಟನಾ ಸಮಿತಿಯ ಒಕ್ಕೂಟ ಕಮಿಟಿ ಮತ್ತು ಪ್ರಾಂತಿಕ ಘಟನಾ ಕಮಿಟಿಯ ಸಂಯುಕ್ತ ಸಭೆಯಲ್ಲಿ ಶಿಫಾರಸು ಮಾಡಲಾಯಿತೆಂದು ತಿಳಿಯುತ್ತದೆ.

ಅಗಸ್ಟ ೧೫ ನೇ ತಾರೀಖಿಗೆ ಸಾಮಂತ ಸರಕಾರ ಅಸ್ತಿತ್ವದಲ್ಲಿ ಬಂದ ಕೂಡಲೆ ಈ ಸಮಿತಿಯನ್ನು ನೇಮಿಸತಕ್ಕದ್ದು.

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯ ಬೂಟ ವ್ಯಾಪಾರಿಗಳಾದ ಮಹಮ್ಮದ ದಾದಾರವರು ಓರ್ವ ಕುಮಾರಿಯ ಮಾನಭಂಗ ಮಾಡಲು ಪ್ರಯತ್ನಿಸಿದರೆಂದು ಹಾಕಿದ ಖಟ್ಲೆ ಧಾರವಾಡ ಜಿಲ್ಲಾ ಸೆಶನ್ಸ ಕೋರ್ಟಿನಲ್ಲಿ ಪ್ರಾರಂಭವಾಗಿದೆ.

ಪ್ರಾಥಮಿಕ ಪ್ರಮಾಣ ಪತ್ರದ ಪುರವಣಿ ಪರೀಕ್ಷೆಗಳನ್ನು ಅಕ್ಟೋಬರ ೧೯೪೭ ರಲ್ಲಿ ಮತ್ತು ೧೯೪೮ ರ ಎಪ್ರಿಲದಲ್ಲಿ ಜರುಗಿಸಬೇಕೆಂದು ಸರಕಾರದವರು ನಿರ್ಧರಿಸಿದ್ದಾರೆ. ಮುಂದಿನ ವರುಷ ಅಭ್ಯಾಸಕ್ರಮದಲ್ಲಿ ಬದಲಾವಣೆಯಾದ್ದರಿಂದ ಹಳೆ ಅಭ್ಯಾಸ ಕ್ರಮದನ್ವಯ ಈ ಎರಡೂ ಪರೀಕ್ಷೆಗಳು ನಡೆಯುವವು. ಹಳೆಯ ವಿದ್ಯಾರ್ಥಿಗಳಷ್ಟೇ ಈ ಪುರವಣಿ ಪರೀಕ್ಷೆಗಳಿಗೆ ಕೂಡ್ರಬಲ್ಲರು.

ಧಾರವಾಡ ಜಿಲ್ಲಾ ಲೋಕಲ್ ಬೋರ್ಡ ಅಧ್ಯಕ್ಷರಾದ ಶ್ರೀ ಬಿ. ಆರ್. ತಂಬಾಕದ ಇವರು ಚುನಾವಣೆಯ ಕಾಲಕ್ಕೆ ಮತ್ತು ಅಧ್ಯಕ್ಷ ರಾಯ್ಕೆಯ ಕಾಲಕ್ಕೆ ಕಾಂಗ್ರೆಸ್ಸಿನ ಶಿಸ್ತಿಗೆ ವಿರುದ್ಧವಾಗಿ ವರ್ತಿಸಿದರೆಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಅವರನ್ನು ಮೂರು ವರ್ಷ ಪ್ರಾಥಮಿಕ ಸದಸ್ಯತ್ವಕ್ಕೆ ಅನರ್ಹರನ್ನಾಗಿ ಮಾಡಿದರು. ಅನಂತರ ಅವರು ಕಾಂಗ್ರೆಸ ಸದಸ್ಯರಾದರೆ ಮುಂದೆ ಎರಡು ವರ್ಷ ಯಾವದೇ ಹೊಣೆಗಾರ ಸ್ಥಳ ಅವರಿಗೆ ಕೊಡಬಾರದೆಂದೂ ಚುನಾವಣೆಗಳು ಆರಿಸಬಾರದೆಂದೂ ವಿಧಿಸಲಾಗಿದೆ.

ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಇಂಟರ ಆರ್ಟ್ಸ ವರ್ಗದಲ್ಲಿ ಅಭ್ಯಾಸ ಮಾಡುತಿರುವ ಶ್ರೀ ಎಂ. ಎಚ್. ಗಟ್ಸಿರಡ್ಡ್ಯಾಳರು ಪ್ಯಾರಿಸಿನಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ವಿದ್ಯಾರ್ಥಿ ಪಂದ್ಯಾಟಗಳಲ್ಲಿ ಭಾಗವಹಿಸಲು ಅಗಸ್ಟ ಮೊದಲನೆಯ ವಾರದಲ್ಲಿ ಅಲ್ಲಿಗೆ ಹೋಗುವರು.

ಅಖಿಲ ಭಾರತ ಭಾವಸಾರ ಕ್ಷತ್ರಿಯ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಉತ್ತೂರಕರ ರಾಮಚಂದ್ರರಾಯರು ಧಾರವಾಡದಲ್ಲಿಯ ಕೃಷ್ಣಾಜಿ ಟಕಾರೆ ಬೋರ್ಡಿಂಗಿಗೆ ೬೦೦೦ ರೂ. ಕೊಡಿಸಿರುವರು.

ವಿಜಾಪುರ ಜಿಲ್ಲಾ ಸ್ಕೂಲ ಬೋರ್ಡಿನ ನಿವೃತ್ತ ಅಡ್ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀ ಕೆ. ವಿ. ಕುಲಕರ್ಣಿಯವರು ತಮ್ಮ ಪ್ರಿಯ ಪುತ್ರಿ ಇಂದುಮತಿಯ ಸ್ಮರಣಾರ್ಥ ಬಳಗಾನೂರಿನ ಕನ್ನಡ ಶಾಲೆಯ ವಾಚನಾಲಯಕ್ಕೆ ೩೦ ರೂ. ಮತ್ತು ಹೆಣ್ಣುಮಕ್ಕಳ ವಾಚನಾಲಯಕ್ಕೆ ೬ ರೂಪಾಯಿ ಬೆಲೆಯ ಪುಸ್ತಕಗಳನ್ನು ಕೊಡಿಸಿರುವರು.

ಧಾರವಾಡ ಕಿಲ್ಲೆಯ ಭಾಗದಲ್ಲಿ ಮಾರಿಕಾದಿಂದ ಒಂದು ಮರಣ ಸಂಭವಿಸಿದ್ದರಿಂದ ನಗರಸಭೆಯವರು ಕಿಲ್ಲೆ ಹಾಗು ಅದರ ಸುತ್ತುಮುತ್ತು ಡಿ. ಡಿ. ಟಿ. ಹೊಡೆಯುವ ವ್ಯವಸ್ಥೆ ಮಾಡಿದ್ದಾರೆ.

ಸರ್ಕಲ್ಲಿರ ಹುಕುಮಿನನ್ವಯ ನರೇಗಲ್ಲಿನ ಹಗೆಗಳನ್ನು ತೆಗೆಯಿಸಿ ಜೋಳ ಜಪ್ತಮಾಡುವ ಕ್ರಮ ಸಾಗಿದೆ.

ಧಾರವಾಡ ಜಿಲ್ಹೆಯಲ್ಲಿಯ ನಾನ್ ಅಥಾರಿಟಿ ಮುನಿಸಿಪಾಲಿಟಿಗಳ ವತಿಯಿಂದ ರಾಣೇಬೆನ್ನೂರ ಮುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಎಸ್. ಕೆ. ಬಣಗಾರರು ಧಾರವಾಡ ಜಿಲ್ಲಾ ಸ್ಕೂಲ ಬೋರ್ಡ ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ಎಂ. ಎಸ್. ಎಂ. ರೇಲ್ವೆ ಕಾಮಗಾರ ಸಂಘದ ಹುಬ್ಬಳ್ಳಿ ಶಾಖೆಯ ೧೯ನೆಯ ವಾರ್ಷಿಕ ಅಧಿವೇಶನ ಜುಲೈ ೨೬ ಮತ್ತು ೨೭ ಕ್ಕೆ ಮಹಾಮಂಡಳದ ಅಧ್ಯಕ್ಷರಾದ ಮಹಮ್ಮದ ಅಬ್ದುಲ್ಲಾ ಇವರ ಅಧ್ಯಕ್ಷತೆಯಲ್ಲಿ ಜರಗುವದು. ಪ್ರಸಿದ್ಧ ಸಾಮ್ಯವಾದಿ ಮುಖಂಡರಾದ ಅಶೋಕ ಮೇಥಾ ಇವರು ಪರಿಷತ್ತಿನ ಪ್ರಾರಂಭೋತ್ಸವ ಜರುಗಿಸುವರು.

ಲಂಡನದಲ್ಲಿ ಜರಗುವ ಸಾಮ್ರಾಜ್ಯ ಅರಣ್ಯ ಪರಿಷತ್ತಿಗಾಗಿ ಭಾರತದ ಪ್ರತಿನಿಧಿಗಳೆಂದು ಪುಣೆಯಲ್ಲಿಯ ಕಾನ್ಸರ್ವೇಟರ ಆಫ್ ಫಾರೆಸ್ಟ ಯುಟಿಲಾಯಿಝೇಶನ ಸರ್ಕ್ಕಲ್ ಆದ ಶ್ರೀ ಶಂಕರರಾವ ನಾರಾಯಣರಾವ ಕೇಸರಕೊಪ್ಪಯವರು ಹೋದರು. ಇವರು ಧಾರವಾಡದವರು

ಪುಣೆಯಿಂದ ಬೆಂಗಳೂರ ಕಡೆಗೆ ಹೊರಟ ನಾಲ್ಕು ಡೌನ ಪ್ಯಾಸೆಂಜರಗಾಡಿ ೧೫ ನೆಯ ತಾರೀಖು ರಾತ್ರಿ ೧೦ ಗಂಟೆ ಸುಮಾರಿಗೆ ಚಂಚಲಿ ರಾಯಬಾಗ ನಿಲ್ದಾಣಗಳ ನಡುವೆ ಬರುವಾಗ ಎಂಜಿನ ಹಾಗು ಅದರ ಹಿಂದಿನ ೭ ಡಬ್ಬಿಗಳು ಹಳಿಯಿಂದ ಉರುಳಿ ಅಪಘಾತಕ್ಕೀಡಾಯಿತು. ೩೦ ಜನರಿಗೆ ಗಾಯಗಳಾದವು ೬ ಜನರನ್ನು ಆಸ್ಪತ್ರೆಯಲ್ಲಿಡಲಾಗಿದೆಂದು ಮುಂತಾಗಿ ಡಿ. ಟಿ. ಎಸ್. ಟಿ. ಯವರ ಪ್ರಕಟನೆ.

ಹುಬ್ಬಳ್ಳಿಯ ಡಾ. ಎಸ್. ಎಂ. ಕಾಮತರ ಅಧ್ಯಕ್ಷತೆಯಲ್ಲಿ ಧಾರವಾಡಜಿಲ್ಲಾ ವೈದ್ಯಕೀಯ ವ್ಯವಸಾಯಗಾರರ ಸಭೆ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ೧೩ ನೆಯ ತಾರೀಖು ಸೇರಿ ಮುಂಬಯಿ ಸರಕಾರದವರು ಆದಷ್ಟು ತೀವ್ರ ವೈದ್ಯಕೀಯ ಕಾಲೇಜನ್ನು ಹುಬ್ಬಳ್ಳಿಯಲ್ಲಿ ತೆರೆಯಬೇಕೆಂದು ಬಿನ್ನವಿಸುವ ಗೊತ್ತುವಳಿ ಸ್ವೀಕೃತವಾಯಿತು.

ವಿಜಾಪುರ

ಕೆರೂರಲ್ಲಿ ಮಲೇರಿಯಾ ಬಹಳವಿದ್ದು ಸಾವಿರಾರು ಜನ ಅದರಿಂದ ಹಾಸಿಗೆ ಹಿಡಿದಿದ್ದಾರೆ. ಜೂನ ತಿಂಗಳಲ್ಲಿ ೫೫ ಜನರು, ಈ ತಿಂಗಳಲ್ಲಿ ಈಗಾಗಲೆ ೩೦ ಜನರು ಮರಣ ಹೊಂದಿರುವರು. ಅಧಿಕಾರಿಗಳೂ ಸ್ಥಳೀಯರೂ ಇತ್ತ ಲಕ್ಷ್ಯ ಪೂರೈಸಬೇಕು.

ಮಣಿನಾಗರದ ಶ್ರೀಮಂತರೂ ಸ್ಕೂಲ ಬೋರ್ಡ ಸದಸ್ಯರೂ ಆದ ಶ್ರೀ ಮಲ್ಲನಗೌಡ ರಂಗನಗೌಡ ಪಾಟೀಲ ಅವರ ಕೊಲೆ ಮಾಡಿದ ಸಂಬಂಧದಲ್ಲಿ ಬಸನಗೌಡ ಭೀಮನಗೌಡ ಪಾಟೀಲ, ರಾಮಚಂದ್ರಗೌಡ, ಶಂಕರಗೌಡ ಭೀಮನಗೌಡ, ಭೀಮಪ್ಪಾ ಮಾದರ, ರಾಜೇಸಾಹೇಬ ಇಮಾಮಸಾಹೇಬ, ಹನಮಪ್ಪ ಮಾದರ ಅಗಸರಕೊಪ್ಪ ಈ ೬ ಜನರ ಮೇಲೆ ಹಾಕಿದ ಖಟ್ಲೆಯಲ್ಲಿ ಬಸನಗೌಡ ಪಾಟೀಲ ಇವರಿಗೆ ಗಲ್ಲು ಉಳಿದ ೫ ಜನರಿಗ ಕರಿನೀರಿನ ಶಿಕ್ಷೆ ಮತ್ತು ೧ ವರ್ಷ ಕಠಿನ ಶಿಕ್ಷೆ ವಿಧಿಸಲಾಗಿದೆ.

ಪುಣೆ ಸ್ಮಾಲಕಾಜ ಕೋರ್ಟಿನ ನಿವೃತ್ತ ನ್ಯಾಯಾಧೀಶ ರಾ. ಬ. ವಿ. ಆರ್. ಮಂಗಳವೇಡೆ ಇವರನ್ನು ವರ್ಕಮನ್ಸ ಕಾಂಪೆನ್ಸೇಶನ್ ಕಮೀಶನರರ ತಾತ್ಕಾಲಿಕ ಸ್ಥಳಕ್ಕೆ ನೇಮಿಸಲಾಗಿದೆ.

ವಿಜಾಪೂರ ಜಿಲ್ಹೆಯಲ್ಲಿ ಧಾನ್ಯ ಖರೀದಿ ಅಧಿಕಾರಿಗಳಾಗಿದ್ದ ಹುಸೇನಖಾನ ಸರದಾರಖಾನ ಎಂಬವರು ಉಕ್ಕಲಿ ಹಳ್ಳಿಯಿಂದ ೬೦ ಚೀಲ ಜೋಳ ಖರೀದಿ ಮಾಡಿದ್ದೇನೆಂದು ಸುಳ್ಳು ಹೇಳಿ ೧೦೦ ರೂಪಾಯಿ ಎತ್ತಿ ಹಾಕಿದ ಆರೋಪಕ್ಕಾಗಿ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ೧ ದಿನ ಶಿಕ್ಷೆ ಮತ್ತು ೧೦೦ ರೂ. ದಂಡ ವಿಧಿಸಿದ್ದರು. ಆದರೆ ಹಾಯಕೋರ್ಟಿನಲ್ಲಿ ೬ ತಿಂಗಳ ಶಿಕ್ಷೆ ಮತ್ತು ೫೦೦ ರೂ. ದಂಡವನ್ನು ವಿಧಿಸಲಾಯಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಈ ಖಟ್ಲೆಯನ್ನು ಹಾಯಕೋರ್ಟಿನಲ್ಲಿ ಪುನರ್ವಿಮರ್ಶೆಗೆ ಕಳಿಸಿದ್ದರು.

ಬೆಳಗಾವಿ

ಗೋಕಾಕ ತಾಲೂಕ ಡೆವಲಪ್‌ಮೆಂಟ ಅಸೋಸಿಯೇಶನಕ್ಕೆ ರಾ. ಸಾ. ಅಪ್ಪಾಸಾಹೇಬ ದೇಶಪಾಂಡೆಯವರೇ ಮತ್ತೆ ಅಧ್ಯಕ್ಷರಾಗಿಯೂ ಹೋದ ಸಲದವರೇ ಪುನಃ ಕಾರ್ಯಕಾರಿ ಮಂಡಳದಲ್ಲಿಯೂ ಆರಿಸಿಬಂದಿರುವರು.

ಬೆಳಗಾವಿಯಲ್ಲಿ ಶ್ರೀ ಅಜಗಾಂವಕರ ಹಾಗು ಕೃಷ್ಣರಾವ ದೇಶಪಾಂಡೆಯವರು ೭ನೆಯ ತಾರೀಕು ಸಭೆ ಸೇರಿಸಿ ಪುರೋಗಾಮಿ ಪಕ್ಷದ ಭೂಮಿಕೆ ಹಾಗು ತತ್ವಗಳನ್ನು ತಿಳಿಸಿ ಕೆಲವರನ್ನು ಸಭಾಸದರನ್ನಾಗಿ ಮಾಡಿದರು.

ಸವದತ್ತಿಯಲ್ಲಿ ಶ್ರೀ ಕೆ. ಕೆ. ಗಲಗಲಿಯವರು ಬರೆದ ಮಹಾನುಭಾವಿ ಬಸವಣ್ಣವರ ಕ್ರಾಂತಿ ಕಾರ್ಯ ಎಂಬ ಹೊತ್ತಿಗೆಯ ಉದ್ಘಾಟನ ರಾ.ಸಾ. ಎಂ. ಪಿ. ವಾಲಿಯವರ ಹಸ್ತದಿಂದ ಜರುಗಿತು.

ಇದೇ ಮುಂಗಾರಿ ಸುಗ್ಗಿಯಲ್ಲಿ ಬೆಳಗಾವಿ, ಸಾತಾರೆ, ಪುಣೆ ಮತ್ತು ಅಹಮದನಗರ ಜಿಲ್ಹೆಗಳಲ್ಲಿ ಗೆಣಸು ಬೆಳೆಯನ್ನು ಹೆಚ್ಚಿಸುವ ಹೊಸ ಯೋಜನೆಗೆ ಮುಂಬಯಿ ಸರಕಾರದ ಒಪ್ಪಿಗೆ ದೊರೆತಿದ್ದು ಅದಕ್ಕಾಗಿ ಸುಮಾರು ೨ ಲಕ್ಷ ರೂ. ವೆಚ್ಚ ತಗಲಬಹುದೆಂಬ ಅಂದಾಜಿದೆ. ಈಸಾರೆ ಬಿತ್ತುವ ಕ್ಷೇತ್ರವನ್ನು ಸಾವಿರ ಎಕರೆಗಳಿಂದ ಹೆಚ್ಚಿಸಿ ಪ್ರತಿ ಎಕರೆಯೂ ಉತ್ತಮ ಬೆಳೆ ಕೊಡುವಂತೆ ಯತ್ನಿಸಲಾಗುವದು.

ಪ್ರಾಥಮಿಕ ಶಾಲಾ ಅಭ್ಯಾಸ ಕ್ರಮ

ಪ್ರಾಥಮಿಕ ಶಾಲಾ ಪ್ರಶಸ್ತಿ ಪರೀಕ್ಷೆಯ ಅಭ್ಯಾಸ ಕ್ರಮದಲ್ಲಿ ಸೇರಿಸಲಿದ್ದ ಹೆಚ್ಚಿನ ವಿಷಯಗಳಿಗೆ ಮುಂಬಯಿ ಸರಕಾರದ ಸಮ್ಮತಿ ದೊರೆತಿದೆ. ಈ ಶಾಲೆಗಳ ೫-೬-೭ ನೇ ಇಯತ್ತೆಗಳಲ್ಲಿ ಕಲಿಯಬೇಕಿದ್ದ ಹೆಚ್ಚಿನ ವಿಷಯಗಳಲ್ಲಿ ಬಡಿಗತನ ಕಾಗದ ಮತ್ತು ರಟ್ಟಿನ ಆಕೃತಿಗಳನ್ನು ರಚಿಸುವದು ಚಿತ್ತದ ಕೆಲಸ ಹೊಲಿಗೆ ಮತ್ತು ಚರ್ಮದ ಕೆಲಸಗಳು ಸಮಾವೇಶವಾಗಿವೆ.

ಕನ್ನಡ ಸಂಸ್ಥಾನ

ಮಿರಜ ಸಂಸ್ಥಾನದ ಐದು ಜನ ಅಧಿಕಾರಿಗಳ ಮೇಲೆ ನಾಲ್ಕು ನೂರು ಚೀಲ ಸಕ್ಕರೆಯನ್ನು ಕಳ್ಳಪೇಟೆಯಲ್ಲಿ ಮಾರಿದರೆಂಬ ಆರೋಪದ ಮೇಲೆ ಗುಲಾಲ ಚಿನುವಾದರೆಂಬವರು ಖಟ್ಲೆ ಹಾಕಿದ್ದರಷ್ಟೇ. ಆದರೆ ಈ ಖಟ್ಲೆಗೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಮೊದಲು ತೆಗೆದುಕೊಂಡಿಲ್ಲೆಂದು ಹೇಳಿ ಖಟ್ಲೆಯನ್ನು ತಿತ್ತುಹಾಕಲಾಯಿತು.

ಡ್ಯಾ. ಮಾನೆಯವರು ಕೊಲ್ಹಾಪುರ ಸಂಸ್ಥಾನದಲ್ಲಿ ಮಂತ್ರಿಗಳಾದ್ದರಿಂದ ಘಟನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಮುಂಬಯಿ ಶಾಸನ ಸಭಾ ಸದಸ್ಯತ್ವಕ್ಕೆ ಇನ್ನೂ ರಾಜೀನಾಮೆ ಕೊಟ್ಟಿಲ್ಲ.

ಮುಧೋಳ ಸಂಸ್ಥಾನದ ರಾಜರಾದ ಶ್ರೀಮಂತ ಭೈರವಸಿಂಗ ರಾಜರ ಪಟ್ಟಾಭಿಷೇಕ ಮಹೋತ್ಸವ ಮುಧೋಳದ ಹಳೆಯ ಅರಮನೆಯಲ್ಲಿ ಜುಲೈ ೧೦ ಕ್ಕೆ ವಿಜೃಂಭಣೆಯಿಂದ ಜರುಗಿತು. ರಾಜೇಸಾಹೇಬರು ಭಾಷಣ ಮಾಡುತ್ತ ಪ್ರಜೆಗಳ ಆಶೆಆಕಾಂಕ್ಷೆಗಳನ್ನು ಪೂರಯಿಸಲು ಸಮರ್ಥನಾಗಬಲ್ಲೆ ಎಂಬುದಾಗಿ ಹೇಳಿದರು. ರಾಜೇಸಾಹೇಬರು ಹೆಚ್ಚಿನ ಅಭ್ಯಾಸಕ್ಕಾಗಿ ಪುಣೆಗೆ ಹೋಗಲಿರುವದರಿಂದ ಆಡಳಿತ ಮಂಡಳವನ್ನು ನೇಮಿಸಲಾಗುವದು.

ಮೂಳವಾದ ಪ್ರಶ್ನೆ ಬಿಟ್ಟು ಹೊರತು ಕೊಲ್ಹಾಪುರ ಸಂಸ್ಥಾನ ಘಟನಾ ಸಮಿತಿಯಲ್ಲಿ ಸೇರುವದಿಲ್ಲೆಂದು ಅಲ್ಲಿನ ಘಟನಾ ಸಲಹೆಗಾರರಾದ ಶ್ರೀ ಲಕ್ಕಿಯವರು ಹೇಳಿರುವರು. ನಿಪ್ಪಾಣಿ ಮೊದಲಾದ ಪ್ರದೇಶವನ್ನು ಸಂಸ್ಥಾನ ತಿರುಗಿ ಕೇಳುವದೋ ಎಂದು ಕೇಳಿದ್ದಕ್ಕೆ ಅದಕ್ಕಿಂತ ಮೂಳವಾದ ಪರಿಸ್ಥಿತಿ ಬೇರೆ ಇದೆಯೆಂದು ಅವರು ಹೇಳಿದರು. ಸಂಸ್ಥಾನ ಸರಕಾರ ಸೈನ್ಯವನ್ನು ಹೆಚ್ಚಿಸುತಿದೆಯೆಂಬ ಸುದ್ದಿಯನ್ನು ಅವರು ಅಲ್ಲಗಳೆದರು.

ಶ್ರೀ ಬಿ. ಎಂ. ಮುನವಳ್ಳಿಯವರು ದಕ್ಷಿಣ ಸಂಸ್ಥಾನಗಳ ಪರವಾಗಿ ಘಟನಾ ಸಮಿತಿಗೆ ಆರಿಸಿ ಬಂದಿರುವರು. ಇವರಿಗೆ ೧೦ ಮತಗಳು, ಔಂಧದ ಯುವರಾಜ ಶ್ರೀಮಂತ ಅಪ್ಪಾಸಾಹೇಬ ಪಂತರಿಗೆ ೯ ಮತಗಳು ಬಿದ್ದವು. ಈ ಸಲದ ಘಟನಾ ಸಮಿತಿಯಲ್ಲಿ ಉಪಸ್ಥಿತರಾಗಲು ಶ್ರೀ ಮುನವಳ್ಳಿಯವರು ದಿಲ್ಲಿಗೆ ಹೋಗಿರುವರು.

ಬೆಳ್ಳಟ್ಟಿಯಲ್ಲಿ ಸಾಂಗಲಿ ಸಂಸ್ಥಾನದ ಅಭಿವೃದ್ಧಿ ಮಂತ್ರಿಗಳಾದ ಶ್ರೀ ಪಾಟೀಲರ ಅಧ್ಯಕ್ಷತೆಯಲ್ಲಿ ೧೧ ಕ್ಕೆ ಶಿರಹಟ್ಟಿ ತಾಲೂಕ ಸಹಕಾರಿ ಕಾರ್ಯಕರ್ತರ ಪರಿಷತ್ತು ಜರುಗಿತು. ಶಿಕ್ಷಣ ಮಂತ್ರಿಗಳಾದ ಶ್ರೀ ಡಿ. ಆರ್. ದೇಶಪಾಂಡೆಯವರು ಪರಿಷತ್ತಿನ ಉದ್ಘಾಟನ ಮಾಡಿದರು. ಕಾರ್ಯಕರ್ತರು ತಮ್ಮ ಅಡಚಣೆಗಳನ್ನು ನಿವೇದಿಸಿ ಪರಿಹಾರೋಪಾಯಗಳನ್ನು ತಿಳಿದುಕೊಂಡರು.

ದ್ವಾರನಕುಂಟೆಯ ಸುಮಾರು ೮೦ ಜನರು ೭ ನೇ ತಾರೀಖು ಹದನಾದ ಆಯುಧಗಳಿಂದ ಹಿರಿಯೂರ ತಾಲೂಕಿನ ಸಕ್ಕರಪಳ್ಳಿಯ ಮೇಲೆ ದಾಳಿ ಮಾಡಿ ಶ್ರೀ ಗಿರಿಯಪ್ಪ ಹಾಗು ಬೇರೆ ಇಬ್ಬರನ್ನು ಗಾಯಗೊಳಿಸಿ ಒಂದು ಬಟ್ಟೆ ಅಂಗಡಿ ಎರಡು ಗುಡಿಸಲುಗಳನ್ನು ಲೂಟಿ ಮಾಡಿಕೊಂಡು ಹೋಗಿರುವರು. ಉದರ ನಿರ್ವಾಹಕ್ಕೆ ಇಲ್ಲದ್ದರಿಂದಲೆ ಈ ರೀತಿ ದರೋಡೆ ಹಾಕಿತೆಂದು ತಿಳಿಯುತ್ತದೆ.

ಬೆಳಗಾವಿ ಜಿಲ್ಹೆಯ ಗಡಿ [illegible]ರಲ್ಲಿ [illegible]

ಬೆಳಗಾವಿ ಜಿಲ್ಲಾ ಅ. ಕ. [illegible] ಸಂಘದ ಅಧ್ಯಕ್ಷರಿಂದ ಡಾ. [illegible] ಕೆಳಗಿನ ಪ್ರಕಟನೆ ಕಳಿಸಿದ್ದಾರೆ.

ಬೆಳಗಾವಿ ಜಿಲ್ಹೆ ಗಡಿ [illegible] ಅದರಲ್ಲಿಯೂ ವಿಶೇಷತಃ ಬೆಳಗಾವಿ, [illegible], ಹುಕ್ಕೇರಿ, ಖಾನಾಪುರ, ಮತ್ತು [illegible] ತಾಲೂಕಿನ ಭಾಗದ ಜನರು ತಂತಮ್ಮ [illegible] ದಿನ ಉತ್ಪತ್ತಿಯನ್ನು ಹಿರಿಯರಿಂದ [illegible] ಗಲಿ ದಂತ ಕಥೆ ಅಥವಾ ಇತಿಹಾಸ [illegible] ವುಗಳಿಂದ ಗೊತ್ತು ಹಚ್ಚಿಯಾಗಲಿ [illegible] ತೀವ್ರ ನನ್ನ ವಿಳಾಸಕ್ಕೆ ಕಳಿಸಿಕೊಡಬೇಕಾಗಿ ವಿನಂತಿಯಿದೆ.

ಉದಾಹರಣಾರ್ಥ ಬೆಳಗಾವಿ ತಾಲೂಕಿನ ಸಮೀಪದಲ್ಲಿ ನಾಲ್ಕಾರು [illegible] ಹಳ್ಳಿಗಳು ಕೂಡಿ ಕೂಡ-ಹಳ್ಳಿ, ಕೂಡ್ಲಳ್ಳಿ, [illegible] ಯಾಗಿದೆ. ಇದರಿಂದ ಮೇಲಿನ ಹಳ್ಳಿಯ [illegible] ವೆಂದು ಕಂಡು ಹಿಡಿಯ ಬಹುದು.

ಉತ್ತರ ಕನ್ನಡ


ಮಾಹಾಲಿ ಸುಂಕದ ಕಚೇರಿಯಲ್ಲಿದ್ದ ಒಬ್ಬ ಜಮಾದಾರನು ೧೦೦ ರೂಪಾಯಿ ಲಂಚ ತೆಗೆದುಕೊಂಡು ೬ ಬಟ್ಟೆ ಗಂಟುಗಳನ್ನು ಬಿಟ್ಟನೆಂಬ ಆರೋಪದ ಮೇಲೆ ಲಂಚನಿರ್ಮೂಲನ ಶಾಖೆಯವರು ಸೆರೆಹಿಡಿದಿದ್ದಾರೆ. ಲಂಚನಿರ್ಮೂಲನ ಶಾಖೆಯ ಸಬ್ ಇನಸ್ಪೆಕ್ಟರರಾದ ಶ್ರೀ ಅರೂರರು ಈ ಗಂಟುಗಳನ್ನು ಹೊರುವ ಆಳುಗಳಾಗಿದ್ದರು. ಗುರುತು ಮಾಡಿದ ನೋಟುಗಳನು ಜಮಾದಾರನಿಗೆ ಕೊಡಲಾಗಿತ್ತು. ಬಟ್ಟೆ ಗಂಟು ಬ್ರಿಟಿಶ ಹದ್ದು ದಾಟಿ ಗೋವೆಯ ಹದ್ದನ್ನು ಸೇರಿದ ಕೂಡಲೆ ಶ್ರೀ ಅರೂರರು ತಮ್ಮ ಖಾಜ ವೇಷವನ್ನು ತೋರಿಸಿ ಜಮಾದಾರನನ್ನು ಬಂಧಿಸಿದರು.

ಸಿರ್ಸಿಯಲ್ಲಿ ವಿದ್ಯುತ್ ಕಂಪನಿಯನ್ನು ಸ್ಥಾಪಿಸುವ ವಿಚಾರ ನಡೆದಿದ್ದು ಇದಕ್ಕಾಗಿ ೫ ಲಕ್ಷ ರೂಪಾಯಿ ಬೇಕಾಗುವವೆಂದು ಅಂದಾಜು ಮಾಡಲಾಗಿದೆ. ಷೇರಕ್ಕೆ ೧೦೦ ರೂಪಾಯಿಗಳ ೨ ಸಾವಿರ ಪಾಲುಗಳಿಂದ ೨ ಲಕ್ಷ ರೂಪಾಯಿ ಕೂಡಿಸಬೇಕೆಂದು ಗೊತ್ತುಪಡಿಸಲಾಗಿದೆ. ಜನಸಾಮಾನ್ಯರಿಗೂ ಪಾಲು ತೆಗೆದುಕೊಳ್ಳಲನುಕೂಲವಾಗುವಂತೆ ಪಾಲಿನ ಹಣವನ್ನು ಕಡಿಮೆ ಮಾಡಬೇಕೆಂದು ಕೋರಲಾಗಿದೆ.

ಉಪ್ಪಿನ ಕರ ರದ್ದಾಗಿದ್ದರೂ ಉಪ್ಪಿನ ದರ ದಿನದಿನಕ್ಕೆ ಏರಹತ್ತಿದೆ. ಕರವಿದ್ದಾಗ ಖಂಡಿಗೆ ೩—೧೪—೦ ದರವಿದ್ದರೆ ಈಗ ಅದು ೬-೧೦-೦ ಇದೆ. ಉತ್ತರ ಕನ್ನಡ ಜಿಲ್ಹೆಯಲ್ಲಿಯ ಸಾಣೆಕಟ್ಟೆ ಉಪ್ಪಿನ ಮಡಿಗಳಿಂದಲೆ ಈ ಭಾಗಕ್ಕೆ ಉಪ್ಪನ್ನು ಒದಗಿಸಲಾಗುತ್ತದೆ.

ಬಳ್ಳಾರಿ

ಹರಪನಹಳ್ಳಿ ಕರ್ನಾಟಕ ವಿದ್ಯಾರ್ಥಿ ವಾಚನಾಲಯದ ಪ್ರಥಮ ವಾರ್ಷಿಕೋತ್ಸವವು ವಿದ್ವಾನ ರಾಮರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಭಾಷಣ ಸಂಗೀತ ವಿವಿಧ ವಿನೋದಾವಳಿ ಮೊದಲಾದವುಗಳು ನಡೆದವು. ಶ್ರೀ ಎಂ. ಬಿಂದೂ ಮಾಧವಾಚಾರ್ಯರು ಉದ್ಘಾಟನ ಮಾಡಿದರು.



ಮುಂಬಯಿ

ಮುಂಬಯಿಯ ಜವಳಿ ಗಿರಣಿಯ ಸುಮಾರು ೧೫೦೦ ಜನರು ತಾ. ೧೪ ರಂದು ಸಂಪು ಹೂಡಿ ದರು. ಪೋಲೀಸ ಸಬ್ಇನ್ಸ್ಪೆಕ್ಟರ ಕಾಯಿದೆ ಯಂತೆ ಒಬ್ಬ ಕೆಲಸಗಾರನನ್ನು ಬಂಧಿಸಿ ಮುಂಬ ಯಿಯಿಂದ ಗಡಿಪಾರುಮಾಡಿದ್ದೇ ಈ ಸಂಪಿಗೆ ಕಾರಣವೆಂದು ತಿಳಿಯುತ್ತದೆ.

ಹಿಂದುಸ್ಥಾನ ಸಾಮ್ಯವಾದೀ ಪಕ್ಷದ ಮುಖಂ ಡರಾದ ಶ್ರೀ ಜಯಪ್ರಕಾಶ ನಾರಾಯಣರು ತಾ ೧೩ ರಲ್ಲಿ ಮುಂಬಯಿಯಲ್ಲಿ ರಾಷ್ಟ್ರೀಯ ಮುಸ ಲ್ಮಾನರನ್ನುದ್ದೇಶಿಸಿ ಮಾತನಾಡುತ್ತ ಜಾತೀಯ ಕೆಳಪಡಿಯ ಪಕ್ಷಗಳು ಹೋಗಬೇಕೆಂದರು.

ಮುಂಬಯಿ ಸರಕಾರದ ಗೃಹಮಂತ್ರಿಗಳು ತಾ ೧೨ ರಲ್ಲಿ ಮುಂಬಯಿಯ ಹಿಂದು ಯುವಕ ಸಂಘದಲ್ಲಿ ಮಾತಾಡುತ್ತ ಎಲ್ಲ ಜನರಿಗೂ ಸರಕಾ ರವು ಶಸ್ತ್ರಾಸ್ತ್ರ ಶಿಕ್ಷಣ ಕೊಡಲಿರುವುದೆಂದೂ ಆ ಪ್ರಕಾರ ಶಸ್ತ್ರಾಸ್ತ್ರ ಕಾಯಿದೆಯಲ್ಲಿ ತಿದ್ದುಪಡಿ ಮಾಡಲಾಗುವದೆಂದೂ ಹೇಳಿದರು.

ಪುಣೆಯ ಲಂಡ ನಿರ್ಮೂಲನ ಶಾಖೆಯವರು ಲಂಚದ ಸಂಬಂಧದಲ್ಲಿ ಇತ್ತೀಚೆಗೆ ೧೬ ಜನರನ್ನು ಹಿಡಿದಿದ್ದು ಅವರಲ್ಲಿ ಧಾರವಾಡ ಜಿಲ್ಹೆಯ ಒಬ್ಬ ಪೋಲೀಸ ಜಮಾದಾರರು, ಪೂರ್ವ ಖಾನದೇಶ ಜಿಲ್ಹೆಯ ಒಬ್ಬ ಅಸಿಸ್ಟಂಟ್ ಸ್ಟೇಶನಮಾಸ್ತರರು ಪುಣೆ ಜಿಲ್ಹೆಯ ಒಬ್ಬ ಸಬ್ ಇನ್ಸ್ಪೆಕ್ಟರರು, ರತ್ನ ಗಿರಿಯ ಒಬ್ಬ ಶಿರಸ್ತೇದಾರರು ಮತ್ತು ಮುಂಬ ಯಿಯ ಒಬ್ಬ ಓವರಸೀಯರರು ಇರುವರು.

ಕೈಮಗ್ಗ ಇಲ್ಲವೆ ಯಾಂತ್ರಿಕ ಮಗ್ಗಗಳಲ್ಲಿ ತಯಾರಾದ ಬಟ್ಟೆಗಳನ್ನು ಮುಂಬಯಿ ಪ್ರಾಂತದ ಹೊರಗೆ ಕಳಿಸಲು ಅಪ್ಪಣೆಯಿಲ್ಲೆಂದು ಸೀಪಾ ಸಾರ್ವಜನಿಕ ಸಂಬಂಧ ಅಧಿಕಾರಿಗಳು ಪ್ರಕಟ ಮಾಡ್ತಾರೆ.

ಮಹಾರಾಷ್ಟ್ರ ಹಿಂದು ಸಭೆಯ ಕಾರ್ಯಾಧ್ಯಕ್ಷ ರಾದ ಶ್ರೀ ಜಿ. ವಿ. ಕೇತಕರರು ಹಿಂದೀ ಒಕ್ಕೂ ಟಕ್ಕೆ ಹಿಂದುಸ್ಥಾನವೆಂದು ಹೆಸರಿಡಬೇಕೆಂದು ಬಿನ್ನೈಸಿದ್ದಾರೆ.

ಮುಂಬಯಿಯ ಮುಖ್ಯ ಪ್ರಧಾನರು ತಾ ೧೨ ರಲ್ಲಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಈಗ ರಶಿಯಾದಲ್ಲಿ ನಿಯೋಜಿತ ಭಾರತ ರಾಯಭಾರಿ ಗಳಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸ್ವತಂತ್ರ ಹಿಂದುಸ್ಥಾನವು ಯಾವಾಗಲೂ ಜಾಗ ತಿಕ ಶಾಂತಿಗಾಗಿ ತನ್ನ ವರ್ಚಸ್ಸನ್ನು ಉಪ ಯೋಗಿಸುವದೆಂದು ತಮ್ಮ ಭಾಷಣದಲ್ಲಿ ಹೇಳಿ ದರು.

ಭತ್ತದ ಬೆಳೆಗೆ ಗೊಬ್ಬರವೆಂದು ೪ ಲಕ್ಷ ರೂಪಾಯಿಯ ಅಮೋನಿಯಂ ಸಲ್ಫೇಟನ್ನು ಹಂಚುವ ಸೂಚನೆಯನ್ನು ಸರಕಾರದವರು ಮಾನ್ಯಮಾಡಿ ರೈತರಿಗೆ ಅದನ್ನು ನೂರು ರೂಪಾ ಯಿಗೆ ೧ ಟನ್ನಿನಂತೆ ಹಂಚಲು ತಿಳಿಸಿದ್ದಾರೆ.

ಕೈಗಾರಿಕೆಯ ಉದ್ಯೋಗಗಳನ್ನು ಪ್ರಾರಂಭಿ ಸಲು ಇಲ್ಲವೆ ಅಭಿವೃದ್ಧಿಗೊಳಿಸಲು ನಿರುದ್ಯೋಗಿ ಸುಶಿಕ್ಷಿತರಿಗೆ ೧೦೦೦ ರೂಪಾಯಿಗೆ ಕಡಿಮೆಯಿ ಲ್ಲದೆ ಧನ ಸಹಾಯ ಒದಗಿಸಲು ಮುಂಬಯಿ ಸರ ಕಾರವು ನಿರ್ಧರಿಸಿದೆ. ಸಹಾಯ ಪಡೆಯಲಿಚ್ಛಿ ಸುವವರು ನಿರ್ದಿಷ್ಟ ನಮೂನೆಗಳಲ್ಲಿ ಜಾಯಿಂಟ ರಜಿಸ್ಟ್ರಾರರಿಗೆ ಅರ್ಜಿ ಕಳಿಸಬೇಕು. ನಮೂನೆ ಗಳು ಅವರಲ್ಲಿಯೆ ಸಿಗುವುವು.

ಬಂಗಾಲ

ನೇತಾಜಿ ಸುಭಾಷಚಂದ್ರ ಬೋಸರ ಧ್ಯೇಯ, ಧೋರಣ ಮತ್ತು ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಒಂದು ಕ್ರಾಂತಿಕಾರಕ ರಾಜಕೀಯ ಪಕ್ಷವನ್ನು ಸಂಘಟಿಸಲು ಅದನ್ನು ಬೇಗನೆ ಅಗತ್ಯವಿದ್ದ ವ್ಯವಸ್ಥೆ ಮಾಡಲು ಶ್ರೀ ಶರಚ್ಚಂದ್ರ ಬೋಸರಿಗೆ ತಾ ೧೩ ರಲ್ಲಿ ಕಲಕತ್ತೆ ಯಲ್ಲಿ ಕೂಡಿದ ರಾಜಕೀಯ ಪರಿಷತ್ತಿನಲ್ಲಿ ಅಧಿ ಕಾರ ಕೊಡಲಾಯಿತು.

ಸೆಯಾಮದಿಂದ ೭೦೦೦ ಟನ್ ಅಕ್ಕಿಯನ್ನು ತುಂಬಿಕೊಂಡು ಮೊದಲನೆಯ ಹಡಗು ಕಲಕ ತ್ತೆಗೆ ಬಂದಿದೆ. ಆ ಎಲ್ಲ ಅಕ್ಕಿಯನ್ನು ಬಂಗಾ ಲಕ್ಕೆ ಕೊಡಲಾಗಿದೆ.

ಪೂರ್ವ ಪಾಕಿಸ್ಥಾನದ ಕಚೇರಿಗಳನ್ನು ಢಾಕಾ ನಗರಕ್ಕೆ ಸ್ಥಳಾಂತರಿಸುವ ಕೃತಿ ಈಗಾ ಗಲೇ ಆರಂಭವಾಗಿರುವುದು. ಅಗಸ್ಟ ೧೫ ರೊಳಗಾಗಿ ಅದು ಪೂರ್ಣವಾಗಬಹುದು.

ತಾ ೧೪ ರಲ್ಲಿ ಕಲಕತ್ತೆಯಲ್ಲಿ ಇಬ್ಬರು ಸತ್ತಿದ್ದು ಮೂವರಿಗೆ ಗಾಯಗಳಾದವು.

ಕಲಕತ್ತೆಯಲ್ಲಿ ತಾ ೧೧ ರ ದಿನ ೨೦ ಘಟನೆ ಗಳು ಸಂಭವಿಸಿ ೩ ಜನರು ಸತ್ತಿದ್ದು ೧೪ ಜನರಿಗೆ ಗಾಯಗಳಾದವೆಂದು ಬಂಗಾಲ ಸರಕಾರದ ಪ್ರಕ ಟನೆ ಹೊರಟಿದೆ. ಈ ಸಂದರ್ಭದಲ್ಲಿ ೬೦ ಜನ ರನ್ನು ಬಂಧಿಸಲಾಗಿದೆ.

ಸುಮಾರು ೪೦೦ ರಾಜಕೀಯ ರಾಜಕೀಯ ಕೈದಿಗಳೆಲ್ಲರನ್ನೂ ಒಮ್ಮೆಲೆ ಬಿಟ್ಟು ಕೊಡಬೇ ಕಿಲ್ಲ ಎಂಬ ನಿರ್ಣಯಕ್ಕೆ ಬರಬೇಕೆಂದು ಬಂಗಾ ಲದ ಛಾಯಾ ಮಂತ್ರಿ ಮಂಡಲ ವಿಚಾರ ನಡೆಸಿದ ಳೆಂದು ಸುದ್ದಿ.

ಮದ್ರಾಸ

ಮದ್ರಾಸ ಸರಕಾರದ ಅಹಾರ ಮಂತ್ರಿಗಳಾದ ಶ್ರೀ ಗೋಪಾಲ ರೆಡ್ಡಿಯವರು ಪತ್ರಿಕಾ ಪ್ರತಿ ನಿಧಿಗಳಿಗೆ ತಾ ೧೨ ರಲ್ಲಿ ಮದ್ರಾಸಿನ ಆಹಾರ ಪರಿ ಸ್ಥಿತಿಯು ಅಗಸ್ಟ ಮಧ್ಯದಿಂದ ಅಕ್ಟೋಬರ ಕೊನೆಯ ವರೆಗೆ ಬಹಳ ಕಠಿನವಿರುವದೆಂದೂ ಕೇಂದ್ರದಿಂದ ಆಹಾರ ಧಾನ್ಯ ಬರುವುದು ನಿಂತು ಹೋಗಿದೆಯೆಂದೂ ಹೇಳಿದರು.

ಮದ್ರಾಸ ಪ್ರಾಂತದಲ್ಲಿಯ ಅಯ್. ಎಂ. ಎಸ್. ರನ್ನು ನಾಗರಿಕ ಶಾಖೆಗಳಲ್ಲಿ ಸೇರಿಸಿಕೊ ಳ್ಳಬಾರದೆಂಬು ತಮ್ಮ ಅಭಿಪ್ರಾಯವಾಗಿದೆ ಯೆಂದು ಮದ್ರಾಸ ಸರಕಾರವು ಕೇಂದ್ರ ಸರಕಾ ರಕ್ಕೆ ತಿಳಿಸಿದೆಯಲ್ಲದೆ ತಮ್ಮ ಪ್ರಾಂತದಲ್ಲಿಯ ಅಯ್. ಎಂ. ಎಸ್. ನಲ್ಲಿರುವ ಡಾಕ್ಟರರು ಸೈನ್ಯ ಶಾಖೆಯಲ್ಲಿ ಮುಡಿಯಲು ಸಿದ್ಧರಿರುವರೋ ಇಲ್ಲವೆ ಪರ ಪ್ರಾಂತಕ್ಕೆ ಹೋಗಬಯಸುವರೋ ಎಂಬುದನ್ನು ತಿಳಿಸಬೇಕೆಂದು ಆಜ್ಞಾಪಿಸಿದೆ.

ಮದ್ರಾಸು ಪ್ರಾಂತದಲ್ಲಿ ಮೋಟಾರು ಸಾರಿಗೆ ಯನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಮದ್ರಾಸ ಸರಕಾರದವರು ಪಂಚವಾರ್ಷಿಕ ಸಭೆ ಯೊಂದನ್ನು ತಯಾರಿಸಿದ್ದಾರೆ. ಇದಕ್ಕೆ ೧೦ ಕೋಟಿ ಯಷ್ಟು ರೂಪಾಯಿ ಬೀಳಬಹುದೆಂದೂ ಇದರ ಮೊದಲ ಹೆಜ್ಜೆಯೆಂದು ಅಕ್ಟೋಬರ ೧ ರಿಂದ ಮದ್ರಾಸು ನಗರದಲ್ಲಿಯ ಎಲ್ಲ ಮೋಟಾ ರುಗಳನ್ನೂ ೬೭ ಲಕ್ಷ ರೂಪಾಯಿಕೊಟ್ಟು ವಶ ಪಡಿಸಿಕೊಳ್ಳುವರು.

ಹಿಂದುಸ್ಥಾನ ಮತ್ತು ಪಾಕಿಸ್ಥಾನ ಘಟನೆ ಗಳಲ್ಲಿ ಹರಿಜನರಿಗೆ ಸಾಕಷ್ಟು ಸಂರಕ್ಷಣೆಗಳಿರ ಬೇಕು ಮತ್ತು ಸಿಂಹಳ, ಮೊದಲಾದ ದೇಶಗ ಳಲ್ಲಿ ರಾಯಭಾರಿಗಳನು ನಿಯಮಿಸುವಾಗ ಹರಿ ಜನರಿಗೆ ಪ್ರಾಶಸ್ತ್ಯವಿರಬೇಕೆಂಬು ಮುಂತಾದ ಗೊತ್ತುವಳಿಗಳು ಶ್ರೀ ಮುನಿಸ್ವಾಮಿ ಪಿಳ್ಳೆಯ ವರ ಅಧ್ಯಕ್ಷತೆಯಲ್ಲಿ ಸೇರಿದ್ದ ಮದ್ರಾಸ ಪ್ರಾಂತಿಕ ಹರಿಜನ ಪರಿಷತ್ತಿನಲ್ಲಿ ಸ್ವೀಕೃತವಾ ದವು.

ಬಿಹಾರ

ಅಖಿಲ ಭಾರತ ಮೋಮಿನ ಪರಿಷತ್ತಿನ ಕಾರ್ಯ ಕಾರಿ ಸಮಿತಿಯವರು ತಾ. ೧೪ ರಲ್ಲಿ ಅಬ್ದುಲ ಕೈಯೂಮ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಪಾಟಣಾದಲ್ಲಿ ಕೂಡಿ ಮೋಮಿನರು ಹಿಂದೀ ರಾಷ್ಟ್ರೀಯ ಸಭೆಯ ಸಭಾಸದರಾಗತಕ್ಕದ್ದ ಲ್ಲೆಂದು ಹಾಕಲಾಗಿದ್ದ ನಿರ್ಬಂಧವನ್ನು ಹಿಂತೆ ಗೆದುಕೊಂಡರು.

ಬಿಹಾರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸಭೆಯು ಶ್ರೀ ಮಹಾಮಾಯಾ ಪ್ರಸಾದರ ಅಧ್ಯ ಕ್ಷತೆಯಲ್ಲಿ ತಾ. ೧೨ ರಲ್ಲಿ ಪಾಟಣಾದಲ್ಲಿ ಸೇರಿ ಕಾಂಗ್ರೆಸ್ಸನ್ನು ಬಲಪಡಿಸುವ ವಿಷಯವನ್ನು ಚರ್ಚಿಸಿತು.

ಸಿಂಧ

ಹಿಂದುಸ್ಥಾನ ಸರಕಾರವು ಈಗ ಸಿಂಧದಿಂದ ತರಿಸಿಕೊಳ್ಳುತ್ತಿರುವ ಗೋದಿಯ ಆಧಾರನ್ನು ಭಾವಿ ಹಿಂದುಸ್ಥಾನ ಒಕ್ಕೂಟಸರಕಾರವು ಮನ್ನಿ ಸುವದೆಂಬ ಆಶ್ವಾಸನ ದೊರೆಯುವ ವರೆಗೆ ಸಿಂಧ ಪ್ರಾಂತವು ಗೋದಿಯ ನಿರ್ಯಾತವನ್ನು ನಿಲ್ಲಿಸಿದೆ.

ಸಕ್ಕರ ಜಿಲ್ಹೆಯ ರೋಹರಿಯ ಹತ್ತಿರ ವಿರುವ ಸಿಯಾಲಗ್ರಾಮದಲ್ಲಿ ಒಬ್ಬ ಹೆಡ್‌ಕಾನ ಸ್ಟೇಬಲ್ಲನು ಉನ್ಮತ್ತನಾಗಿ ತನ್ನ ಹೆಂಡತಿ ಮತ್ತು ಅತ್ತೆಯನ್ನು ಗುಂಡಿನಿಂದ ಕೊಂದದ್ದಲ್ಲದೆ ತನ್ನ ಮಾವನನ್ನೂ ಗಾಯಗೊಳಿಸಿ ತಾನೇ ಪೋಲೀ ಸರ ವಶವಾದನು.

ಯುಕ್ತಪ್ರಾಂತ

೧೪ ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಅಯೋಧ್ಯಾ ರಾಜ್ಯವನ್ನು ಪುನಃ ಅದಕ್ಕೆ ಬಾಧ್ಯಸ್ಥರಾದ ಅಯೋಧ್ಯೆಯ ನವಾಬರವಂಶಜ ರಿಗೆ ಮರಳಿ ದೊರಕಿಸುವ ಬಗ್ಗೆ ಚಳವಳಿ ಪ್ರಾರಂಭವಾಗಿದೆಯೆಂದೂ ಈಗ ಯುಕ್ತ ಪ್ರಾಂತದಲ್ಲಿ ಸೇರಿರುವ ೧೨ ಜಿಲ್ಹೆಗಳನ್ನು ತಮಗೆ ಕೊಡಬೇಕೆಂದು ತಮ್ಮಂತವರೆಂದು ಕೊಳ್ಳುವ ಕೆಲವು ನವಾಬರು ತಾ. ೮ ರಲ್ಲಿ ಸಾರ್ವ ಜನಿಕ ಸಭೆಯೊಂದರಲ್ಲಿ ಹೇಳಿದರು.

ಹೊಸದಿಲ್ಲಿ

ಸರದಾರ ವಲ್ಲಭಭಾಯಿ ಪಟೇಲರು ತಾ. ೧೫ ರಲ್ಲಿ ಘಟನಾ ಸಮಿತಿಯಲ್ಲಿ ಪ್ರಾಂತಿಕ ಘಟನಾ ಉಪಸಮಿತಿಯ ವರದಿಯನ್ನೊಪ್ಪಿಸಿದರು.

ಭಾರತ ಸೈನ್ಯವನ್ನು ಪಾಕಿಸ್ಥಾನ ಹಿಂದುಸ್ಥಾನ ಗಳಲ್ಲಿ ಹಂಚಿಕೊಟ್ಟದ್ದನ್ನು ವಿಭಜನಾ ಸಮಿತಿ ಯವರು ಒಪ್ಪಿಕೊಂಡರೆಂದು ಜನರಲ್ ಹೆಡ್ ಕ್ವಾರ್ಟರ್ಸಿಗೆ ತಿಳಿದು ಬಂದಿದೆ.

ಹಿಂದುಸ್ಥಾನ ಘಟನಾ ಸಮಿತಿಯ ೪ ನೆಯ ಹಾಗೂ ಬಹುಶಃ ಕೊನೆಯ ಅಧಿವೇಶನವು ತಾ. ೧೪ ರಲ್ಲಿ ಅತ್ಯಂತ ಸ್ನೇಹಮಯ ವಾತಾವರಣ ದಲ್ಲಿ ಹೊಸದಿಲ್ಲಿಯಲ್ಲಿ ಸೇರಿತು. ಘಟನಾ ಸಮಿ ತಿಯು ಇನ್ನೊಮ್ಮೆ ಸೇರುವ ಮೊದಲು ಹಿಂದು ಸ್ಥಾನ ಸಾಮಂತ ಸರಕಾರದ ಪಾರ್ಲಿಮೆಂಟಾಗಿ ಪರಿವರ್ತಿತವಾಗಲಿರುವುದು.

ಪಾಕಿಸ್ಥಾನದ ನಿಯೋಜಿತ ಗವರ್ನರ ಜನರಲ್ಲ ರಾದ ಬ್ಯಾ. ಜಿನ್ನಾರು ತಮ್ಮ ಪಾಕಿಸ್ಥಾನದ ರುಚಿಯನ್ನು ಹೊಸದಿಲ್ಲಿಯಲ್ಲಿ ತಾ. ೧೩ ರಲ್ಲಿ ಸೇರಿದ ಸುದ್ದಿಗಾರರ ಸಭೆಯಲ್ಲಿ ತೋರಿಸಿದರು. ಸುದ್ದಿಗಾರರೊಡನೆ ಚಕಮಕಿ ನಡೆಸಿ ವಿಕ್ಷಿಪ್ತ ಉತ್ತರಗಳನ್ನಿತ್ತು "ಏನು ಉತ್ತಮ ಪ್ರಶ್ನೆಗಳೇ ಇಲ್ಲ" ಎಂದು ಕೋಣೆಯಿಂದ ಹೊರಬಿದ್ದರು.

ಪ. ಆಫ್ರಿಕದ ಲೈಬೇರಿಯಾ ಪ್ರಜಾ ಸರಕಾ ರವು ಜುಲೈ ೨೪ ರಿಂದ ಅಗಸ್ಟ ೧೧ ರ ವರೆಗೆ ರಾಜಧಾನಿಯಾದ ಮೊನ್ರೊವಿಯಾದಲ್ಲಿ ನಡೆ ಯುವ ಶತಸಾಂವತ್ಸರಿಕ ಸ್ವಾತಂತ್ರ್ಯೋತ್ಸವಕ್ಕೆ ಹಿಂದುಸ್ಥಾನಕ್ಕೆ ಆಮಂತ್ರಣ ಕೊಟ್ಟದ್ದನ್ನು ಮಾನ್ಯಮಾಡಿ ದಿಲ್ಲಿಯ ಪ್ರೊ. ಮಹಮ್ಮದ ಮುಜೀಬರನ್ನು ಉತ್ಸವಕ್ಕೆ ಹಿಂದುಸ್ಥಾನ ಸರಕಾ ರದ ಪ್ರತಿನಿಧಿಯಾಗಿ ಕಳಿಸಲಾಗುತ್ತದೆ.

ಹಿಂದುಸ್ಥಾನ ಒಕ್ಕೂಟದಲ್ಲಿ ಬರುವ ಪ್ರಾಂತ ಗಳ ಈಗಿನ ಗವರ್ನರರು ಅಗಸ್ಟ ೧೫ ರ ನಂತರ ಹೊಸ ವ್ಯವಸ್ಥೆ ಮಾಡುವ ವರೆಗೆ ತಮ್ಮ ಅಧಿ ಕಾರದಲ್ಲಿ ಉಳಿಯುವರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ.

ಆಸಾಮ

ಸಿಲ್ಹಟ ಮತಗಣನೆಯಲ್ಲಿ ವಿಜಯ ದೊರಕಿ ತೆಂದು ಸ್ಥಳೀಯ ಮುಸ್ಲಿಮರು ವಿಜಯ ದಿನವ ನ್ನಾಚರಿಸಿದರು. "ಹಿಂದು ಮುಸಲ್ಮಾನರು ಸಹೋದರರು ಹಾಗೂ ಪಾಕಿಸ್ಥಾನ ಝಿಂದಾ ಬಾದ" ಎಂದು ಘೋಷಿಸಿದರು. ಜಿಲ್ಹೆಯಲ್ಲಿ ಶಾಂತಿಯನ್ನು ನೆಲೆಗೊಳಿಸಲು ಲೀಗ ಮುಖಂ ಡರು ವ್ಯವಸ್ಥೆ ಮಾಡುತ್ತಿದ್ದಾರೆ.

ಪಂಜಾಬ

ಪಂಜಾಬ ವಿಭಜನಾ ಸಮಿತಿಯವರು ಸದ್ಯಕ್ಕೆ ಪೂರ್ವ ಪಂಜಾಬದ ಹೈಕೋರ್ಟು ಲಾಹೋರಿನ ಲ್ಲಿಯೇ ಈಗಿನ ಹೈಕೋರ್ಟಿನ ಒಂದು ಭಾಗದಲ್ಲಿ ಇರಬೇಕೆಂದು ನಿರ್ಧರಿಸಿದ್ದಾರೆ.

ಲಾಹೋರದಲ್ಲಿ ತಾ. ೧೩ ರ ದಿನ ಜಾತೀಯ ಗಲಭೆಯ ಪರಿಸ್ಥಿತಿಯು ತೀರ ಹದಗೆಟ್ಟಿತೆಂದೂ ಪಟ್ಟಣದ ೨೨ ಭಾಗಗಳಲ್ಲಿ ಜ್ವಾಲೆಗಳಿದ್ದವೆಂದೂ ಮೊತೀಗೇಟಿನಲ್ಲಿ ಪೋಲೀಸರು ಗುಂಡು ಹಾರಿಸಿ ದಾಗ ಆಸ್ಫೋಟಗಳಾದವೆಂದೂ ತಿಳಿದುಬಂದಿದೆ.

ಪಂಜಾಬಿನ ಅಹ್ರಾರ ಪಕ್ಷದ ಮುಖಪತ್ರ ವಾದ ಅಝಾದ ದೈನಿಕವು ಆಕ್ಷೇಪಕರ ಲೇಖ ಗಳೆರಡನ್ನು ಪ್ರಸಿದ್ಧಪಡಿಸಿದ ಕಾರಣ ಪಂಜಾಬ ಸರಕಾರವು ಆ ಪತ್ರಿಕೆಯನ್ನು ೧೪ ದಿನಗಳ ವರೆಗೆ ಹೊರಡಿಸಲಾಗದೆಂದು ಆಜ್ಞಾಯಿಸಿದ್ದಾರೆ.

ಮಲ್ಲಿಕ ಫಿರೋಜಖಾನನೂನರೊಂದು ಪ್ರಕಟ ಣೆಯನ್ನು ಹೊರಡಿಸಿ ಅದರಲ್ಲಿ ಪಶ್ಚಿಮ ಮತ್ತು ಪೂರ್ವ ಪಂಜಾಬುಗಳಿಗೆ ಸತಲಜ ನದಿಯು ಗಡಿಯಾಗಿರಬೇಕೆಂದೂ ಅದಾದ ಹೊರತು ಹಿಂದುಸ್ಥಾನ ಮತ್ತು ಪಾಕಿಸ್ಥಾನಗಳಲ್ಲಿ ಶಾಂತತೆ ಉಳಿಯಲಾರದೆಂದೂ ಹೇಳಿದ್ದಾರೆ.

ಲಾಹೋರಿನ ಮೊಗಲಪುರದಲ್ಲಿ ತಾ. ೧೦ ರ ದಿನ ಎನ್. ಡಬ್ಲ್ಯು. ವರ್ಕಶಾಪಿನ ಮುಂದೆ ದೊಡ್ಡ ಸ್ಫೋಟವಾಗಿ, ಅನಂತರ ಹೊಡೆದಾಟ ನಡೆದು ೬ ಜನರು ಸತ್ತರು ಮತ್ತು ೪೦ ಜನರು ಗಾಯಗೊಂಡರು.

ಸೀಖರ ಒಕ್ಕಟ್ಟನ್ನು ಕಾಪಾಡುವಂತೆ ಪಂಜಾ ಬಿನ ವಿಭಜನೆಯಾಗದಿದ್ದರೆ ಸೀಖರು ಅದನ್ನು ಸ್ವೀಕರಿಸುವುದಿಲ್ಲೆಂಬ ಗೊತ್ತುವಳಿ ಲಾಹೋರ ದಲ್ಲಿ ತಾ. ೮ ರಲ್ಲಿ ಸೇರಿದ ಸೀಖರ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಸ್ವೀಕೃತವಾಯಿತು.

ಮಧ್ಯಪ್ರಾಂತ

ಮಧ್ಯಪ್ರಾಂತ ಸರಕಾರದವರು ಅಗಸ್ಟ ೧೫ ನೆಯ ದಿವಸ ಸ್ವಾತಂತ್ರ್ಯದ್ಯೋತಕವಾಗಿ ಹೀನ ಅಪರಾಧಿಗಳನ್ನುಳಿದು ಮಿಕ್ಕವರನ್ನೆಲ್ಲ ಬಂಧ ಮುಕ್ತ ಮಾಡಲು ನಿರ್ಧರಿಸಿರುವರೆಂದೂ ಇತರ ಪ್ರಾಂತಿಕ ಸರಕಾರಗಳಿಗೂ ಈ ರೀತಿ ಮಾಡಲು ಸೂಚಿಸಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಬರೆದಿರುವರೆಂದೂ ತಿಳಿಯುತ್ತದೆ.

ಮಧ್ಯಪ್ರಾಂತ ಮಂತ್ರಿಮಂಡಲದವರು ಪ್ರಾಂ ತದಲ್ಲಿಯ ಸರಕಾರಿ ಹೈಸ್ಕೂಲುಗಳಲ್ಲಿ ಇಂಗ್ಲೀ ಷಿನ ಮುಖಾಂತರ ಶಿಕ್ಷಣ ಕೊಡುವುದನ್ನು ನಿಲ್ಲಿಸಿ ಬಿಡಲು ನಿರ್ಣಯಿಸಿರುವರು. ಈ ನಿರ್ಣಯದ ಅನ್ವಯ ಈ ವರ್ಷ ಹೈಸ್ಕೂಲು ವಿದ್ಯಾರ್ಥಿಗಳಿಗೆ ಮಾತೃಭಾಷೆಯ ಮೂಲಕ ಶಿಕ್ಷಣ ಕೊಡಲಾಗು ವದು.

ಪಂಜಾಬಿನ ಸಿ. ಇ. ಗಿಬ್ಬನರು ರಾಜೀನಾಮೆ ಸಲ್ಲಿಸಿದ್ದರಿಂದ ಘಟನಾ ಸಮಿತಿಯಲ್ಲಿ ಅವರ ಸ್ಥಳಕ್ಕೆ ಫ್ರಾಂಕ ಆ್ಯಂಥೋನಿಯವರನ್ನು ಆರಿಸಿ ಕಳಿಸಲಾಗಿದೆ. ಇದಕ್ಕೆ ಕಾಂಗ್ರೆಸ್ಸಿನ ಒಪ್ಪಿಗೆ ಯಿದೆಯೆಂದು ಗೊತ್ತಾಗಿದೆ.

ಹಿಂದು ಮತ್ತು ಮುಸಲ್ಮಾನ

(೬ನೇ ಪುಟದಿಂದ)

ಮುಸಲ್ಮಾನರ ಮಧ್ಯದಲ್ಲಿಯೇ ಮಾತ್ರ ಇದೆಯೇ?... ಇಲ್ಲ! ನಮ್ಮ ನಿಮ್ಮಂತಹ ಆಚಾರ ಸ್ವಾಧೀನತೆಯು ರಕ್ಷಕರಲ್ಲಿ ಮತ್ತು ಪರಸ್ಪರ ಸಹಾಯಕ ವ್ಯಕ್ತಿಗಳಲ್ಲಿ— ಸತ್ಯವಾಗಿ ಹೇಳ ಬೇಕಾದರೆ ಪೃಥಕ್ಕಿದೆ, ಬಾಧಗ್ರಸ್ತವಿದೆ.

ಇದಾಯಿತು ಒಂದು ಸಮಸ್ಯೆ; ಆದರೆ ಇದರ ಸಮಾಧಾನವೆಲ್ಲಿಂದ ಬಂದೀತು? ಮನಸ್ಸಿನ ಪರಿವರ್ತನೆಯಿಂದ—!! ಯಾವ ಪ್ರಕಾರ ಯುರೋಪು ಸತ್ಯದ ಸಾಧನೆ ಮತ್ತು ಜ್ಞಾನದ ಪ್ರಾಪ್ತಿಯ ಮೂಲಕ ಮಧ್ಯಯುಗದ ಒಳಗಿನಿಂದ ನಡೆಯುತ್ತ ಆಧುನಿಕ ಯುಗದ ವರೆಗೆ ಬಂದು ಮುಟ್ಟಿದೆಯೋ ಅದೇ ಪ್ರಕಾರ ಹಿಂದೂ-ಮುಸಲ್ಮಾನರು ತಮ್ಮ ತಮ್ಮ ಮನಸ್ಸನ್ನು ಸುತ್ತಿದ ಅಂಧ ಸಂಸ್ಕಾರದ ಪ್ರತಿಬಂಧಗಳನ್ನು ದಾಟಿ ಹೊರಗಡೆಯ ಯಾತ್ರೆಯನ್ನು ಮಾಡಬೇಕು. ಧರ್ಮವನ್ನು ಗೋರಿಯಿಂದು ತಿಳಿದು, ಅದರ ಪ್ರತಿಬಂಧ ಜಾತಿಗಳನ್ನು ಚಿರಸ್ಥಾಯಿಯಾಗಿ ಭದ್ರಪಡಿಸಿ ಹೂಳಿಟ್ಟರೆ ಉನ್ನತಿಯ ಮಾರ್ಗದಲ್ಲಿ ನಡೆಯುವುದು ಅಸಂಭವವಾಗಿ ಬಿಟ್ಟೀತು; ಆ ಮಾರ್ಗದಲ್ಲಿ ಎಂದಿಗೂ ಯಾರೂ ಯಾರನ್ನೂ ಭೆಟ್ಟಿಯಾಗಲಿಕ್ಕಿಲ್ಲ. ನಮ್ಮ ಮಾನಸಿಕ ಪ್ರಕೃತಿಯಲ್ಲಿ ಬೆಳೆದ ಅವರೋಧವು ಕ್ರಮಶಃ ದೃಢವಾಗುತ್ತ ಹೋಗಿದೆ; ಅದನ್ನು ಸಂಪೂರ್ಣವಾಗಿ ಅಳಿಸದ ಹೊರತು ನಾವು ಯಾವದೇಶದ ಸ್ವಾಧೀನತೆಯನ್ನು ಉಪಲಬ್ಧ ಮಾಡಿಕೊಳ್ಳಲಾರೆವು. ಶಿಕ್ಷಣದ ಮೂಲಕ, ಸಾಧನದ ಮೂಲಕ ನಾವು ಈ ತಳಹದಿಯ ಪರಿವರ್ತನೆಯನ್ನು ಘಟಿಸಬೇಕಾಗಿದೆ. "ಪಕ್ಷಿಗಳಿಗಿಂತ ಪಂಜರವು ದೊಡ್ಡದಿದೆ" ಎಂಬ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು; ಆಗ ನಮ್ಮ ಕಲ್ಯಾಣ ಸಂಭವವಿದೆ. ಹಿಂದು—ಮುಸ್ಲಿಮರ ಮಿಲನವು ಯುಗ ಪರಿವರ್ತನೆಯನ್ನು ನಿರೀಕ್ಷಿಸಹತ್ತಿದೆ; ಆದರೆ ಇದನ್ನು ಕೇಳಿ ಹೆದರುವ ಕಾರಣವಿಲ್ಲ; ಯಾಕೆಂದರೆ ಅನ್ಯ ದೇಶಗಳಲ್ಲಿ ಮಾನುಷ್ಯನು ಸಾಧನೆಯ ಮೂಲಕ ಯುಗಪರಿವರ್ತನೆಯನ್ನು ಬಲು ಚೆನ್ನಾಗಿ ಘಟಿಸಿದ್ದಾನೆ. ಶಕ್ತಿಯು ಮರಿಯ ಅವಸ್ಥೆಯಿಂದ ಪಕ್ಷಿಬಿಚ್ಚಿ ಹಾರುವ ಅವಸ್ಥೆ ಹೊಂದದಿರದು. ನಾವು ಕೂಡ ನಮ್ಮ ಮಾನಸಿಕ ಅವರೋಧಗಳನ್ನು ಕಡಿದು ಹೊರಬಂದೇವು; ಒಂದು ವೇಳೆ ಬಾರದಿದ್ದರೆ "ನಾನ್ಯಃ ಪಂಥಾ ವಿದ್ಯತೇ ಅಯನಾಯ."

ನಿಮ್ಮನ್ನು ಸದಾಚಿಂತೆ ಬಾಧಿಸುತ್ತಿರುವುದೇ?

ಚಿಂತೆ ಚಿತೆಗಳಿಗೆ ಒಂದು ಸೊನ್ನೆ ಮಾತ್ರ ವ್ಯತ್ಯಾಸ; ಚಿಂತೆ ಹೆಣವನ್ನು ಸುಟ್ಟರೆ ಚಿತೆ ಸಜೀವ ಮನುಷ್ಯನನ್ನು ಸುಡುವುದೆಂದು ಹಿರಿಯರು ಹೇಳುತ್ತಾರೆ. ಕೆಲವರಿಗೆ ಚಿಂತಾಸಕ್ತರಾಗಿರುವದೇ ಒಂದು ಸ್ವಭಾವ. ಅದಕ್ಕೆ ನಿಶ್ಚಯಾತ್ಮಕ ಬುದ್ಧಿಯಿಲ್ಲದುದೇ ಕಾರಣ. ಅಂಥವನು ಮಾಡಹೋದ ಕೆಲಸಗಳೆಲ್ಲವೂ ಹಾಳೇ. ಒಂದನ್ನು ಮಾಡಹೋದರೆ ಒಂದಾಗುತ್ತದೆ, ಒಂದರಿಂದ ಒಂದು ತಪ್ಪೇ ಆಗುತ್ತ ಹೋಗುತ್ತದೆ. ಇದು ಅನೇಕರ ಅನುಭವದಲ್ಲಿ ಬಂದಿರತಕ್ಕದ್ದೇ ಆಗಿದೆ. ಕೆಳಗಿನ ೨೦ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ಕೊಟ್ಟರೆ ನಿಮಗೆ ಚಿಂತಾರೋಗವಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದು.

೧. ನಿಮಗೆ ಉಗುರುತಿನ್ನುವ ಅಭ್ಯಾಸವಿದೆಯೇ?

೨. ನೀವು ಪದೇ ಪದೇ ಖಿನ್ನರಾಗುತ್ತೀರಾ?

೩. ನಿಮ್ಮ ಕೈಕಾಲುಗಳು ಬೆವರುವವೋ?

೪. ನಿಮಗೆ ಒಮ್ಮಿಂದೊಮ್ಮೆ ಚಿತ್ತವೃತ್ತಿ ಪರಿವರ್ತನವಾಗುವದು ಕಂಡುಬಂದಿದೆಯೋ?

೫. ಬಾಗಿಲು ಮುಚ್ಚಿದ ಕೋಣೆಯಲ್ಲಿರಲು ನಿಮಗೆ ಅಸುಖವಾಗುವದೋ?

೬. ರಾತ್ರಿ ಸ್ವಪ್ನಗಳು ಬೀಳುವುವೋ?

೭. ನಿಮ್ಮ ಸಂಬಂಧಿಕರು ದುರ್ವರ್ತನೆಯವರೆನಿಸುವುದೋ?

೮. ಗುಡುಗು ಇಲ್ಲವೇ ಮಿಂಚುಗಳಿಗೆ ಹೆದರುವಿರೇನು?

೯. ನಿಮಗೆ ಬೇಗ ಆಯಾಸವಾಗುವುದೇ?

೧೦. ಕೆಲವು ಪದಾರ್ಥಗಳು ಕಾರಣವಿಲ್ಲದೆ ನಿಮಗೆ ಸೇರದಿರುವುದುಂಟೋ?

೧೧. ಎತ್ತರದ ಸ್ಥಳ ನಿಮ್ಮನ್ನಂಜಿಸುವದೋ?

೧೨ ಯಾವುದಾದರೊಂದು ನಿರ್ಧಾರಕ್ಕೆ ಬರಲು ಬಹು ಕಷ್ಟವಾಗುವದೇ?

೧೩. ಅಪರಿಚಿತ ರೊಡನಿದ್ದರೆ ನಿಮಗೆ ಹಿತವೆನಿಸದೆ?

೧೪. ನಿಮಗೆ ಬಹು ಬೇಗ ಅಳುಬರುವದೇ?

೧೫. ನಿಮಗೆ ಪದೇ ಪದೇ ತಲೆನೋವು ಬರುವುದೇ?

೧೬. ಆಕಸ್ಮಿಕ ಸೂಚನೆಗಳು ನಿಮ್ಮನ್ನು ಅಡ್ಡದಾರಿಗೊಯ್ಯುವವೇ?

೧೭. ಯಾರಾದರೂ ದೂಷಿಸಿದರೆ ನಿಮಗೆ ಬಹಳ ವ್ಯಥೆಯಾಗುವುದೇ?

೧೮. ನಿದ್ದೆ ಬೇಗ ಬರುವದಿಲ್ಲವೇನು?

೧೯. ಜನರು ನಿಮ್ಮ ವಿಷಯಗಳನ್ನೆಲ್ಲ ಮೊದಲೇ ತಿಳಿದಿರುವರೆಂಬ ಸಂಶಯವಿರುವುದೇನು?

೨೦. ಕತ್ತಲೆಂದರೆ ನಿಮಗೆ ಹೆದರಿಕೆಯೆ?

ನಿಮ್ಮ 'ಅಹುದು' ಎಂಬ ಉತ್ತರಗಳನ್ನು ಕಲೆಹಾಕಿರಿ. ಅವು ೫ ಕ್ಕಿಂತ ಕಡಿಮೆಯಾದರೆ ನೀವು ಚಿಂತಾಸಕ್ತರಲ್ಲವೆಂದೇ ಹೇಳಬಹುದು; ೬ ರಿಂದ ೧೦ ರ ವರೆಗೆ ನೀವು ಸಾಮಾನ್ಯ ಚಿಂತಾಕುಲರು; ೧೧ ರಿಂದ ೧೫ ರ ವರೆಗೆ ನೀವು ಈಗಲೆ ಚಿಂತಾಮಗ್ನತೆಯನ್ನು ದಮನಮಾಡಲು ಪ್ರಾರಂಭಿಸಬೇಕೆಂದು ಡಾ. ಗಿಬರ್ಸನ್ನರ ಸಲಹೆ. 'ಅಹುದು' ಗಳು ೧೬ ಕ್ಕೂ ಮಿಕ್ಕಿದರೆ ನಿಮ್ಮ ಮನಸ್ಸನ್ನು ಸಮಾಧಾನ ಪಡಿಸಲು ಅನ್ಯರ ಸಹಾಯ ಬೇಕಾಗಬಹುದು.

ಚಿಂತಾ ಪರಿಹಾರಕ್ಕೆ ಚಿಂತಾಕುಲರು ಕೆಳಗೆ ಕೊಟ್ಟಿರುವ ದಶನಿಯಮಗಳನ್ನು ಪಾಲಿಸುವುದು ಆರೋಗ್ಯಕರ:—

೧. ಬುದ್ಧಿವಂತಿಕೆಯಿಂದ ಬಾಳುವುದು.-ಬೇಕಾದಷ್ಟು ವಿಶ್ರಾಂತಿ, ಸರಿಯಾದ ಆಹಾರ, ಆಟಪಾಠಾದಿವಿನೋದಗಳನ್ನು ತೆಗೆದುಕೊಳ್ಳಬೇಕು. ದೇಹಾರೋಗ್ಯ ಮನಸ್ಸಿನ ಆರೋಗ್ಯಕ್ಕೆ ಕಾರಣ.

೨. ಜೀವನದಲ್ಲಿ ಒಂದು ಧ್ಯೇಯವನ್ನಿಟ್ಟುಕೊಳ್ಳತಕ್ಕದ್ದು—ಆ ಧ್ಯೇಯವು ಸಂಪೂರ್ಣ ಸ್ವಾರ್ಥಕ್ಕಾಗಿ ಇರದೆ ಸಹಜೀವಿಗಳ ಹಿತಕ್ಕಾಗಿಯೂ ಇರುವ ತತ್ವಕ್ಕೆ ಅನುಗುಣವಾಗಿರಬೇಕು.

೩. ಪರಿಸ್ಥಿತಿಯನ್ನು ಇದ್ದ ಹಾಗೇ ಸ್ವೀಕರಿಸತಕ್ಕದ್ದು–ಮನಸ್ಸಿಗೆ ಬರಲಿಲ್ಲವೆಂದು ಗೊಂದಲ ವೆಬ್ಬಿಸಕೂಡದು.

೪. ಯಾವ ಯಾವುದರ ಬೆಲೆ ಎಷ್ಟೆಂದು ನಿರ್ಣಯಿಸುವ ಬುದ್ಧಿಯನ್ನು ಬೆಳಸಿಕೊಳ್ಳಬೇಕು—ಚಿಲ್ಲರೆ ಸಂಗತಿಗಳು ಮನಸ್ಸಿನ ಮೇಲೆ ಪರಿಣಾಮ ಮಾಡದಂತೆ ನೋಡಿಕೊಳ್ಳಬೇಕು. ಯಾವುದಾದರೂ ಕೆಟ್ಟು ಹೋದರೆ ಅದಕ್ಕಿಂತ ಹೆಚ್ಚು ಕೆಡಲಿಲ್ಲವಲ್ಲಾ, ಅಷ್ಟೇ ಒಳ್ಳೆಯದಾಯ್ತು, ಎಂದು ಸಮಾಧಾನಮಾಡಿಕೊಳ್ಳತಕ್ಕದ್ದು.

೫ ನಗುವುದನ್ನು ಅಭ್ಯಸಿಸಬೇಕು—ಹಾಸ್ಯಾಸ್ಪದವಾದುದರತ್ತ ಗಮನ ಕೊಡುವದನ್ನು ಕಲಿಯಬೇಕು. ಇಡಿಯ ಜಗತ್ತಿನ ಭಾರವನ್ನು ಹೊರುತ್ತೇನೆಂಬ ಮನುಷ್ಯನಿಗಿಂತ ಹೆಚ್ಚಿನ ಮರುಳರಿಲ್ಲವೆಂಬುದನ್ನು ನೆನಪಿಗೆ ತಂದುಕೊಳ್ಳತಕ್ಕದ್ದು.

೬. ಮನಸ್ಸನ್ನು ಗಟ್ಟಿಮಾಡಬೇಕು—ಬೇಗ ನಿರ್ಧಾರಕ್ಕೆ ಬರಬೇಕು. ಆ ನಿರ್ಣಯಗಳ ಪರಿಣಾಮವನ್ನು ಪೃಥಕ್ಕರಿಸುವುದನ್ನೂ ಅದಕ್ಕಾಗಿ ಪಶ್ಚಾತ್ತಾಪ ಪಡುವುದನ್ನೂ ಬಿಟ್ಟು ಬಿಡತಕ್ಕದ್ದು. ಚಿಂತೆಯಿಂದ ಪಾರಾಗುವ ಪ್ರಸಂಗದಲ್ಲಿ ಅನಿರ್ಧಾರಕ್ಕಿಂತ ಕ್ಷುದ್ರ ನಿರ್ಧಾರವಾದರೂ ಲೇಸು.

೭. ವರ್ತಮಾನಕಾಲದಲ್ಲಿ ಬಾಳಬೇಕು—೨೪ ತಾಸುಗಳ ಪರಿಧಿಯಲ್ಲೇ ಆಲೋಚನೆ ತಿರುಗುತ್ತಿರಬೇಕು, ನಿನ್ನೆ ಕಳೆದಿತು. ನಾಳೆ ಬಂದಿಲ್ಲ. ಆದುದರಿಂದ ಇಂದಿಗೆ ಅಂಟಿಕೊಳ್ಳತಕ್ಕದ್ದು.

೮. ಸಡಿಲಿಸಬೇಕು—ಬಾಳನ್ನು. ಅನಾವಶ್ಯಕಗಳನ್ನು ಬಿಡತಕ್ಕದ್ದು. ತ್ವರೆ ಮತ್ತು ಉದ್ವಿಗ್ನತೆ ಯಾವಾಗಲೂ ಒಟ್ಟೊಟ್ಟಾಗಿ ಸಾಗುತ್ತವೆ. "ಸುಮ್ಮನೆ ಕುಳಿತುಕೊಳ್ಳಲು ಬರದುದರಿಂದಲೇ ಮನುಷ್ಯನಿಗೆ ಎಲ್ಲ ತೊಂದರೆಗಳೂ ಉಂಟಾಗುವುವು" ಎಂಬ ಪ್ಯಾಸ್ಕಲ್ಲನ ಮಾತನ್ನು ಮರೆಯ ತಕ್ಕದ್ದಲ್ಲ. ಆದುದರಿಂದ ಬಂದದ್ದೆಲ್ಲ ಬರಲಿ, ಗೋವಿಂದನ ದಯವೆನಗಿರಲಿ ಎಂದು ಕೊಂಡು ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳದೆ ಮೈಮೇಲೆ ಬಿದ್ದ ಕೆಲಸವನ್ನು ನಿಧಾನವಾಗಿ ಮಾಡಬೇಕು. ಅವಸರ ಪಡುವುದೇಕೆ?

೯. ಹಾಸ್ಯಗಾರಿಕೆ ಇರತಕ್ಕದ್ದು—ಆಟವಾಡಲು ಅಭ್ಯಸಿಸಬೇಕು. ಬೇಜಾರಾದಾಗ ಏನಾದರೂ ಸಣ್ಣ ಪುಟ್ಟ ಕೆಲಸಗಳಲ್ಲಿ ಮಗ್ನರಾಗಿ ಅದನ್ನು ಮರೆಯಬೇಕು. ಕೈಕೊಂಡ ಕೆಲಸದಲ್ಲಿ ತೃಪ್ತಿಪಡೆಯತಕ್ಕದ್ದು; ಅದರಲ್ಲಿ ಆಸಕ್ತಿ ವಹಿಸಬೇಕು. ಕಾರ್ಯ ತಾನೇ ಆಕರ್ಷಿಸಲೆಂದು ಕಾಯ್ದು ಕುಳಿತಿರಬಾರದು.

೧೦. ಉದ್ಯೋಗ ಶೀಲತೆಯನ್ನು ಒಂದು ಅಭ್ಯಾಸವಾಗಿ ಮಾಡಿಕೊಳ್ಳಬೇಕು—ತೊಂದರೆಗಳುದ್ಭವಿಸಿದಾಗ ಸುಮ್ಮನೆ ಅಳೆಯುತ್ತ ಸುರಿಯುತ್ತ ಕುಳಿತುಕೊಳ್ಳಬಾರದು. ಯಾವದರೂ ಕಾರ್ಯವನ್ನು ಆರಂಭಿಸತಕ್ಕದ್ದು. ವಿಹಾರಕ್ಕೆ ಹೊರಡಬಹುದು ಇಲ್ಲವೆ ತೋಟದಲ್ಲಿ ಕೆಲಸ ಮಾಡಬಹುದು; ಚಿಕ್ಕ ಚಿಕ್ಕ ಬಟ್ಟೆಗಳನ್ನು ಒಗೆಯಬಹುದು; ಮರ ಕಡಿಯಬಹುದು; ಟೋಪಿಯನ್ನು ಕೊಳ್ಳಲು ಪೇಟೆಗೆ ಹೋಗಬಹುದು.

ಚಿಂತಾಕುಲತೆಯೊಂದು ದುರಭ್ಯಾಸ. ಇತರ ದುರಭ್ಯಾಸಗಳನ್ನು ಹೇಗೋ ಹಾಗೇ ಇದನ್ನಾದರೂ, ಸದಭ್ಯಾಸವನ್ನು ಬದಲಿಯಾಗಿ ತಂದು, ಸ್ಥಾನಭ್ರಷ್ಟಮಾಡಬಹುದು. ಇದನ್ನು ಒಂದು ಸಲ ಗೆದ್ದವರು ಇದು ಏನೆಂದೇ ತಿಳಿಯದವರಿಗಿಂತ ಹೆಚ್ಚು ಸಮರ್ಥರಾಗುತ್ತಾರೆಂದು ಮೇಲೆ ಹೇಳಿದ ಅಮೇರಿಕೆಯ ವೈದ್ಯರು ಅಭಿಪ್ರಾಯ ಪಡುತ್ತಾರೆ.

ಶ್ರೀ ರಾಜಪುರೋಹಿತರ ಷಷ್ಟ್ಯಬ್ದಿ

ಕರ್ನಾಟಕದ ಇತಿಹಾಸ ಸಂಶೋಧಕ ಶ್ರೀ ನಾರಾಯಣರಾವ ರಾಜಪುರೋಹಿತ ಇವರ ಷಷ್ಟ್ಯಬ್ದಿ ಸಮಾರಂಭ ಅಗಷ್ಟ ೧೦ ಕ್ಕೆ ಧಾರವಾಡದಲ್ಲಿ ಜರಗುವದು.

ಹೈದ್ರಾಬಾದ ಸಂಸ್ಥಾನ ಕಾಂಗ್ರೆಸ ಕಾರ್ಯಕರರಾದ ಶ್ರೀಮುರಲೀಧರರಾವ ಕಾನಿಟಕರ ಬೀದರೆ ಇವರನ್ನು ಹೈದರಾಬಾದಕ್ಕೆ ಗೃಹಮಂತ್ರಿಗಳನ್ನು ಕಾಣಲು ಸ್ವಾಮೀ ರಮಾನಂದ ತೀರ್ಥರೊಡನೆ ಹೋದಾಗ ಸೆಕ್ರೆಟರಿಯೆಟನಲ್ಲಿ ೧೬ ಕ್ಕೆ ಸೆರೆಹಿಡಿದರು.

ಬೆಂಗಳೂರು-ಮೈಸೂರು

ಘಟನಾ ಸಮಿತಿಗೆ ಸದಸ್ಯರ ಚುನಾವಣೆ, ಜವಾಬ್ದಾರಿ ಸರಕಾರ, ಜನತಾ ಸರಕಾರ ಸ್ಥಾಪನೆ ಈ ವಿಷಯಗಳಲ್ಲಿ ದಿವಾನರ ಧೋರಣೆ ಅಸಮಾಧಾನಕರವಾಗಿರುವದರಿಂದ ಸತ್ಯಾಗ್ರಹ ಹೂಡುವುದು ಅನಿವಾರ್ಯವೆಂದು ಬೆಂಗಳೂರಲ್ಲಿ ತಾ ೭ರ ದಿನ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ ಮೈಸೂರು ಕಾಂ. ವರ್ಕಿಂಗ್ ಕಮಿಟಿಯು ನಿರ್ಣಯಿಸಿತು.

ಹೈದರಾಬಾದಿನಿಂದ ಸರ್ ಮಿರ್ಜಾರವರು ಹೊರಟು ಹೋದ ಮೇಲೆ ಆ ಸಂಸ್ಥಾನದಲ್ಲಿ ಹಿಂದುಗಳ ಮೇಲೆ ನಡೆಯುತ್ತಿರುವ ದುಷ್ಕೃತ್ಯಗಳು ಬಹಳ ಭಯಂಕರವಾಗುತ್ತಿರುವುದರಿಂದ ಅದನ್ನು ತಡೆಯಲು ಹಿಂದುಸ್ತಾನಗಳ ರಾಜರು ಪ್ರಯತ್ನಿಸಬೇಕೆಂದು ಅ. ಭಾ. ಹಿಂದು ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಭೂಪಾಲಚಂದ್ರ ಶೇಖರಯ್ಯನವರು ಹೇಳಿಕೆಕೊಟ್ಟಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದಲ್ಲಿ ಶ್ರೀ ಸಾಯಿ ಭಕ್ತಲಿಯವರು ಗುರುಪೌರ್ಣಿಮಾ ಉತ್ಸವವನ್ನು ವೈಭವದಿಂದ ಜರುಗಿಸಿದರು.

ತಾ ೫ರಲ್ಲಿ ಮೈಸೂರಿನ ಕಸ್ತೂರಬಾ ಗ್ರಾಮ ಸೇವಿಕೆಯರ ದ್ವಿತೀಯ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ಶ್ರೀ ರಂಗನಾಥ ದಿವಾಕರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಅಖಿಲಭಾರತ ಹಿಂದು ಮಹಾಸಭಾಧ್ಯಕ್ಷರ ಸೂಚನೆಯಂತೆ ತಾ ೭ರಲ್ಲಿ ಹಿಂದು ವಿದ್ಯಾರ್ಥಿ ಮಹಾಸಭೆಯ ಆಶ್ರಯದಲ್ಲಿ ಆಯುರ್ವಿದ್ಯಾಶಾಲೆಯಲ್ಲಿ ಭಾರತ ವಿಭಜನೆಗೆ ಪ್ರತಿಭಟನೆ ತೋರಲು ಬೆಂಗಳೂರಲ್ಲಿ ಸಭೆ ನಡೆಯಿತು.

ಬೆಂಗಳೂರಿನ ಮಲ್ಲೇಶ್ವರದ ಪೈಪ್‌ಲೈನ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಗುರುಗಳ ಮಠದಲ್ಲಿ ಜುಲೈ ೮ನೆಯ ತಾರೀಕಿನಿಂದ ೪ ದಿನ ಗಳ ಕಾಲ ಟೀಕಾಚಾರ್ಯರ ಪುಣ್ಯ ದಿವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಘಟನಾ ಸಮಿತಿಗೆ ಮೈಸೂರಿಂದ ಹೋಗುವ ಪ್ರತಿನಿಧಿಗಳಲ್ಲಿ ಬೆಂಗಳೂರು ದಂಡಿನ ಪ್ರತಿನಿಧಿಯೊಬ್ಬರನ್ನು ಕಳುಹಿಸಬೇಕೆಂದು ದಿವಾನರಲ್ಲಿ ದಂಡಿನ ಪ್ರತಿನಿಧಿಗಳು ಪ್ರಾರ್ಥಿಸಿದ್ದಕ್ಕೆ ಅವರು ಸಹಾನುಭೂತಿ ವ್ಯಕ್ತಪಡಿಸಿದರು.

ಬೆಂಗಳೂರು ಹೈಸ್ಕೂಲಿನಲ್ಲಿ ಶ್ರೀ ಮನ್ಮಹಾರಾಜರ ವರ್ಧಂತ್ಯುತ್ಸವವು ರಾ. ಬ. ಬಿ. ವೆಂಕಟಾಚಾರ್ಯರ ಅಧ್ಯಕ್ಷತೆಯಲ್ಲಿ ಚೆನ್ನಾಗಿ ನಡೆಯಿತು.

ಹಿಂದುಸ್ತಾನವು ಸ್ವಾತಂತ್ರ್ಯದಿಂದ ಬಾಳಲು ಹೈದರಾಬಾದು ಸಂಸ್ಥಾನವೂ ಹಿಂದೀ ಒಕ್ಕೂಟಕ್ಕೆ ಸೇರಬೇಕೆಂದು ಮುಂಚಾಗಿ ಹೈದರಾಬಾದು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸ್ವಾಮೀ ರಾಮಾನಂದ ತೀರ್ಥ... ಶ್ರೀ ಪ್ರಾಣೇಶಾಚಾರ್ಯರು ತಾ ೧೪ರಲ್ಲಿ ಬೆಂಗಳೂರಿನ ಕಾಂಗ್ರೆಸ್ ಕಚೇರಿಯಲ್ಲಿ ಸೇರಿದ್ದ ಕೆಲಸಗಾರರ ಸಭೆಯಲ್ಲಿ ಹೇಳಿದರು.

ದಿವಾನರ ಅಧ್ಯಕ್ಷತೆಯಲ್ಲಿ ತಾ ೧೧ರ ದಿನ ಮೈಸೂರಿನ "ಲೇಕ್ ವ್ಯೂ" ಭವನದಲ್ಲಿ ಮಂತ್ರಿಮಂಡಲದ ಸಭೆ ನಡೆಯಿತು.

ಬೆಂಗಳೂರಿನ ಬಸವನಗುಡಿ ಸಹಕಾರ ಸಂಘದ ೪೦ನೆಯ ವಾರ್ಷಿಕೋತ್ಸವವು ಸಂಘದ ಆವರಣದಲ್ಲಿ ಜುಲೈ ೬ರಂದು ಶ್ರೀ ಎಚ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಪುರೋಭಿವೃದ್ಧಿಗೆ ಬೇಕಾದ ಅನೇಕ ತೀರ್ಮಾನಗಳಾದವು.

ತಾ. ೧೪ ರ ಸಂಜೆ ಸೇರಿದ್ದ ಬೆಂಗಳೂರು ನಗರ ಸಭೆಯ ಅಧಿವೇಶನದಲ್ಲಿ ಭಾರತದ ಪರವಾಗಿ ಪ್ಯಾರಿಸ್ಸಿನಲ್ಲಿ ನಡೆಯುವ ಅಂತರ್ರಾಷ್ಟ್ರೀಯ ಜಾಂಬೋರಿ ಸ್ಕೌಟ್ ಸಮ್ಮೇಳನದಲ್ಲಿ ಭಾಗವಹಿಸಲು ಆರಿಸಲ್ಪಟ್ಟಿರುವ ನಗರಸಭೆಯ ಹಿಂದಿನ ಅಧ್ಯಕ್ಷರೂ ಡೆಪ್ಯುಟಿ ಚೀಫ್ ಸ್ಕೌಟ್ ಕಮಿಶನರೂ ಆದ ಶ್ರೀ ಸಿ. ಶಿವಶಂಕರರನ್ನು ಅಭಿನಂದಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮೈಸೂರು ಸಂಸ್ಥಾನದ "ಎಜ್ಯುಕೇಶನ್ ಲೀಗಿ"ನ ಕಾರ್ಯಕಾರಿ ಸಮಿತಿಯ ಸಭೆ ತಾ ೧೪ ರಲ್ಲಿ ಅಧ್ಯಕ್ಷರಾದ ಶ್ರೀ ಆರ್. ಕಸ್ತೂರಿರಾಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬೆಂಗಳೂರಲ್ಲಿ ಜರುಗಿತು.

ಘಟನಾಸಮಿತಿಗೆ ಹೋಗುವ ಪ್ರತಿನಿಧಿಗಳಲ್ಲಿ ಹರಿಜನ ಸದಸ್ಯರಾದ ಶ್ರೀ ಚೆನ್ನಯ್ಯನವರನ್ನು ಸೇರಿಸಿಕೊಂಡುದಕ್ಕಾಗಿ ಸಂತೋಷ ಸೂಚಿಸಿ ಸಂಸ್ಥಾನದ ಡಿಪ್ರೆಸ್ಡ್ ವರ್ಗದ ಲೀಗಿನವರು ನಿರ್ಣಯ ಮಾಡಿದ್ದಾರೆ.


ಮೈಸೂರು ಡಿಸ್ಟ್ರಿಕ್ಟ್ ಆಫೀಸಿನ ಬಳಿ ಕಟ್ಟಲಾಗುತ್ತಿರುವ ಕ್ರಾಫರ್ಡ್ ಹಾಲಿನಲ್ಲಿ ಮುಂದಿನ ಅಕ್ಟೋಬರಿನಲ್ಲಿ ಸೇರಲಿರುವ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ನಡೆಯುವುದೆಂದು ಗೊತ್ತಾಗಿದೆ.

ಬೆಂಗಳೂರು ನಗರದಲ್ಲಿ ಅ. ಕ. ಮಕ್ಕಳ ಕೂಟದ ಆಶ್ರಯದಲ್ಲಿ ಶ್ರೀ ಜಿ. ಶ್ರೀನಿವಾಸರಾವ ನಾಯುಡುರವರ ಅಧ್ಯಕ್ಷತೆಯಲ್ಲಿ ವರ್ಧಂತ್ಯುತ್ಸವ ಆಚರಿಸಲ್ಪಟ್ಟಿತು.

ತಾ. ೧೪ ರಲ್ಲಿ ಮೈಸೂರು ಸಂಸ್ಥಾನ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಬೆಂಗಳೂರಲ್ಲಿ ಸೇರಿ ಹೈದರಾಬಾದಿನ ಕಾಂಗ್ರೆಸ್ಸಿಗೆ ಬೆಂಬಲ ನೀಡುವದಾಗಿ ಸಾರಿತು.

ಅಂತರ್ರಾಷ್ಟ್ರೀಯ ಕುಸ್ತಿಯ ಸ್ಪರ್ಧೆಯನ್ನು ಬೆಂಗಳೂರಲ್ಲಿ ನಡೆಸುವ ವ್ಯವಸ್ಥೆಯಾಗುತ್ತಿದೆಯೆಂದು ತಿಳಿದುಬಂದಿದೆ. ಕಿಂಗ್‌ಕಾಂಗ್ ಜಿಬಿಸ್ಕೋ ಮೊದಲಾದ ಪ್ರಮುಖ ಜಟ್ಟಿಗಳು ಭಾಗವಹಿಸಲಿರುವರೆಂದು ಸುದ್ದಿ.

ದಿವಾನರು ವಿಶೇಷ ವಿಮಾನದಲ್ಲೂ ಕಾಂಗ್ರೆಸ್ಸಿನ ಅಧ್ಯಕ್ಷರು ದಿನವೂ ತಿರುಗುವ ವಿಮಾನದಲ್ಲೂ ತಾ. ೧೨ ರಂದು ಬೆಂಗಳೂರಿಂದ ದಿಲ್ಲಿಗೆ ಘಟನಾ ಸಮಿತಿಯ ೧೪ ರ ಸಭೆಗಾಗಿ ತೆರಳಿದರು.



ಮುಂಬಯಿ ಶೇರ ಪೇಟೆ

ತಾ. ೬

ಶೇರ ಪೇಟೆಯಲ್ಲಿ ಟಾಟಾ ಸ್ಟೀಲ ಡೆಫರ್ಡ ಪಾಲುಗಳು ಈ ವಾರ ಉತ್ತಮಗೊಂಡವು. ಅದರ ಲಾಭಾಂಶದ ನಿರೀಕ್ಷೆಯಲ್ಲಿ ಜನರು ಇದ್ದಾರೆ. ಅದು ೨೦೬೭-೮-೦ ರಿಂದ ೨೦೮೫-೦-೦ ಕ್ಕೇರಿದೆ. ಜವಳಿ ಪಾಲುಗಳು ಹೆಚ್ಚು ಕಡಿಮೆ ಯಥಾಸ್ಥಿತಿ ಇವೆ. ಕೇಂದ್ರ ಸರಕಾರದವರು ಹೆಚ್ಚು ಉತ್ಪಾದನೆಯಾಗಬೇಕೆನ್ನುತಿದ್ದರೂ ಪ್ರಾಂತಗಳು ತಮ್ಮವೇ ತೊಂದರೆಗಳಿಂದ ನರಳುತಿವೆ. ಆದರೂ ಬರಟು ಬಟ್ಟೆಗಳ ಬೆಲೆಯೇರಿಸಬೇಕೆಂಬ ಸೂಚನೆ ಆಚರಣೆಗೆ ಬಂದರೆ ಉತ್ಪಾದನೆ ಹೆಚ್ಚಾಗುವ ಸಂಭವವುಂಟು. ಮುಂಬಯಿ ಡಾಯಿಂಗ ೧೧೯೨-೮-೦ ಯಿಂದ ೧೨೧೦-೦-೦ ಕ್ಕೇರಿತು. ಫಿನ್ಲೆ ೩೨೨-೦-೦ ದಿಂದ ೩೨೮-೦-೦ ಕ್ಕೇರಿ ೩೨೬-೦-೦ ಕ್ಕೂ ಕೋಹಿನುರು ೬೬೮-೦-೦ ರಿಂದ ೬೭೮-೦-೦ ಕ್ಕೇರಿ ೬೭೮-೦-೦ ಕ್ಕೂ ಸ್ವದೇಶಿ ೬೬೬-೦-೦ ರಿಂದ ೬೭೫-೦-೦ ಕ್ಕೇರಿ ೬೬೭-೦-೦ ಕ್ಕೂ ಗೋಕಾಕ ೩೫೩-೦-೦ ರಿಂದ ೩೬೩-೦-೦ ಕ್ಕೇರಿ ೩೬೦-೦-೦ ಕ್ಕೂ ಇಳಿದವು. ಇಂಡಿಯನ್ ಅಯರ್ನ ೨೭೫-೦-೦ ರಿಂದ ೨೮೪-೦-೦ ಕ್ಕೇರಿತು ಅಸೊ. ಸಿಮೆಂಟ್ಸ ೧೭೩-೦-೦ ರಿಂದ ೧೮೩-೦-೦ ಕ್ಕೇರಿದೆ. ಬ್ಯಾಂಕುಗಳಲ್ಲಿ ಸೆಂಟ್ರಲ ೯೮-೮-೦ ರಿಂದ ೧೦೫-೦-೦ ಕ್ಕೂ ಇಂಪೀರಿಯಲ್ ಎಸ್. ಸಿ. ೨೩೦೦-೦-೦ ರಿಂದ ೨೩೫೦-೦-೦ ಕ್ಕೂ ರಿಝುರ್ವ ೧೦೭-೧೨-೦ ರಿಂದ ೧೨೨-೦-೦ ಕ್ಕೂ ಏರಿದವು.

ಚಿನ್ನ—ಬೆಳ್ಳಿ

ಚಿನ್ನದ ಪೇಟೆ ಈ ವಾರ ತುಸು ಇಳಿಮುಖವಾಯಿತು. ತಯಾರಿ ಚಿನ್ನ ೧೧೪—೮—೦ ಯಿಂದ ೧೧೧—೦—೦ ಕ್ಕಿಳಿದು ೧೧೧—೮—೦ ಕ್ಕೇರಿತು. ವಾಯದಾ ಚಿನ್ನ ೧೧೧—೨—೦ ಬೆಳ್ಳಿ ತಯಾರಿ ೧೭೩—೦—೦ ರಿಂದ ೧೬೯-೦-೦ ಕ್ಕಿಳಿದು ೧೭೦—೦—೦ ಕ್ಕೆ ಸುಧಾರಿಸಿತು. ವಾಯದಾ ೧೭೦—೦—೦

ಅರಳೆ

ಅರಳೆ ಪೇಟೆಯಲ್ಲಿ ಈ ವಾರ ಹೆಚ್ಚಿನ ಗದಿಬಿಡಿಯಿಲ್ಲ. ಹೋದ ವಾರ ಕೊಳ್ಳುವವರು ಮೇಲೊಡ್ಡಿದ್ದರಿಂದ ಬೆಲೆಗಳು ಏರಿಕೊಂಡಿದ್ದವು. ಈಗ ಸ್ಟರ್ಲಿಂಗ್ ಮೇಲೆ ನಿಯಂತ್ರಣ ಬಿದ್ದು ವ್ಯಾಪಾರ ಹಿಂದೇಟು ತಿಂದಿದೆ. ಜುಲೈ ಅರಳೆ ೪೪೧-೦-೦ ರ ವರೆಗೆ ಹೋಗಿ ೪೩೯-೮-೦ ಗೆ ತಿರುಗಿತು. ಸೆಪ್ಟೆಂಬರ ೪೫೧-೪-೦.

ಎಣ್ಣೆಕಾಳು

ಶೇಂಗಾ	೧೧೧-೮-೦
ಅಗಸಿ	೩೦-೧೦-೦
ಅಗಸಿ ಎಣ್ಣೆ	೨೦-೧೨-೦

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ	ನಂ. ೧	೨೮೦—೨೮೫
„	ನಂ. ೨	೨೫೫—೨೭೦
„	ನಂ. ೩	೨೪೦—೨೫೫
ಹಳೇ ಜಯವಂತ ಹತ್ತಿ		೨೯೫—೩೦೧
ಅಪ್ಲಂಡ ಹತ್ತಿ		೨೮೦—೨೯೦
ಜಿನ ಹೊಸದು		೧೮೦—೧೯೦
ಜಿನ ಹಳೇದು		೧೯೫—೨೦೧
ಡಬಲರೋಲ		೧೮೦—೧೮೫
ಸಾಜಿನ		೧೮೦—೧೮೫

ದಕ್ಷಿಣ ಕನ್ನಡ

ಮಂಗಳೂರ ಬಟ್ಟೆ ವ್ಯಾಪಾರಸ್ಥರ ಸಂಘದ ತೃತೀಯ ವಾರ್ಷಿಕೋತ್ಸವವು ತಾ ೬ರಲ್ಲಿ ಜಿಲ್ಲಾ ವಾಣಿಜ್ಯ ಸಂಘದ ಕಾರ್ಯಾಲಯದಲ್ಲಿ ಸೇಟ್ ಆರ್. ಬಿ. ವಸಂತ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ತಾ ೧೦ರಂದು ಸುಂಟರಗಾಳಿಬೀಸಿ ಮಂಗಳೂರಿನ ಕೊಡಿಯಾಲ ಬೈಲು ಕೇಡಿಗುಡ್ಡೆಯ ಶಾಲಿನಲ್ಲಿ ಒಬ್ಬ ಹೆಂಗಸಿನ ತಲೆಯ ಮೇಲಿದ್ದ ಸೀರೆಯು ಕೂಡ ಉರುಳಿತಲ್ಲದೆ ಅನೇಕ ಮನೆಗಳ ಮೇಲಿನ ಹಂಚುಗಳು ಹಾರಿದವು.

ಮಂಗಳೂರಿನ ಸೆಯಿಂಟ್ ಅಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಅಧಿಕಾರಿ ವರ್ಗದ ಆಯ್ಕೆಯು ತಾ ೮ರಲ್ಲಿ ನಡೆಯಿತು.

ತಾ ೫ರಲ್ಲಿ ಮಂಗಳೂರಿನ ಅಗ್ನಿಶಾಮಕ ದಳದ ಕೆಲಸಗಾರರ ಮಹಾಸಭೆಯು ಶ್ರೀ ಬಿ. ಎಸ್. ಭಾಸ್ಕರರೈಯವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧಿಕಾರಿ ವರ್ಗದ ಆಯ್ಕೆಯಾಗಿ ಸಭೆಯು ಕೊನೆಗೊಂಡಿತು.

ದ. ಕ. ಜಿಲ್ಲಾ ಆಹಾರ ಸಮಿತಿಯು ಕಲೆಕ್ಟರರ ಕಚೇರಿಯಲ್ಲಿ ಸೇರಿ ಅಕ್ಕಿ ಗೋದಿಗಳ ಸಂಗ್ರಹವನ್ನು ವಿವರಿಸಲಾಯಿತು. ಸಂಗ್ರಹ ಕಾರ್ಯದಲ್ಲಿ ಸಾರ್ವಜನಿಕರ ಸಹಕಾರ ಅತ್ಯವಶ್ಯವಿದೆಯೆಂಬುದನ್ನು ಸೂಚಿಸಲಾಯಿತು.

ಮಂಗಳೂರಲ್ಲಿ ಈ ವರೆಗೆ ೩೬.-೩೭ ಅಂಗುಲಗಳಷ್ಟು ಮಳೆಬಿದ್ದಿದಾಯಿತು. ಎಡೆಬಿಡದೆ ಮಳೆಸುರಿಯುವುದು ನಿಂತಿದೆ. ಬಹಳ ಕಡೆ ಗದ್ದೆ ಸಾಗುವಳಿ ಕೆಲಸ ಮುಗಿದಿದೆ.

ದ. ಕ. ಜಿಲ್ಲೆಯಲ್ಲಿ ವರ್ಧಾಪದ್ಧತಿಯ ಪ್ರಕಾರ ಶಿಕ್ಷಕರ ತರಬೇತಿಗಾಗಿ "ಬೇಸಿಕ್ ಟ್ರೇನಿಂಗ್ ಶಾಲೆ"ಯೊಂದನ್ನು ಅಗಸ್ಟ ಪ್ರಾರಂಭದಲ್ಲಿ ತೆರೆಯಲಿರುವರೆಂದು ವಿದ್ಯಾಶಾಖೆಯ ಮುಖ್ಯಾಧಿಕಾರಿಗಳು ಪ್ರಕಟಿಸಿದ್ದಾರೆ.

ಮಂಗಳೂರಿನ ಸೆಂಟ್ರಲ್ ಮೈದಾನದಲ್ಲಿ ಯುದ್ಧಯತ್ನದ ಸಂಬಂಧವಾಗಿ ಸಂಗ್ರಹಿಸಿದ ಹಂಚನ್ನು ತೆಗೆದಿರುವುದರಿಂದ ಈಗ ಅಲ್ಲಿ ಹಾಕಿ ಪಂದ್ಯಾಟ ಒಳ್ಳೆಯ ಹುರುಪಿನಿಂದ ಪ್ರಾರಂಭವಾಗಿದೆ.

ತಮ್ಮ ಕೇಳಿಕೆಯನ್ನು ೧೫ ದಿನಗಳೊಳಗೆ ಮರ ಕೊಯ್ಯಿಸುವ ಸಾವಕಾರರು ಮನ್ನಿಸದಿದ್ದರೆ ತಾವು ಮುಷ್ಕರ ಹೂಡುವುದಾಗಿ ಕಾಸರಗೋಡಿನ ಗರಗಸದವರ ಸಂಘದವರು ನಿರ್ಣಯಿಸಿದರು.

ಜಿಲ್ಲಾ ಆಹಾರ ಸಮಿತಿಯೊಡನೆ ಆಲೋಚಿಸಿ ದ. ಕ. ಜಿಲ್ಲಾ ಕಲೆಕ್ಟರರು ಕೂಪನ್ ಪದ್ಧತಿಯಿರುವೆಡೆಯಲ್ಲೆಲ್ಲ ಅಕ್ಕಿಯನ್ನು ಜುಲೈ ೬ ರಿಂದ ೧೦ ರಿಂದ ೯ ಔನ್ಸಿಗೆ ಇಳಿಸಿದ್ದಾರೆ.

ಹಿಂದೀ ಪ್ರೇಮಿಗಳ ಸಭೆಯೊಂದು ತಾ. ೫ ರ ಸಂಜೆ ಕಾಸರಗೋಡು ಬೋರ್ಡ್ ಹೈಸ್ಕೂಲಿನಲ್ಲಿ ಕೂಡಿತ್ತು. ಹಿಂದೀ ಸಂಚಾಲಕರಾದ ಶ್ರೀ ಎಚ್. ನಾವಡರು ಭಾರತ ಭ್ರಮಣಮಾಡಿ ಬಂದ ತಮ್ಮ ಅನುಭವಗಳನ್ನೂ ವರ್ಧಾದಲ್ಲಿ ನಡೆಯುವ ಬುನಿಯಾದಿ ತಾಲೀಮಿನ ವಿವರಗಳನ್ನೂ ವರ್ಣಿಸಿದರು.

ಪ್ರಗತಿಶೀಲ ಲೇಖಕರ ಸಂಘವನ್ನು ಪುನರ್ವ್ಯವಸ್ಥೆಗೊಳಿಸುವ ಉದ್ದೇಶದಿಂದ ಶ್ರೀ ಕೆ. ಕೆ. ಶೆಟ್ಟರ ನೇತೃತ್ವದಲ್ಲಿ ಸಮಿತಿಯೊಂದು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟಿತು.

ಪಂಡಿತ ಜವಾಹರಲಾಲರು

ಪಂಡಿತ ಜವಾಹರಲಾಲರು ಅಖಿಲ ಭಾರತ ಸಂಸ್ಥಾನ ಪ್ರಜಾಪರಿಷತ್ತಿನ ಸ್ಥಾಯೀ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿಯುತ್ತದೆ.

ಹಿಂದೀ ಘಟನೆ ಯಾವಾಗ ಜಾರಿಯಲ್ಲಿ ಬರುವದು?

(ಸ್ವಂತ ಸುದ್ದಿಗಾರರಿಂದ)

ಹೊಸದಿಲ್ಲಿ

ಹಿಂದುಸ್ತಾನದ ಹೊಸ ಘಟನೆ ಅಸ್ತಿತ್ವದಲ್ಲಿ ಯಾವಾಗ ಬರುವದು? ಎಂಬದೊಂದು ಮಹತ್ವದ ಪ್ರಶ್ನೆ. ಈಗ ಕೂತಿರುವ ಘಟನಾ ಸಮಿತಿಯ ಅಧಿವೇಶನವು ಈ ತಿಂಗಳ ಕೊನೆಯ ವರೆಗೆ ಸಾಗಿ ಪ್ರಾಂತಿಕ ಘಟನೆ ಹಾಗು ಸಂಯುಕ್ತ ರಾಜ್ಯದ ಘಟನೆ ಇವುಗಳ ಸಾಮಾನ್ಯ ತತ್ವಗಳು ಚರ್ಚಿಸಲ್ಪಟ್ಟು ಅವು ಸ್ವೀಕೃತವಾಗುವವು. ಇದಲ್ಲದೆ ಧ್ವಜ ಮುಂತಾದ ಪ್ರಶ್ನೆಗಳ ನಿರ್ಣಯವೂ ಆಗುವದು. ಬಳಿಕ ಆಗಸ್ಟ ೧೫ ರ ವರೆಗೆ ಇದು ಮುಂದರಿಯುವದು. ಆ ದಿನ ಅಧಿಕಾರದ ಹಸ್ತಾಂತರ ಸಮಾರಂಭವು ನಡೆದು ಒಂದು ವಾರದಷ್ಟು ವೇಳೆ ಆ ಕಾಲಕ್ಕೆ ಘಟನಾ ಸಮಿತಿ ಕೂಡುವದು ಅರ್ಥಾತ್ ಇಲ್ಲಿ ದಿಲ್ಲಿಯಲ್ಲಿ ಹಿಂದುಸ್ತಾನದ ಅಥವಾ ಇಂಡಿಯಾದ ಘಟನಾಸಮಿತಿ ಕೂಡುವದು. ಅತ್ತ ಕರಾಚಿಯಲ್ಲಿ ಪಾಕಿಸ್ತಾನ ಘಟನಾಸಮಿತಿ ಕೂಡುವದು. ಈ ಅಧಿಕಾರಾಂತರವಾದ ಬಳಿಕ ಆಗೊಂದು ವಾರ ಘಟನಾ ಸಮಿತಿ ಕುಳಿತು ಹಲವು ಕಮೀಟಿಗಳ ವರದಿಗಳ ಪರಿಶೀಲನೆ ನಡೆಯಬಹುದು. ಮುಂದೆ ಅಕ್ಟೋಬರದಲ್ಲಿ ಮತ್ತೊಂದು ಅಧಿವೇಶನವು ನಡೆಯುವದು. ಆಗ ಇಂಡಿಯಾ ದೇಶದ ಹೊಸ ಘಟನೆಯ ಪೂರ್ಣ ಕರಡು ಚರ್ಚಿಸಲ್ಪಟ್ಟು ಸ್ವೀಕೃತವಾಗುವದು. ಅದೇ ಈ ಘಟನಾಸಮಿತಿಯ ಕೊನೆಯ ಅಧಿವೇಶನವಾಗಬಲ್ಲದು.

ಚುನಾವಣೆ ಮುಂತಾದವುಗಳು ನಡೆದು ಆ ಘಟನೆ ಅಮಲಿನಲ್ಲಿ ಬರಲು ಕನಿಷ್ಠ ಒಂದು ವರುಷವಾದರೂ ಬೇಕಾದೀತೆಂದು ತಜ್ಞರ ಮತವು. ಅಲ್ಲಿಯ ವರೆಗೆ ಈ ಘಟನಾಸಮಿತಿಯು ಪರಿವರ್ತಿತವಾಗಿ ಕೇಂದ್ರ ಅಸೆಂಬ್ಲಿಯೆಂದು ಕೆಲಸ ಮಾಡುವದು. ಅದೇ ರೀತಿ ಪ್ರಾಂತಿಕ ಅಸೆಂಬ್ಲಿಗಳು ಈಗಿನಂತೆಯೆ ತಮ್ಮ ಕೆಲಸವನ್ನು ನಡೆಸುವವು. ಇದೇ ಆಗಸ್ಟ ೧೫ನೆ ದಿನ ಹೊಸ ಪ್ರಾಂತಿಕ ಗವರ್ನರರ ನೇಮಕ ಮಾತ್ರ ನಡೆಯುವದು. ಆದರೆ ೧೯೩೫ರ ಗವರ್ನಮೆಂಟ ಆಫ್ ಇಂಡಿಯಾ ಆಕ್ಟೇ ಮಾರ್ಪಟ್ಟ ಸ್ವರೂಪದಲ್ಲಿ ಅಮಲಿನಲ್ಲಿ ಬರುವದು.

ಹಿಂದೀ ಸ್ವಾತಂತ್ರ್ಯ ಮಸೂದೆ ಕಾಯದೆಯಾಯಿತು

(೧ನೇ ಪುಟದಿಂದ)

ದ್ದೆಂದು ಪ್ರತಿಪಾದಿಸಿದ್ದಲ್ಲದೆ ಒಕ್ಕೂಟದ ಘಟನೆಯನ್ನು ಮೊದಲು ತೆಗೆದುಕೊಳ್ಳದೆ ಪ್ರಾಂತಿಕ ಘಟನೆಯನ್ನು ವಿಚಾರಿಸತೊಡಗಿದ್ದೇ ಅಸಮಂಜಸವೆಂದರು. ಆದರೆ ಅವರ ವಾದಕ್ಕೆ ಅಷ್ಟು ಬೆಂಬಲ ದೊರೆಯದೆ ಬೇಕಾದರೆ ಅವರು ತಿದ್ದುಪಡಿಗಳನ್ನು ಮಂಡಿಸಬಹುದೆಂದಾಯಿತು. ಆ ಮೇಲೆ ಅವರು ಪ್ರಾಂತದಲ್ಲಿ ಗವರ್ನರರ ಬದಲು "ಅಧ್ಯಕ್ಷ"ನಿರಬೇಕೆಂದು ತಿದ್ದುಪಡಿ ತಂದರು. ಒಕ್ಕೂಟದ ಮುಖ್ಯಾಧಿಕಾರಿಗೆ 'ಅಧ್ಯಕ್ಷ'ನೆಂಬ ಹೆಸರಿರುವದರಿಂದ ಗೊಂದಲವಾಗದಂತೆ ಪ್ರಾಂತಗಳಿಗೆ 'ಗವರ್ನರ'ನೆಂಬ ಮುಖ್ಯಾಧಿಕಾರಿಯನ್ನು ಸೂಚಿಸಲಾಗಿದೆಯೆಂದು ಸರದಾರ ಪಟೇಲರು ಸಮಾಧಾನ ಹೇಳಿದರು ತಿದ್ದುಪಡಿ ಬಿದ್ದುಹೋಯಿತು

ಗವರ್ನರರ ಸ್ಥಾನ ದುರ್ವರ್ತನೆ ಅಥವಾ ಇತರ ಕಾರಣಗಳಿಗಾಗಿ ತೆರವಾದರೆ ಡೆಪ್ಯೂಟಿ ಗವರ್ನರರಿರಬೇಕೆಂದು ಪಂ. ಪಂತರು ತಂದ ಮಹತ್ವದ ತಿದ್ದುಪಡಿ ಸ್ವೀಕರಿಸಲ್ಪಟ್ಟಿತು.

ವರದಿಯ ಚರ್ಚೆ ಇನ್ನೂ ಸಾಗಿದೆ.

ಈ ವಾರದ ಕತೆ



ಮೋಡಗಳ ಮೇಲೆ ಮೋಡ ಕವಿದು ಎಲ್ಲೆಡೆಗೆ ಕಗ್ಗತ್ತಲೆಯಾಗಿತ್ತು. ದೊಡ್ಡ ಮಳೆ ಬರಲಿದೆಯೆಂದು ಆಕಾಶವೆ ಸಾರುತ್ತಿತ್ತು. ಕೊಡೆಯಿಲ್ಲದಿದ್ದರೆ ಮನೆಮುಟ್ಟುವದಶಕ್ಯವೆಂದು ಸ್ಪಷ್ಟವಾಗಿ ಕಂಡಿತು. ಮಳೆಗಾಲ ಮುಂದೆ ಹೋಗಿರಬಹುದು. ಆದರೆ ಇನ್ನು ಕೊಡೆಕೊಳ್ಳಲು ವಿಲಂಬ ಮಾಡಿದರೆ ನಡೆಯಲಾರದೆಂದು ಮನದಟ್ಟಾಯಿತು. ನೇರವಾಗಿ ಶ್ರೀ ಪೋರಬಂದರರ ಅಂಗಡಿಯಲ್ಲಿ ಕಾಲಿಟ್ಟೆ.

ಅಂಥ ಇಂಥ ಕೊಡೆಗಳನ್ನು ಪರಿಶೀಲಿಸುವದರಲ್ಲಿ ಒಂದು ಉತ್ತಮವಾಗಿ ಕಂಡಿತು. ಅದನ್ನು ಹಾಗೊಮ್ಮೆ ಹೀಗೊಮ್ಮೆ ತಿರುಗಿಸಿ ನೋಡಿದೆ. ಮುಚ್ಚಿ ಪರೀಕ್ಷಿಸಿದೆ. ಅಲುಗಾಡಿಸಿದೆ. ನೆಲಕ್ಕೂರಿ ಅದರ ಮೇಲೆ ಭಾರಹಾಕಿದೆ. ಎಷ್ಟು ವಿಧದಲ್ಲಿ ಪರೀಕ್ಷಿಸಿದರೂ ಅದು ಚೆನ್ನಾಗಿಯೇ ಕಂಡಿತು. ಬಣ್ಣದ ಬಗ್ಗೆ ಅಂಗಡಿಕಾರನನ್ನು ಪ್ರಶ್ನಿಸಿದೆ. ಅದು ಪಕ್ಕಾ ಉಳಿಯಬಹುದೋ ಹೇಗೆಂದು.

“ಕೊಡೆಯ ಮೇಲಿನ ಛಾಪು ನೋಡಿರಿ ಛಾಪ” ಎಂದ ಶ್ರೀ ಪೋರಬಂದರ ಅತ್ಯವಿಶ್ವಾಸದಿಂದ.

ನೋಡಿದೆ. ಅದರ ಒಳಗಡೆಗೆ ಎಮ್ಮೆಯ ಛಾಪಿತ್ತು.

“ಎಮ್ಮೆಯ ಬಣ್ಣ ಹೋದದ್ದು ನೋಡಿರುವಿರಾ ಎಂದಾದರೂ? ”, ಎಂದ ಅಂಗಡಿಕಾರ.

ನಿರುತ್ತರನಾಗಬೇಕಾಯಿತು ಅದಲ್ಲದೆ ಎಮ್ಮೆಗಳ ಮೇಲೆಯೆ ನನ್ನ ಉಪಜೀವನ ನಡೆದಿರುವದರಿಂದ ಎಮ್ಮೆಯ ಗುರುತಿರುವ ಕೊಡೆಯಬಗ್ಗೆ ಮಮತೆಯುಂಟಾಯಿತು. ಕೊಡೆ ಕೊಂಡೆ.

ಅಂಗಡಿಕಾರನಿಗೆ ಹಣಕೊಟ್ಟು ಮೋಡಗಳನ್ನೂ ಮಳೆಗಾಲವನ್ನೂ ಅವ್ಹಾನಿಸಲು ಕೊಡೆಯೊಂದಿಗೆ ರಸ್ತೆಗೆ ಇಳಿದೆ.

ನಾನು ಅಂಗಡಿಯಿಂದ ರಸ್ತೆಗೆ ಇಳಿಯುವದೊಂದೇ ತಡ, ಶ್ಯಾಮೂ ಭೆಟ್ಟಿಯಾದ.

ಬಹಳ ಗಡಿಬಿಡಿಯಲ್ಲಿದ್ದ. ಪ್ರಶ್ನಿಸಿದೆ.

“ನೀನು ಇನ್ನೂ ಇಲ್ಲಿಯೆ? ” ಎಂದು ಉಪಪ್ರಶ್ನಿಸಿದ ಶ್ಯಾಮೂ, “ಬಾಪೂನ ಮದುವೆ, ಇಂದೇ, ಇದೇ ಊರಲ್ಲಿ... ಅಯ್ಯೊ ನಿನಗೆ ಗೊತ್ತಿಲ್ಲವೆ?

ನನಗೆ ತಿಳಿಯದೆ ಬಾಪೂನ ಮದುವೆ!!!!!! ಎಷ್ಟು ಉದ್ಗಾರವಾಚಕ ಚಿನ್ಹಗಳನ್ನು ಪ್ರಯೋಗಿಸಿದರೂ ನನಗಾದ ಪರಮಾಶ್ಚರ್ಯ ವ್ಯಕ್ತವಾಗಲಾರದು.

ಬಾಪೂ ನಾನೂ ಕೂಡಿ ಆಡಿದವರಷ್ಟೇ ಅಲ್ಲ, ಒಂದೇ ಮನೆಯಲ್ಲಿ, ಬೆಳೆದು ಒಂದೇ ಶಾಲೆಯಲ್ಲಿ ಓದಿ ಕೂಡಿಯೇ ಪಾಸಾದವರು. ಕೇವಲ ಲಂಗೋಟಿ ಗೆಳೆಯರಲ್ಲ, ಹಾಫ್ ಪ್ಯಾಂಟಿನ ಕೋಟಿನ ಧೋತರದ ಗೆಳೆಯರೂ ಅಹುದು. ಬಾಪೂನ ಹಾಗೂ ನಮ್ಮ ಮನೆತನದ ನಡುವಿನ ಗೆಳೆತನ ಹಲವಾರುಗಳಿಂದ ಬೆಳೆದು ಬಂದದ್ದು. ನನ್ನ ಅಜ್ಜ ಹಾಗೂ ಬಾಪೂನ ಅಜ್ಜ ಈರ್ವರೂ ಅಂಚೆ ಶಾಖೆಯಲ್ಲಿಯ ಸಹೋದ್ಯೋಗಿಗಳು. ಒಂದೇ ಕಾಲಕ್ಕೆ ಪಿಂಚಣಿ ಪಡೆದವರು. ಆಗಿನ ಕಾಲದಲ್ಲಿ ತಂದೆಯ ಡಿಪಾರ್ಟಮೆಂಟನಲ್ಲಿ ನೌಕರಿಯೆಂದರೆ ಮಗನ ಜನ್ಮಸಿದ್ಧ ಹಕ್ಕು. ಅಂತೆಯೆ ನನ್ನ ತಂದೆ ಹಾಗೂ ಬಾಪೂನ ತಂದೆ ಈರ್ವರೂ ಅಂಚೆ ಶಾಖೆಯಲ್ಲಿ ಸೇರಿದರು. ಎಷ್ಟೋ ಸಾರೆ ಒಂದೇ ಊರಲ್ಲಿರುತ್ತಿದ್ದರು. ಎಷ್ಟೋ ಸಾರೆ ಸರಕಾರದವರು ತಂದೆಯವರನ್ನು ಹಳ್ಳಿಗೆ ಹಾಕುತ್ತಿದ್ದರು. ಕೆಲವು ಸಾರೆ ಬಾಪೂನ ತಂದೆಯನ್ನು ಹಳ್ಳಿಗೆ ಅಟ್ಟುತ್ತಿದ್ದರು. ಹೀಗಾಗಿ ನಾವಿಬ್ಬರು ಯಾರು ಪಟ್ಟಣದಲ್ಲಿರುತ್ತಿದ್ದರೊ ಅವರ ಮನೆಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಸಾಗಿಸುತ್ತಿದ್ದೆವು. ಬಾಪೂ ನಮ್ಮ ಮನೆಯಲ್ಲಿದ್ದ. ನಾನು ಅವರಮನೆಯಲ್ಲಿದ್ದೆ. ಆದರೆ ನಾವು ಸಾವಧಾನವಾಗಿ ಮ್ಯಾಟ್ರಿಕ್ ಪಾಸಾಗುವದರೊಳಗಾಗಿ ಕಾಲಮಾನ ಪರಿಸ್ಥಿತಿಯಲ್ಲ ಬದಲಾಗಿ ಹೋಯಿತು. ತಂದೆಯ ಡಿಪಾರ್ಟಮೆಂಟನಲ್ಲಿ ಮಗನಿಗೆ ನೌಕರಿ ಕೊಡಬೇಕೆಂಬುದು ಎಲ್ಲಿಯ ಕಾಯಿದೆ? ಎಂದರು. ಸರಕಾರದವರು ಜನ್ಮಸಿದ್ಧ ಹಕ್ಕಿಗೆ ಎಳ್ಳು ನೀರು ಬಿಡಬೇಕಾಯಿತು. ಇದಲ್ಲದೆ ಗಾಣದ ಎತ್ತಿನಂತೆ ನೌಕರಿ ಮಾಡುವದಕ್ಕಿಂತ ಬೇರೊಂದು ಜೀವನೋಪಾಯ ಹುಡುಕಬೇಕೆಂಬ ಬುದ್ಧಿ— ಅಥವಾ ನಮ್ಮ ಹಿರಿಯರು ಹೇಳುವಂತೆ ದುರ್ಬುದ್ಧಿ— ನಮ್ಮಲ್ಲಿ ಹುಟ್ಟಿತು. ಬಾಪೂ ತನ್ನ ಮ್ಯಾಟ್ರಿಕ್ ಪರೀಕ್ಷೆಯ ಸರ್ಟಿಫಿಕೆಟ್ಟನ್ನು ಕಸದ ಬುಟ್ಟಿಯಲ್ಲಿ ಚೆಲ್ಲಿ ಮೆಣಸಿನ ಕಾಯಿ ಹಾಗೂ ತಂಬಾಕಿನ ವ್ಯಾಪಾರ ಪ್ರಾರಂಭಿಸಿದ. ನಾನು ನನ್ನ ಮ್ಯಾಟ್ರಿಕ್ ಪರೀಕ್ಷೆಯ ಸರ್ಟಿಫಿಕೆಟ್ಟನ್ನು ಶಾಲೆಯಲ್ಲಿಯೇ ಬಿಟ್ಟು ಇಪ್ಪತ್ತು. ಇಪ್ಪತ್ತೈದು ಎಮ್ಮೆಗಳನ್ನು ಕಟ್ಟಿಕೊಂಡು ಒಂದು ದುಗ್ಧಾಲಯವನ್ನು ನಡೆಸತೊಡಗಿದೆ. ನಾವು ನಮ್ಮ ಉದ್ಯೋಗಗಳಲ್ಲಿ ಪ್ರಗತಿ ಹೊಂದಿದೆವೆನೋ ನಿಜ. ಆದರೆ ನಮ್ಮ ಸ್ನೇಹ ಮಾತ್ರ ಕುಗ್ಗಿತು. ನಮ್ಮ ಉದ್ಯೋಗಗಳಂತೆ ನಮ್ಮ ಸ್ವಭಾವಗಳೂ ಭಿನ್ನ ಭಿನ್ನಾದವು. ಎಮ್ಮೆಗಳ ಗೋಜು ಬೇಡವೆಂದೂ ಬಾಪೂನಿಗೆ ಅನಿಸತೊಡಗಿತು. ಮೆಣಸಿನಕಾಯಿ ತಂಬಾಕುಗಳ ಘಾಟು ಬೇಡವೆಂದು ನಾನೆನ್ನತೊಡಗಿದೆ. ಹೀಗಾಗಿ ನಮ್ಮ ಸಂಬಂಧ ಕಡಿದು ಹೋಗಿತ್ತು. ಅವನ ಮದುವೆಯು ನಮ್ಮೂರಲ್ಲಿಯೇ ಆಗುವದಿದ್ದರೂ ನನಗೆ ಅದರ ಸುಳಿವೂ ಹತ್ತಿರಲಿಲ್ಲ.

ಆದರೆ ಬಾಲಮಿತ್ರರ ಮದುವೆಗೆ ಆಮಂತ್ರಣ ಬೇಕೆ? ಔಪಚಾರಿಕ ಆಮಂತ್ರಣದಲ್ಲಾದರೂ ಏನಿದೆ? ಎಂದು ಮುಂತಾಗಿ ವಿಚಾರ ಹಾಕಿ ನಾನೂ ಶ್ಯಾಮೂನೊಡನೆ ಬಾಪೂನ ಮದುವೆಗೆ ಹೊರಟೆ.

× × × ×

ಬಾಪೂನ ಮದುವೆ ನಮ್ಮೂರ ಹೊರಗೆ ಹನುಮನ ಗುಡಿಯಲ್ಲಿ. ನಾನೂ ಶ್ಯಾಮೂ ಅಲ್ಲಿ ಹೋಗುವಷ್ಟರಲ್ಲಿಯೇ ಮಳೆ ಜೋರಿನಿಂದ ಸುರಿಯತೊಡಗಿತು. ಸ್ವಲ್ಪದರಲ್ಲಿ ಪಾರಾದೆವೆಂದ ಶ್ಯಾಮೂ ನನ್ನ ಹೊಸ ಕೊಡೆಯ ಸತ್ವ ಪರೀಕ್ಷೆಗಾಗಿ ಬಂದ ಸುವರ್ಣ ಸಂಧಿ ಜಾರಿ ಹೋಯಿತೆಂದು ನನಗೆನಿಸಿತು. ಹಾಗೇ ಹೇಳಿದೆ.

ಆದರೆ ಕೊಡೆಯ ಪರೀಕ್ಷೆಯ ಸುವರ್ಣ ಸಂಧಿ ಜಾರಿ ಹೋದರೂ ರತ್ನಸಂಧಿಯೊಂದು ತಾನಾಗಿಯೇ ಬಂದಿತು. ನಾವು ಹೋಗಿ ೧೫ ಅಥವಾ ೨೦ ನಿಮಿಷ ಆಗಿರಬಹುದು ಅಥವಾ . ಆಗಿರಲಿಕ್ಕಿಲ್ಲ. ಅಷ್ಟರಲ್ಲಿ ಸೀಮಾಂತಪೂಜೆಯು ಸಲುವಾಗಿ ಬಾಪೂನಿಗೆ ವಿರುದ್ಧ ಪಕ್ಷದ ಥಾವಣಿಯಲ್ಲಿ ಹೋಗಬೇಕಾಯಿತು. ಅದಕ್ಕಾಗಿ ಅವನಿಗೆ ನನ್ನ ಹಾಗೂ ಕೊಡೆಯ ಸಹಾಯಬೇಕಾಯಿತು.

ನಮ್ಮೂರ ಹೊರಗಿನ ಹನುಮನ ಗುಡಿಯನ್ನು ದೇವರ ಸಲುವಾಗಿ ಕಟ್ಟಿದೆ ಮದುವೆಯ ಸಲುವಾಗಿ ನಿರ್ಮಿಸಿದ್ದಾರೆಂದು ಹೇಳಿದರೆ ತಪ್ಪಾಗದು. ಅದನ್ನು ಕಟ್ಟಿಸಿದ ಮಹಾತ್ಮನು ದೇವರಿಗೆ ಅಥವಾ ದೇವರ ಗುಡಿಗೆ ವಿಶೇಷ ಮಹತ್ವ ಕೊಡದೆ ಬೀಗರಿಗೆ ಇಳಿದುಕೊಳ್ಳುವ ಸ್ಥಳ, ಅಡುಗೆಯ ಸಲುವಾಗಿ ದೊಡ್ಡ ಒಲೆಗಳನ್ನು ಹಾಕಲು ಬರುವಂಥ ಕೋಣೆಗಳು, ಒಂದೇ ವೇಳೆಗೆ ೫೦೦ ಜನರು ಊಟಕ್ಕೆ ಕುಳಿತರೂ ಸಾಲುವಂಥ ದೊಡ್ಡ ಅವಾರ, ವಿಶಾಲವಾದ ಬಾವಿ, ಮದುವೆಯ ಸಲುವಾಗಿ ಒಂದು ಮಂಟಪ ಇವುಗಳನ್ನು ಕಟ್ಟಿಸುವ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟಿದ್ದಾನೆಂಬುದು ಒಡೆದು ಕಾಣುತ್ತದೆ. ಇತ್ತೀಚೆಗೆ ಗುಡಿಯ ವಿಶ್ವಸ್ಥರು ಮದುವೆಯ ಸಲುವಾಗಿ ಬಾಡಿಗೆಯಿಲ್ಲದೆ ದೊಡ್ಡ ಪಾತ್ರೆಗಳನ್ನೂ ಮಣೆ ಮೊದಲಾದ ಉಪಕರಣಗಳನ್ನೂ ಪೂರೈಸಲು ಪ್ರಾರಂಭಿಸಿದ್ದಾರೆ. ಹೀಗಾಗಿ ಹನುಮನ ಗುಡಿಯು ಮದುವೆಯ ಗುಡಿಯಾಗಿ ಹೋಗಿದೆ. ಇದನ್ನೆಲ್ಲ ಹೇಳುವ ಕಾರಣವೇನಂದರೆ ಬೀಗರು ಇಳಿಯುವ ಸ್ಥಳಗಳ ಸ್ಥಾನ ಗೊತ್ತಾದರೆ ನನ್ನ ಕೊಡೆಯ ಸತ್ವ ಪರೀಕ್ಷೆಗಾಗಿ ಬಂದ ರತ್ನಸಂಧಿಯ ಕಲ್ಪನೆಯು ವಾಚಕರಿಗೆ ಸಹಜವಾಗಿ ಬರುವದು. ಇರಲಿ.

ಎರಡು ದೊಡ್ಡ ಧರ್ಮಶಾಲೆಗಳಿವೆ. ಒಂದರಲ್ಲಿ ವಧೂಪಕ್ಷವೂ ಇನ್ನೊಂದರಲ್ಲಿ ವರಪಕ್ಷವೂ ಇಳಿಯುವ ರೂಢಿ. ಇವೆರಡರ ನಡುವಿನ ಅಂತರ ಸುಮಾರು ಅರ್ಧ ಫರ್ಲಾಂಗ ಆಗಬಹುದು. ಊರ ಹೊರಗಿನ ಬೈಲು. ಪ್ರಚಂಡ ಗಾಳಿ. ಗಾಳಿಗಿಂತ ಹೆಚ್ಚು ಪ್ರಚಂಡ ಮಳೆ. ಇಂತಹದರಲ್ಲಿ ಸೀಮಾಂತ ಪೂಜೆಗಾಗಿ ಮಾವನ ಮನೆಗೆ ಹೊರಟ ವರನ ಹೊಸ ಮುತ್ತಿಗೆಯುಳ್ಳ ಅರಿವೆಗಳನ್ನು (ಜರದ ಧೋತರ, ರೇಶಿಮೆಯ ಕೋಟು, ಮುಂಡಾಸು ಮೊದಲಾದವುಗಳನ್ನು) ಮಳೆಯಿಂದ ರಕ್ಷಿಸಲು ಒಂದು ಉತ್ಕೃಷ್ಟ ಕೊಡೆ ಬೇಕಾಗಿತ್ತು. ಅದನ್ನು ಗಾಳಿಯಲ್ಲಿ ಗಟ್ಟಿಯಾಗಿ ಹಿಡಿಯಲು ಮುಂಗೈ ಕಸುವಿನವನೊಬ್ಬನೂ ಬೇಕಾಗಿದ್ದ. ಯೋಗಾಯೋಗ.

× × ×

ಬಾಪೂನಿಗೆ ನನ್ನಲ್ಲಿ ವಿಶ್ವಾಸವಿದ್ದಿತು. ನನಗೆ ನನ್ನ ಮುಂಗೈಯಲ್ಲಿ. ನನ್ನ ಮುಂಗೈಗೆ ನನ್ನ ಕೊಡೆಯಲ್ಲಿ ವಿಶ್ವಾಸವಿದ್ದಿತು. ಹೀಗಾಗಿ ನಾನೂ ಬಾಪೂ ಮಳೆಯಲ್ಲಿಯೇ ಹೊರಟೆವು. ಜೊತೆಯಲ್ಲಿ ಕೂಡ ಯಾರೂ ಬರಲಿಲ್ಲ. ಅಷ್ಟು ಗಾಳಿ ಅಷ್ಟು ಮಳೆ. ಬ್ಯಾಂಡಿನವರು ಆಚೆಯ ಧರ್ಮಶಾಲೆಯಲ್ಲಿ ಕುಳಿತು ಅಳಿಯನ ಆಗಮನವನ್ನು ಸೂಚಿಸಲು ಮಂಗಲವಾದ್ಯವನ್ನು ಮೊಳಗಿಸತೊಡಗಿದ್ದರು. ಮಳೆಯಲ್ಲಿ ಗ್ಯಾಸು ದೀಪ ಆರಿಹೋಗಬಹುದೆಂದು ನಮ್ಮ ಕೈಯಲ್ಲಿ ಒಂದು ಸಾಯಕಲ್ಲಿಗೆ ಹಾಕುವ ಚಿಕ್ಕ ಕಂದೀಲನ್ನು ಕೊಟ್ಟಿದ್ದರು. ಆದರೂ ನಾವಿಬ್ಬರೂ ಧೈರ್ಯದಿಂದ ಮಳೆಯಲ್ಲಿ ಸಾಗಿದೆವು. ದಾರಿಯಲ್ಲಿ ನಾನು ಬಾಪೂನಿಗೆ, ನಾನು ಅಂದೇ ಹೊಸ ಕೊಡೆಯನ್ನು ಕೊಂಡೆನೆಂದು ಹೇಳಿದೆ. “ನಿನ್ನ ಸಲುವಾಗಿಯೇ ಕೊಡೆ ಕೊಂಡಂತೆ ಕೊಂಡಿದ್ದೇನೆ,” ಎಂದು ನುಡಿದೆ. ಆದರೆ ಬಾಪೂನ ಮನಸ್ಸು ನಮಗಿಂತ ಮೊದಲು ಮಾವನ ಮನೆ ಸೇರಿದ್ದರಿಂದ ಅವನಿಗೆ ನನ್ನ ಮಾತಿನ ಕಡೆಗೆ ಅಥವಾ ನನ್ನ ಕೊಡೆಯ ಕಡೆಗೆ ಲಕ್ಷ್ಯವಿರಲಿಲ್ಲ. ನಾನು ನನ್ನ ಅರಿವೆಯ ಪರಿವೆ ಮಾಡದೆ ಕೊಡೆಯನ್ನು ಸಂಪೂರ್ಣವಾಗಿ ಬಾಪೂನ ಮೇಲೆಯೇ ಹಿಡಿದು ಅವನನ್ನು ಅವನ ಬೆಲೆಯುಳ್ಳ ವಸ್ತ್ರಗಳನ್ನೂ ಮಳೆಯಿಂದ ರಕ್ಷಿಸಿದೆ. ಐದಾರು ನಿಮಿಷಗಳಲ್ಲಿ ಬೀಗರ ಧರ್ಮಶಾಲೆಯನ್ನು ಮುಟ್ಟಿದೆವು.

× × ×

ಮದುವೆಯಾಗುವವರೆಗೆ ಮದುಮಗನಿಗೆ ಅಳಿಯದೇವರೆನ್ನುವರು. ಅವನನ್ನು ಸ್ವಾಗತಿಸುವರು, ಸತ್ಕರಿಸುವರು. ಆದರೆ ಆ ದಿನ ನಾವು ಬೀಗರ ಧರ್ಮಶಾಲೆಯನ್ನು ಪ್ರವೇಶಿಸಿದಾಗ ನಮ್ಮ ಪಾಲಿಗೆ ಒಂದೂ ಸ್ವಾಗತದ ಶಬ್ದ ಬರಲಿಲ್ಲ. ಎಲ್ಲರೂ ಅಳಿಯನನ್ನು ಮಿಕಿ ಮಿಕಿ ನೋಡುವವರೆ. ನಮಗೆ ಪರಮಾಶ್ಚರ್ಯವಾಯಿತು. ಏನೂ ತಿಳಿಯದಂತಾಯಿತು.

“ ಏನು ಸಮಾಚಾರ? ” ಎಂದು ನಮ್ಮ ಪುರೋಹಿತರನ್ನು ಕೇಳಿದೆವು.

“ ಅಲ್ಲ ಹೀಗಾದರೆ ಸೀಮಾಂತ ಪೂಜೆ ಹೇಗೆ ಮಾಡೋದು ? ” ಎಂದರವರು.

“ಏನಾಗಿದೆ?” ಎಂದ ಬಾಪೂ.

“ಶುಭ ಅಶುಭ ನೋಡಬೇಕಲ್ಲ” ಎಂದರು ಪುರೋಹಿತರು.

“ಎಂಥ ಶುಭ ಅಶುಭ?”, ಎಂದೆ.

“ಅಲ್ಲ ನಾವೆಲ್ಲ ದೊಡ್ಡಬಹುದು, ಅವರಿಗೊಂದು ನಡೆಯಬೇಕಲ್ಲವೆ?” ಎಂದು ಪುರೋಹಿತರು ಪ್ರಶ್ನಿಸಿದರು.

“ಹೀಗೆ ಕಣ್ಣು ಹರಕೊಂಡ ಎಮ್ಮೆಯಂತೆ ಮಾಡದೆ ಅದನ್ನು ಸ್ಪಷ್ಟವಾಗಿ ಹೇಳಬಾರದೆ?,” ಎಂದೆ. ಸಿಟ್ಟನ್ನು ತಡೆಯಾಲವಾಗಲಿಲ್ಲ.

“ಏನು— ಬಾಪೂ ಬಾಯಿಲೆ ಅಷ್ಟ ಜಾರಿದೆ— ಅಳಿಯ ದೇವರ ಅರಿವೆಗಳ ಮೇಲೆಲ್ಲ ಕರಿ— ಅಲ್ಲಲ್ಲಿ ಕೃಷ್ಣವರ್ಣ” ಎಂದರು.

ಬಾಪೂನ ಅರಿವೆಗಳ ಮೇಲೆ ನನ್ನ ದೃಷ್ಟಿಯಿಟ್ಟು ಹಾಯಿಸಿದೆ. ಗ್ಯಾಸಿನ ಬೆಳಕಿನಲ್ಲಿ ಅವನ ರೇಶಿಮೆಯ ಕೋಟಿನ ಮೇಲೆ ಕರಿಯ ಬಣ್ಣ ಇದ್ದದ್ದು ಕಂಡಿತು. ಯಾರೋ ಅವನಿಗೆ ಡಾಂಬರ ಹಚ್ಚಿ ಓಡಿ ಹೋಗಿದ್ದಾರೆನ್ನುವಂತಾಗಿತ್ತು. ಎಲ್ಲವೂ ಒಮ್ಮೆಲೆ ಹೊಳೆಯಿತು.

“ಬಾಪೂ, ನನ್ನ ಹೊಸ ಕೊಡೆ ನಿನ್ನ ಅರಿವೆಗಳನ್ನೆಲ್ಲ ಕೆಡಿಸಿ ಹಾಕಿದೆ. ನನ್ನಿಂದ ದೊಡ್ಡ ತಪ್ಪಾಯಿತು. ಇಂದು ನಾನು ಕೊಡೆ ಕೊಳ್ಳಬಾರದಾಗಿತ್ತು. ಪವಿತ್ರ ಪೋರಬಂದರ ಎಮ್ಮೆಯ ಬಣ್ಣ ಹೋದದ್ದೂ ಕಂಡಿರುವಿರಾ ಎಂದಾದರೂ? ಎಂದು ನನ್ನನ್ನು ಕೇಳಿದ. ಎಮ್ಮೆಯ ಬಣ್ಣ ನಿನ್ನ ಕೋಟಿಗೆ ನಿನ್ನ ಧೋತರಕ್ಕೆ ನಿನ್ನ ಅಂಗಿಗೆ ಬಳಿದದ್ದು ಪ್ರತ್ಯಕ್ಷ ನನ್ನ ಕಣ್ಣ ಮುಂದಿದೆ” ಎಂದು ಮುಂತಾಗಿ ಹೇಳಿ ಬಾಪೂನ ಕ್ಷಮೆ ಬೇಡಿದೆ. “ಇರಲಿ ಬಿಡು” ಎಂದ ಬಾಪೂ. ಬಾಪೂ ಯವಾಗಲೂ ಇಷ್ಟೊಂದು ದೊಡ್ಡ ಮನಸ್ಸಿನವನೆ.

ಅಂದಿನ ದಿನ ಚಿರಸ್ಮರಣೀಯವಾಯಿತು. ಒಬ್ಬರ ಶರ್ಟ, ಇನ್ನೊಬ್ಬರ ಕೋಟು, ಮೂರನೆಯವರ ಧೋತರ—ಉಟ್ಟುಕೊಂಡು ಅಳಿಯ ಸೀಮಾಂತ ಪೂಜೆಗೆ ಕುಳಿತ. ಎಲ್ಲವೂ ನನ್ನದೆ ತಪ್ಪು. ಆದರೇನು ಮಾಡುವದು?

× × ×

ಈ ಮಾತಿಗೆ ಹಳೆಯದಾಗಿ ಹೋಗಿದೆ. ಅಂದು ಆದೊಂದು ತಾಪದಾಯಕವೆನ್ನಿಸಿದ ಸನ್ನಿವೇಶ ಮುಂದೆಯೂ ಅಷ್ಟೇ ಕಷ್ಟದಾಯಕವಾಗಿ ಉಳಿಯಲಿಲ್ಲ. ಎಲ್ಲವೂ ಮರೆತು ಹೋಯಿತು.

ಬಾಪೂನ ಮನೆಗೆ ಮುಂದೊಂದು ತಿಂಗಳಲ್ಲಿ ಚಹಕ್ಕೆಂದು ಹೋದಾಗ ಮಾತ್ರ ಮತ್ತೆ ಅದೇ ವಿಷಯವೆದ್ದಿತು. ಅಷ್ಟೇ ಕಷ್ಟವಾಯಿತು. ಬಾಪೂನ ಮನಸ್ಸು ದೊಡ್ಡದೆಂದು ಮೇಲೆ ಹೇಳಿದೆ. ಆದರೆ ಅವನ ಶ್ರೀಮತಿಯ ಮನಸ್ಸು ಹಾಗಲ್ಲ. ಹಿಂದಿನದನ್ನು ಮರೆತು ಅವಳು ಮುಂದೆ ಸಾಗುವವಳಲ್ಲ ಎಂದೆನಿಸಿತು. ಮದುವೆಯಲ್ಲಿಯ ರೇಶಿಮೆಯ ಕೋಟಿನ ವಿಷಯವನ್ನೆತ್ತಿ ಅವಳು ಹೇಳಿದಳು,“ ಅಯ್ಯೋ ಎಷ್ಟು ಉತ್ತಮವಾದ ಕೋಟು ಹಾಳಾಗಿ ಹೋಯಿತಲ್ಲ!” ನಾನು ನಡುಗಿದೆ.

“ನಾವು ಎಷ್ಟು ವಿಧದಲ್ಲಿ ಪ್ರಯತ್ನಿಸಿದರೊ...” ಎಂದು ಅವಳು ಮಾತನ್ನು ಮುಂಬರಿಸಿದಳು. “ ನನ್ನದೆ ತಪ್ಪು ಕ್ಷಮಿಸಿ ಬಿಡಬೇಕು ಮಹಾದೇವಿ ” ಎಂದು ಹೇಳಿಕೊಳ್ಳಬೇಕೆಂದೆನಿಸಿತು. ಆದರೆ ಅವಳು ನನಗೆ ಅವಕಾಶ ಕೊಡದೆ ತನ್ನ ಮಾತನ್ನೆ ಮುಂದೆ ಮಾಡಿದಳು.

“ಕೋಟಿನ ಮೇಲಿನ ಕಪ್ಪು ಕಲೆಗಳನ್ನು ಹೋಗಿಸಲು ಕೋಟನ್ನು ಹತ್ತಿಪ್ಪತ್ತು ಸಾರೆ ಒಗೆದು ನೋಡಿದೆ. ಗಂಜಿಹಾಕಲುಕೊಟ್ಟೆ. ಎಲ್ಲ ಅಗಸರಲ್ಲೂ ಒಮ್ಮೆಮ್ಮೆ ಕಳಿಸಿ ನೋಡಿದೆ. ಸೈನ್ಯ ಶಾಖೆಯಲ್ಲಿಕೆಲಸ ಮಾಡಿ ಮರಳಿಬಂದ ಅಗಸನು ಅದನ್ನು ಮಿಲಟರಿ ಪದ್ಧತಿಯಿಂದ ಭಟ್ಟಿಗೆ ಹಾಕಿ ನೋಡಿದ. ಏನೂ ಪ್ರಯೋಜನವಾಗಲಿಲ್ಲ. ಎಂಥ ಉತ್ತಮ ಕೋಟು...”

“ಹೌದು ಆ ದಿನ ನಾನೇ ನನ್ನ ಹೊಸ ಕೊಡೆ...”

“ಎಂಥ ಉತ್ತಮ ಕೋಟು ಹಾಳಾಗಿ ಹೋಯಿತಲ್ಲ ಎಂದುಕೊಂಡೆ. ಅಯ್ಯೊ ಈ ಕಲೆಗಳ ಬಣ್ಣ ಪಕ್ಕಾ ಇದೆ, ಅದು ಹೋಗುವದಿಲ್ಲ ಎಂದ ಮಿಲಿಟರಿ ಅಗಸ. ಅಗಸರ ಗೋಜು ಬಿಟ್ಟು ನಾನೇ ಅದನ್ನು ಕುದಿಹಾಕಿದೆ. ಕಾಸ್ಟಿಕ್ ಸೋಡಾ ಕೂಡ ಹಾಕಿ ಪ್ರಯೋಗ ಮಾಡಿದೆ; ಏನೂ ನಡೆಯಲಿಲ್ಲ.

“ ಅಲ್ಲಿಯೋ ಕೈಯೂರಿದಂತೆ ಆಗಿತ್ತು. ಆದರೆ ಪ್ರೊ. ಜಿಮುಕರರು ಅದನ್ನು ತಮ್ಮ ಪ್ರಯೋಗಶಾಲೆಗೆ ಒಯ್ದು ಅದರ ಮೇಲೆ ಸಲ್ಫರ ನಾಯ ಆಕ್ಸಾಯಿಡ ಹಾಗೂ ಕ್ಲೋರಿನ ವಾಯು ಪ್ರಯೋಗಿಸಿದರು. ಅವರಿಂದ ಎಂಥ ಬಣ್ಣವಾದರೂ ಬೆಳ್ಳಗೆ ಆಗಲೆಬೇಕೆಂದು ವಾದಿಸಿದರು. ಆದರೆ ಕಲೆಗಳು ಹಾಗೆಯೇ ಉಳಿದವು; ಮಾಸಲಿಲ್ಲ. ಆದರೆ ಈ ವಾಯುಗಳ ಪರಿಣಾಮವಾಗಿ ಕೋಟಿನ ಉಳಿದ ಭಾಗವೆಲ್ಲ ಶುಭ್ರವಾಗಿ ನಿಂತಿದೆ. ಮತ್ತು ಆ ಶುಭ್ರ ಬಣ್ಣದಲ್ಲಿ ಕಲೆಗಳು ಮತ್ತಷ್ಟು ಎದ್ದು ಕಂಡವು.”

“ಇದೀ ಕೋಟಿಕ್ಕೆ ಕರಿ ಬಣ್ಣದಲ್ಲಿ ಏಕೆ ಅದ್ದಬಾರದು?” ಎಂದು ನಾನು ಸೂಚಿಸಿದೆ.

“ಅದನ್ನೂ ಮಾಡಿಯಾಯಿತು” ಎಂದಳು ಶ್ರೀಮತಿ ಬಾಪೂ, “ಆದರೆ ಕಲೆಗಳು ಆ ಬಣ್ಣದಲ್ಲಿಯೂ ಎದ್ದು ಕಾಣುತ್ತಿವೆ; ಇನ್ನೇನು ಮಾಡಬೇಕು ತಿಳಿಯುಲೊಲ್ಲದು.”

—ಗಣೇಶ ಭಟ್ಟ

Reg. No. B. 3148

LICENCE No 3
Licenced to Post without Prepayment

Karmaveer 21-7-47



ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಡೆ, ಭವಿಷ್ಯಕಥನ ಆಫೀಸ ಖಡೇಬಜಾರ ಬೆಳಗಾವಿ

ಜುಲೈ ೨೧ ರಿಂದ ೨೭ ರ ವರೆಗೆ

ಮೇಷ

ಸ್ವತಃ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆ ಬಹಳ ಕ್ಲೇಶ. ಅವಾಂತರ ವಿಷಯುಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ ತರಹದ್ದು. ಉದ್ಯೋಗದಲ್ಲಿ ಪ್ರಗತಿ ಉತ್ತಮ ಆದರೆ ಪ್ರತಿಷ್ಠೆ ಮತ್ತು ಲಾಭ ಆಯುತ್ತ ಹೊತ್ತಿಗೆ ಕೈಮೀರಿ ಹೋಗುವಂತೆ ಹುಚ್ಚುತನ ಪ್ರತಿಯೊಂದು ವಿಷಯದಲ್ಲಿ ಮನಸ್ಸಿಗೆ ಅಸ್ವಸ್ಥತೆಯನ್ನುಂಟುಮಾಡುವ ಘಟನೆ. ಬಂಧುವರ್ಗದವರಲ್ಲಿ ಮಾತ್ರ ಉತ್ಕರ್ಷ ಮಿತ್ರರಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಶಿರರ್ಥಕ ವೆಚ್ಚದ ಪ್ರಸಂಗ ಬಹಳ ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಭರಣಿಗೆ ಹೆಚ್ಚು ತೊಂದರೆ ತಾ. ೨೧, ೨೫, ೨೬ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಪ್ರಾಪಂಚಿಕ ಸುಖ ವಿಶೇಷ ಸಮಾಧಾನದ್ದು. ಮಕ್ಕಳಿಂದ ಅತಿ ಸಮಾಧಾನದ ಕೆಲ ಸಂಗತಿಗಳು ಸಂಭವಿಸುವದರಿಂದ ಮನಸ್ಸು ಸುಖನಿಮಗ್ನವಾಗುವದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಕಿರಕಳ ವೆಚ್ಚ ಸಂತೋಷವಿಲ್ಲದೆ ಮಾಡುವ ಪ್ರಸಂಗ. ಅನೇಕ ಸಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರರಿಂದ ಅಪ್ರಿಯ ಸಂಗತಿಗಳು. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆದರೆ ರೋಹಿಣಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೩, ೨೪, ೨೬ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಮಕ್ಕಳಲ್ಲಿ ಒಬ್ಬರ ಭಾಗ್ಯವೃದ್ಧಿ ಬಹಳ. ಆದರೂ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ, ಆದರೆ ಲಾಭ ಬಹಳ ಕಡಮೆಯಾಗಿ ವೆಚ್ಚದರಾಶಿ ಹೆಚ್ಚುತ್ತ ಹೋಗುವದು. ನಿರ್ಥಕ ಕಲಹದ ಪ್ರಸಂಗ. ಮಿತ್ರತ್ವದಲ್ಲಿ ದೊಡ್ಡ ವಿರೋಧ. ಪ್ರವಾಸ ಅತಿ ತೊಂದರೆಯದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಆರಿದ್ರಾಕ್ಕೆ ಹೆಚ್ಚು ತೊಂದರೆ. ತಾ. ೨೧, ೨೫, ೨೬, ಅನುಕೂಲ.

ಕರ್ಕ

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿಯದು ನಾದುರುಸ್ತ. ಅಲ್ಲದೆ ಉಭಯತರಲ್ಲಿ ಸಣ್ಣದೊಡ್ಡ ವಿಷಯುಗಳಲ್ಲಿ ಪ್ರತಿಕ್ಷಣಕ್ಕೆ ವಿರೋಧ. ಬಹುತರ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಕಡಮೆ ಇದ್ದರೂ ಅದು ಬಹಳ ಉತ್ತಮವಿದೆಂದು ಸುದ್ದಿ ಎಬ್ಬಿಸುವ ಅಸರಿಹಾರ್ಯ ಪ್ರಸಂಗ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚವೂ ಭಾರದ್ದು. ಮಿತ್ರ ಜರೂರಿಗಿಂತ ಜೈನಿಯಲ್ಲಿ ಮತ್ತು ನಿರರ್ಥಕ ದೊಡ್ಡಸ್ತಿಕೆಕ್ಕಾಗಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವಿರುದ್ಧ ಸ್ಥಿತಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯಕ್ಕೆ ತೊಂದರೆ ಹೆಚ್ಚು. ತಾ. ೨೧, ೨೨, ೨೭ ಅನುಕೂಲ.

ಸಿಂಹ

ಪ್ರಕೃತಿ ಮತ್ತು ಸ್ತ್ರೀಸುಖ ಇವುಗಳ ಸಂಬಂಧದಲ್ಲಿ ಬಹಳ ಕೆಡುವದು. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ಅಳದಕ್ಕಿಗೆ ಬಂದದ್ದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪಯಶಸ್ಸು ಇಲ್ಲವೆ ಪ್ರತಿಕೂಲತೆ. ಮಿತ್ರಸುಖ ಅನುಕೂಲ. ಸ್ಥಾವರದಲ್ಲಿ ಹೊಸ ಹೆಚ್ಚಳ. ಪ್ರವಾಸಾದಿ ಕೆಲಸ ಹಿತದ್ದು. ಪೂರ್ವಾಕ್ಕೆ ಹೆಚ್ಚು ತೊಂದರೆ ತಾ. ೨೩, ೨೪, ೨೫ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೂ ಹೆಂಡತಿಯ ಕಿರಕಳ ಕಾಯಿಲೆಯ ತಕರಾರು ಇದ್ದದ್ದೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ದೊಡ್ಡಸ್ತನ ತೋರಿಸುವದಕ್ಕಾಗಿ ಮನಸ್ಸಿಗೆ ಬಂದಂತೆ ವೆಚ್ಚ ಮಾಡುವದು. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಕೂಲ. ಪ್ರವಾಸಾದಿ ಕೆಲಸ ಹಿತದ್ದು. ಹಸ್ತಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೩, ೨೪, ೨೫ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ, ಆದರೆ ಹೆಂಡತಿಯ ಪ್ರಕೃತಿ ಬಹಳ ಕೆಡುವದು. ಮಕ್ಕಳಲ್ಲಿ ಒಬ್ಬರಿಗೆ ಬಹಳ ಅಪಕರ್ಷ. ಬಹುತರ ವಿಷಯುಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ ಆಗುತ್ತ ನಡೆಯುವದು. ಮಂತ್ರಜ್ಞಲ ಮತ್ತು ವಿತಂಡವಾದದ ಅತಿಥಿಗಳು ಬರುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಬಹಳ ಕುಂದುತ್ತ ನಡೆಯುವದು ಮಿತ್ರರಿಂದ ಮೋಸ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಸ್ವಾತಿಗೆ ಹೆಚ್ಚು ತೊಂದರೆ, ತಾ. ೨೧, ೨೫, ೨೬ ಅನುಕೂಲ.

ವೃಶ್ಚಿಕ

ಪ್ರಕೃತಿ ಅನುಕೂಲ. ಕೌಟುಂಬಿಕ ಸುಖ ಸಾಧಾರಣವೆ. ಮಕ್ಕಳು ಮತ್ತು ಹೆಂಡತಿ ಮನಸ್ಸಿಗೆ ಹತ್ತುವಂಥ ಜುಜ್ಬು ಮಾತಾಡುವರು. ಉದ್ಯೋಗದಲ್ಲಿ ದೊಡ್ಡ ಪ್ರಗತಿ ಮತ್ತು ತುಂಬ ಲಾಭ, ಅವಚಿತ ಲಾಭದ ಸಂಭವವೂ ಇದೆ. ಆದರೆ ಒಬ್ಬನಿಂದ ಮಾತ್ರ ಅಪ್ರತಿಷ್ಠೆಯ ಅಂಜಿಕೆ, ಮಿತ್ರ ಸುಖ ಉತ್ತಮ. ಬಂಧುವರ್ಗದವರಲ್ಲಿ ಒಬ್ಬರಿಗೆ ಬಹಳ ಕ್ಲೇಶ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ಕಿಂಚಿತ್ ಕೆಲಸದ ಸಲುವಾಗಿ ಅತಿ ವೆಚ್ಚ ಮತ್ತು ಮಹತ್ಪ್ರಯಾಸ. ಹೊಸ್ಸ ಜನರ ಭೆಟ್ಟಿ. ಪ್ರವಾಸಾದಿ ಕೆಲಸ ಕಷ್ಟಸಾಧ್ಯ. ಅನುರಾಧೆಗೆ ಬಹಳ ತೊಂದರೆ. ತಾ. ೨೧, ೨೨, ೨೩, ೨೪ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ ಆದರೆ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಮಕ್ಕಳು ಶತ್ರು ಮತ್ತು ಸಂಕಟಗಳಿಗೆ ಉತ್ತೇಜನ ಕೊಡುವಂಥ ಕೃತ್ಯಗಳನ್ನು ಮಾಡುವರು. ಉದ್ಯೋಗದಲ್ಲಿ ಪ್ರಗತಿ ಸಾಮಾನ್ಯ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರಸುಖ ವಿಶೇಷ ಸಮಾಧಾನದ್ದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ಪಷ್ಟವಾಗಿ ತೋರುವ ವಿಜಯ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಪೂರ್ವಾಷಾಢಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೩, ೨೪, ೨೫, ೨೬ ಅನುಕೂಲ.

ಮಕರ

ನಿಮ್ಮ ಪ್ರಕೃತಿಯಲ್ಲಿ ಸಾಧಾರಣ ಕುರಕುರಿ. ಆದರೆ ಹೆಂಡತಿಯದು ಬಹಳ ಕೆಡುವ ಸಂಭವ. ನಿಮು ನಿಮ್ಮಲ್ಲಿ ಮತಭೇದ ವಿಪರೀತ. ಉದ್ಯೋಗದಲ್ಲಿ ಲಾಭ ಉತ್ತಮ. ಪ್ರಗತಿ ಮತ್ತು ಪ್ರತಿಷ್ಠೆ ಸಾಧಾರಣ. ಅ-ರಲ್ಲಿಯೂ ನೋಕರ ಜನರಿಗೆ ತೊಂದರೆ ಹೆಚ್ಚು. ಮಕ್ಕಳಲ್ಲಿ ಒಬ್ಬರ ಬಹಳ ಉಪದ್ರವದ ಕೆಲಸ ಮಾಡುವದರ ಭೀತಿ. ಪ್ರವಾಸಾದಿ ಕೆಲಸ ತೊಂದರೆಯದು ಶ್ರವಣಕ್ಕೆ ಹೆಚ್ಚು ತೊಂದರೆ. ತಾ. ೨೫, ೨೬, ೨೭ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಕಾಯಿಲೆಯಿಂದಾದರೆ ಹೆಂಡತಿಯದು ಅಪಘಾತದಿಂದ ಕೆಡುವ ಸಂಭವ. ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಆದರೆ ಸ್ಥಾವರದಲ್ಲಿ ಸ್ವಲ್ಪ ಹಾನಿ ಮಿತ್ರಸುಖ ಉತ್ತಮ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಎರಡೂ ಪಕ್ಷಗಳ ಹಾನಿಯಾಗುವಂಥ ಅಂಜಿಕೆ ಇದ್ದದೆ. ಹೆರೆಯುವರೊಡನೆ ಬಹಳ ವ್ಯಾಜ್ಯವಾಗುವ ಅಂಜಿಕೆ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಿಕೆಗೆ ತೊಂದರೆಯಿಂದಲೆ ಯಶಸ್ಸು. ತಾ. ೨೧, ೨೫, ೨೬, ೨೭ ಅನುಕೂಲ.

ಮೀನ

ಪ್ರಕೃತಿ ಸಾಧಾರಣವೆ ಆದರೆ ಸ್ತ್ರೀಸುಖ ಉತ್ತಮ ಮಕ್ಕಳಿಂದ ಮನಸ್ಸಿನ ವಿರುದ್ಧ ಸಂಗತಿ ಬಹಳ ಆಗುವದರಿಂದ ಎಲ್ಲರ ಮನಸ್ಸೂ ಬಹಳ ಪ್ರಕ್ಷುಬ್ಧ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಪ್ರತಿಷ್ಠೆ ಡಳಮಳಿಸುವದು. ಮಿತ್ರತ್ವದಲ್ಲಿ ವಿರೋಧ. ಅನೇಕ ವಿಷಯುಗಳಲ್ಲಿ ವಿಪರೀತ ಬುದ್ಧಿಯಾಗುವದರಿಂದ ಅದರಲ್ಲಿಯ ಯಶಸ್ಸು. ನೋವು ಕೊಡುವಂಥದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೩, ೨೪, ೨೬ ಅನುಕೂಲ.

ಜವಳಿ ಧೋರಣದ ಪುನಃ ಪರಿಶೀಲನೆ

ಶ್ರೀ ರಾಜಗೋಪಾಲಾಚಾರಿಯವರು ಇದೇ ೨೮ ಕ್ಕೆ ಕರೆದ ಪ್ರಾಂತಿಕ ಮಂತ್ರಿಗಳ ಪರಿಷತ್ತಿನಲ್ಲಿ ಕೇಂದ್ರ ಸರಕಾರದ ಜವಳಿ ಧೋರಣೆಯ ಪುನಃ ಪರಿಶೀಲನೆಯಾಗುವುದೆಂದು ತಿಳಿದುಬಂದಿದೆ.

ಈ ವಾರದ ಕಥೆ

ಪಕ್ಕಾ ಬಣ್ಣ

(೧೫ನೇ ಪುಟದಿಂದ)

“ಒಂದೇ ಒಂದು ಉಪಾಯ. ಅಮಾಸಿಯ ದಿನ ಸರಿರಾತ್ರಿಯಲ್ಲಷ್ಟೇ ಕೋಟನ್ನು ಉಪಯೋಗಿಸಿದರಾಯಿತು” ಎಂದ ಬಾಪೂ.

ಎಂಥ ಅಗಾಧ ಬಣ್ಣವಿರಬಹುದೆಂದು ಕ್ಷಣಕಾಲ ವಿಚಾರದಲ್ಲಿ ಮಗ್ನನಾದೆ. ನಿಜವಾಗಿಯೂ ಶ್ರೀ ಪೋರವಂದರನು ಹೇಳಿದಂತೆ ಪಕ್ಕಾ ಬಣ್ಣವೆ ಇರಬೇಕಿದು. ಅದನ್ನು ತಯಾರಿಸಿದವನ ಬುದ್ಧಿ ಸಾಮಾನ್ಯವಲ್ಲ.

“ನಾನು ಒಂದೇ ಉಪಾಯ ಸೂಚಿಸುತ್ತೇನೆ ಇದಕ್ಕೆ” ಎಂದೆ, “ಶ್ರೀ ಪೋರವಂದರನಿಗೆ, ಅಂದರೆ ನನಗೆ ಕೊಡೆ ಕೊಟ್ಟ ಅಂಗಡಿಕಾರನಿಗೆ, ಒಂದು ಸರ್ಟಿಫಿಕೆಟ ಕೊಡೋಣ”

“ಆ??”, ನೂತನ ದಂಪತಿಗಳು.

“ಅವನ ಕೊಡೆಯ ಬಣ್ಣ ಪಕ್ಕಾ ಎಂದು ಅದರಲ್ಲಿ ಶಿಫಾರಸು ಮಾಡೋಣ” “ಕಲೆಗಳನ್ನು ಹೋಗಿಸುವದು ಅಶಕ್ಯವೆ?”-ಶ್ರೀಮತಿ ಬಾಪೂ.

“ಅಯ್ಯೊ ಎಮ್ಮೆಯ ಬಣ್ಣ ಹೋಗಿಸಬಹುದೆ?” ನಾನು.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.